KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಏಪ್ರಿಲ್ ೨೨, ೨೦೧೦ (ವೈಶಾಖ ೨, ಶಕ ವರ್ಷ ೧೯೩೨)	ಸಂಚಿಕೆ ೧೬

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

COMMERCE AND INDUSTRIES SECRETARIAT

Sub : Approval to the Project Proposal of M/s. Rajashree Cements, to enhance Cement Plant Capacity from 4.20 MTPA to 8.45 MTPA & Captive Power Plant Capacity from 90 MW to 130 MW in Sedam Taluk, Gulbarga District.

Read : 1. Govt. Order No. CI 167 SPI 2001, dated 30-11-2001.

2. Proceedings of the 20th State High Level Clearance Committee (SHLCC) meeting held on 05-01-2010.

Preamble:

M/s. Rajashree Cements,proposes to enhance Cement Plant Capacity from 4.20 MTPA to 8.45 MTPA & Captive Power Plant Capacity from 90 MW to 130 MW in Sedam Taluk, Gulbarga District, with an investment of Rs.3000 crores, generating employment to about 400 persons.

In the 20th State High Level Clearance Committee (SHLCC) meeting held on 05-01-2010 the proposal of Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following order :

Government Order No. CI 30 SPI 2010, Bangalore, Dated 25th February 2010

Government is pleased to accord in principle approval for the project proposal of M/s. Rajashree Cements, to enhance Cement Plant Capacity from 4.20 MTPA to 8.45 MTPA & Captive Power Plant Capacity from 90 MW to 130 MW in Sedam Taluk, Gulbarga District, with an investment of Rs.3000 crores, generating employment to about 400 persons and extend the following infrastructure facilities, incentives and concessions.

INFRASTRUCTURE FACILITIES :

1. **Land :** Revenue Department to permit purchase of 573.15 acres for plant area and 398.23 acres for mining area – U/s. 109 of KLR Act and conversion of the same for industrial use.
2. **Power :** 10,000 KVA power to be serviced from GESCOM.
3. **Water :** 3.50 MLD from Kagina River.
4. **Incentives and Concessions :** An applicable under New Industrial Policy 2009-14.

GENERAL TERMS AND CONDITIONS :

1. **MOU :**.The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with Government policy of Employment to local people i.e., Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a) The project proponents shall provide employment to atleast one member of the family of each land looser as the land is being acquired through KIADB.
   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c) The promoters shall take all statutory and other necessary clearnances from the competent authorities including GOI and shall submit milestones/progress in implementation of the project reqularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

Aparna Pavate,
Desk Officer (Technical Cell),
Commerce & Industries Department

PR. 602

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಹೊಸದಾಗಿ ಯಾದ್ಗಿರ್ ಜಿಲ್ಲೆಯನ್ನು ರಚಿಸಿರುವುದರಿಂದ ಹೊಸ ಕೈಗಾರಿಕಾ ನೀತಿ 2009-14 ಕ್ಕೆ ತಿದ್ದುಪಡಿ ಮಾಡುವ ಕುರಿತು.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಸಿಐ 233 ಎಸ್‌ಪಿಐ 2008, ದಿನಾಂಕ 28-02-2009.
2. ಸರ್ಕಾರಿ ಆದೇಶ ಸಂಖ್ಯೆ : ಆರ್‌ಡಿ 59 ಭೂದಾಪು 2008, ದಿನಾಂಕ 26-12-2009.

ಪ್ರಸ್ತಾವನೆ :

ಕರ್ನಾಟಕ ಸರ್ಕಾರವು ಹೊಸ ಕೈಗಾರಿಕಾ ನೀತಿ 2009-14 ನ್ನು ಫೆಬ್ರುವರಿ 2009 ರಲ್ಲಿ ಪ್ರಕಟಿಸಿದ್ದು, ಕೈಗಾರಿಕೆಗಳಿಗೆ ವಿವಿಧ ಉತ್ತೇಜನ/ರಿಯಾಯಿತಿಗಳನ್ನು ನೀಡಲು ರಾಜ್ಯದ ಒಟ್ಟು 176 ತಾಲ್ಲೂಕುಗಳನ್ನು 4 ವಲಯಗಳಾಗಿ ಅನುಬಂಧ-1 ರಂತೆ ವಿಂಗಡಿಸಿರುತ್ತದೆ. ಅವಿಭಜಿತ ಗುಲ್ಬರ್ಗಾ ಜಿಲ್ಲೆಯ 9 ತಾಲ್ಲೂಕುಗಳನ್ನು ವಲಯ-1 ಹಾಗೂ ಗುಲ್ಬರ್ಗಾ ತಾಲ್ಲೂಕನ್ನು ವಲಯ-3 ಎಂದು ಅನುಬಂಧ-1 ರಲ್ಲಿ ಈ ಕೆಳಗಿನಂತೆ ತೋರಿಸಲಾಗಿದೆ.

ಕ್ರ. ಸಂ.	ಜಿಲ್ಲೆ	ತಾಲ್ಲೂಕುಗಳು	ವಲಯ-1	ವಲಯ-2	ವಲಯ-3	ವಲಯ-4
			ಅತ್ಯಂತ ಹಿಂದುಳಿದ	ಅತಿ ಹಿಂದುಳಿದ	ಹಿಂದುಳಿದ	ಕೈಗಾರಿಕೆಯಲ್ಲಿ ಮುಂದುವರೆದ
20	ಗುಲ್ಬರ್ಗಾ	10	ಸೇಡಂ ಶೋರಾಪುರ ಯಾದ್ಗಿರ್ ಚಿತಾಪುರ್ ಅಫ್ಜಲ್‌ಪುರ ಶಾಹಪುರ್ ಅಳಂದ್ ಚಿಂಚೋಳಿ ಜೇವರ್ಗಿ	--	ಗುಲ್ಬರ್ಗಾ	--

2. ಅತೀ ಕಡಿಮೆ ಮಾನವ ಅಭಿವೃದ್ಧಿ ಸೂಚ್ಯಂಕ ಹೊಂದಿದ ಜಿಲ್ಲೆಗಳಲ್ಲಿ ಬಂಡವಾಳ ಹೂಡಿದ ಕೈಗಾರಿಕೆಗಳಿಗೆ ವಿಶೇಷ ರಿಯಾಯಿತಿ ಮತ್ತು ಉತ್ತೇಜನಗಳನ್ನು ಪ್ರಕಟಿಸಲಾಗಿದ್ದು, ಅನುಬಂಧ-2 (11) ರಲ್ಲಿ ಈ ಸೌಲಭ್ಯಕ್ಕೆ ಅರ್ಹವಾದ 6 ಜಿಲ್ಲೆಗಳನ್ನು ನಮೂದಿಸಲಾಗಿದೆ.

ಕ್ರ.ಸಂ.	ಜಿಲ್ಲೆಗಳು	HDI (2001)
1	ಬಾಗಲಕೋಟೆ	0.591
2	ಬಿಜಾಪುರ	0.589
3	ಕೊಪ್ಪಳ	0.582
4	ಚಾಮರಾಜನಗರ	0.576
5	ಗುಲ್ಬರ್ಗಾ	0.564
6	ರಾಯಚೂರು	0.547

3. ಉಲ್ಲೇಖದ (2) ರಂತೆ ಹೊಸದಾಗಿ ಯಾದ್ಗಿರ್ ಜಿಲ್ಲೆಯನ್ನು ರಚಿಸಿದ್ದರಿಂದ ಹೊಸ ಕೈಗಾರಿಕಾ ನೀತಿ 2009-14 ರ ಅನುಬಂಧ-1 ಹಾಗೂ ಅನುಬಂಧ-2(11) ಕ್ಕೆ ತಿದ್ದುಪಡಿಯ ಅವಶ್ಯಕತೆ ಇರುತ್ತದೆ. ಆದುದರಿಂದ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಸಿಐ 233 ಎಸ್‌ಪಿಐ 2008, ಬೆಂಗಳೂರು, ದಿನಾಂಕ 25ನೇ ಫೆಬ್ರವರಿ 2010

ಸರ್ಕಾರವು ಈ ಕೆಳಕಂಡಂತೆ ತಿದ್ದುಪಡಿ ಆದೇಶ ಹೊರಡಿಸುತ್ತದೆ.

ಹೊಸ ಕೈಗಾರಿಕಾ ನೀತಿ 2009–14 ರ ಅನುಬಂಧ–1ರ ಕ್ರಮ ಸಂಖ್ಯೆ 20 ರಲ್ಲಿಯ ಅವಿಭಜಿತ ಗುಲ್ಬರ್ಗಾ ಜಿಲ್ಲೆಯ 10 ತಾಲ್ಲೂಕುಗಳನ್ನು ಮರುವಿಂಗಡಿಸಿ, ಈ ಕೆಳಕಂಡಂತೆ ಓದಿಕೊಳ್ಳುವುದು.

ಕ್ರ. ಸಂ.	ಜಿಲ್ಲೆ	ತಾಲ್ಲೂಕುಗಳು	ವಲಯ–1 ಅತ್ಯಂತ ಹಿಂದುಳಿದ	ವಲಯ–2 ಅತಿ ಹಿಂದುಳಿದ	ವಲಯ–3 ಹಿಂದುಳಿದ	ವಲಯ–4 ಕೈಗಾರಿಕೆಯಲ್ಲಿ ಮುಂದುವರೆದ
20 (ಅ)	ಗುಲ್ಬರ್ಗಾ	07	ಸೇಡಂ ಚಿತಾಪುರ್ ಅಫ್ಜಲ್‌ಪುರ ಅಳಂದ್ ಚಿಂಚೋಳಿ ಜೇವರ್ಗಿ	––	ಗುಲ್ಬರ್ಗಾ	––
20 (ಬಿ)	ಯಾದ್ಗಿರ್	03	ಯಾದ್ಗಿರ್ ಶಾಹಪುರ್ ಶೋರಾಪೂರ	––	––	––

2. ಅನುಬಂಧ–2 (11) ರಲ್ಲಿ ವಿವರಿಸಿದ ಕಡಿಮೆ ಮಾನವ ಅಭಿವೃದ್ಧಿ ಸೂಚ್ಯಂಕ ಇರುವ ಜಿಲ್ಲೆಗಳ ಪಟ್ಟಿಯನ್ನು ಈ ಕೆಳಕಂಡಂತೆ ಓದಿಕೊಳ್ಳುವುದು.

ಕ್ರ.ಸಂ.	ಜಿಲ್ಲೆಗಳು	HDI (2001)
1	ಬಾಗಲಕೋಟೆ	0.591
2	ಬಿಜಾಪುರ	0.589
3	ಕೊಪ್ಪಳ	0.582
4	ಚಾಮರಾಜನಗರ	0.576
5	ಗುಲ್ಬರ್ಗಾ	0.564*
6	ಯಾದ್ಗಿರ್	
7	ರಾಯಚೂರು	0.547

(*ಪ್ರತ್ಯೇಕ ಸೂಚ್ಯಂಕ ಲಭ್ಯವಿರುವುದಿಲ್ಲ)

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಅಪರ್ಣ ಪಾವಟೆ,
ಪೀಠಾಧಿಕಾರಿ (ತಾಂ. ಕೋ),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಪಿ.ಆರ್.–603

COMMERCE AND INDUSTRIES SECRETARIAT

Sub : Amendment to the Karnataka Industrial Policy 2009-14 consequent to the creation of Yadgir district-reg.

Read : 1. Government Order No. CI 233 SPI 2008, dated 28-02-2009.
2. Government Order No. RD 59 BHUDAPU 2008, dated 26-12-2009..

Preamble:

Government of Karnataka has announced a New Industrial Policy 2009-14, in Feb 2009 and classified 176 taluks of the State into 4 zones as per Annexure-1 for extending incentives and concessions. 9 Taluks of undivided Gulbarga district were classified in to zone-1 and Gulbarga Taluk into a zone-3 as per Annexure-1 shown below :

Sl. No.	Districts	Total No. of Taluks	Zone-1	Zone--2	Zone--3	Zone--4
			(Most Backward Taluks)	(More Backward Taluks)	(Backward Taluks)	(Industrially Developed Taluks)
20	Gulbarga	10	Sedam Shourapur Yadgir Chitapur Afzalpur Shahapur Aland Chincholi Jewargi	--	Gulbarga	--

2. While announcing special incentives for investments in districts of low Human Development Index, the low HDI districts as listed in Annexure-2 (11) is shown below :

Sl.No.	District	HDI* (2001)
1	Bagalkot	0.591
2	Bijapur	0.589
3	Koppal	0.582
4	Chamarajanagar	0.576
5	Gulbarga	0.564
6	Raichur	0.547

3. Consequent to the formation of Yadgir District vide (2) read above, the Annexure-1 and Annexure-2(11) of New Industrial Policy need amendments.

Hence the following order :

Government Order No. CI 233 SPI 2008 (P), Bangalore, Dated 25th February 2010

Government is pleased to make the following amendment.

1. The classification of the 10 taluks of undivided Gulbarga district appearing in Annexure-1 of the New Industrial Policy 2009-14 at sl.no. 20 shall be read as :

Sl. No.	Districts	Total No. of Taluks	Zone-1	Zone--2	Zone--3	Zone--4
			(Most Backward Taluks)	(More Backward Taluks)	(Backward Taluks)	(Industrially Developed Taluks)
20 (a)	Gulbarga	07	Sedam Chitapur Afzalpur Aland Chincholi Jewargi	--	Gulbarga	--
20 (b)	Yadgir	03	Yadgir Shahapur Shourapur	--	--	--

2. The table of low HDI districts at Annexure-2 (11) shall be read as :

Sl.No.	District	HDI (2001)
1	Bagalkot	0.591
2	Bijapur	0.589
3	Koppal	0.582
4	Chamarajanagar	0.576
5	Gulbarga	0.564*
6	Yadgir	
7	Raichur	0.547

(*Separate HDI not available)

By Order and in the name of the Governor of Karnataka,

Aparna Pavate,
Desk Officer (Technical Cell),
Commerce & Industries Department

PR. 604

COMMERCE AND INDUSTRIES SECRETARIAT

Sub : Approval to the Project Proposal of M/s. RBSSN Ferrous Industries Pvt. Ltd., to setup a "0.6 MTPA Iron Oxide Pellets & 18 MW Thermal Power Plant" in Hampapatna, Vardkapur, Vayasapur & Morabihal Village of Hagaribommanahalli Taluk, Bellary District.

Read : Proceedings of the 20th State High Level Clearance Committee (SHLCC) meeting held on 05-01-2010.

Preamble:

M/s. RBSSN Ferrous Industries Pvt. Ltd., proposes to establish a "0.6 MTPA Iron Oxide Pellets & 18 MW Thermal Power Plant" in Hampapatna, Vardkapur, Vayasapur & Morabihal Villages of Hagaribommanahalli Taluk, Bellary District, with an investment of Rs.266.80 crores, generating employment to about 160 persons.

In the 20th State High Level Clearance Committee (SHLCC) meeting held on 05-01-2010 the proposal of Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following order :

Government Order No. CI 71 SPI 2010, Bangalore, Dated 25th February 2010

Government is pleased to accord in principle approval for the project proposal of M/s. RBSSN Ferrous Industries Pvt. Ltd., to establish a "0.6 MTPA Iron Oxide Pellets & 18 MW Thermal Power Plant" in Hampapatna, Vardkapur, Vayasapur & Morabihal Villages of Hagaribommanahalli Taluk, Bellary District, with an investment of Rs.266.80 crores, generating employment to about 160 persons and extend the following infrastructure facilities, incentives and concessions.

INFRASTRUCTURE FACILITIES :

1. **Land :** 331.22 acres – U/s 109 of KLR Act and conversion of the same to industrial use.
2. **Power :** 3000 KVA from GESCOM.
3. **Water :** 3.5 MLD from Tungabhadra River.
4. **Incentives and Concessions :** An applicable under New Industrial Policy 2009-14.

GENERAL TERMS AND CONDITIONS :

1. **MOU :**.The project proponents will have to sign a MOU with the Government of Karnataka during the Global Investors Meet in June 2010.
2. **Environment :** The promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with Government policy of Employment to local people i.e., Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of

the vendor development plan shall be sent to the Commissioner for I.D. & Director of Industries and Commerce for monitoring.

5. **Social Infrastructure Development :** The Company is advised to take up social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.

6. **Others :**

   a) The project proponents shall provide employment to atleast one member of the family of each land looser as the land is being acquired through KIADB.

   b) The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.

   c) The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka,

Aparna Pavate,

Desk Officer (Technical Cell),

PR. 605 Commerce & Industries Department

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : 2009–10ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ 11 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ : ಜೆ 12022/1/2009/ಎಸ್‌ಜಿಎಸ್‌ವೈ–1(10) ದಿನಾಂಕ : 16–4–09 ಮತ್ತು (42) ದಿನಾಂಕ 7–8–09.

2) ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ 2009, ಬೆಂಗಳೂರು, ದಿನಾಂಕ 20–5–09, 25–9–09 ಮತ್ತು 8–12–09.

3) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ : ಜೆ 12022/1/2009 ಎಸ್‌ಜಿಎಸ್‌ವೈ–1(72), ದಿನಾಂಕ : 3–11–09 ಮತ್ತು (73) ದಿನಾಂಕ : 12–11–09.

4) ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರ ಸಂಖ್ಯೆ : ಜೆ 12022/1/2009 ಎಸ್‌ಜಿಎಸ್‌ವೈ–1 (102) ದಿನಾಂಕ : 14–12–09, (120), ದಿನಾಂಕ : 22–12–2009 ಮತ್ತು (132) ದಿನಾಂಕ : 30–12–09

ಪ್ರಸ್ತಾವನೆ :

2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಓದಲಾದ (1) ರಲ್ಲಿ ಒಂದನೇ ಕಂತಿನ ಅನುದಾನ ರೂ. 41,10,50,000 ಗಳನ್ನು ರಾಜ್ಯದ ಎಲ್ಲಾ 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿತ್ತು. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ಓದಲಾಗಿದೆ (2) ರಲ್ಲಿ ಮೊದಲನೇ ಕಂತಿನ ಅನುದಾನ ರೂ. 13,70,16,000 ಬಿಡುಗಡೆ ಮಾಡಬೇಕಿತ್ತು. ಆದರೆ ರಾಜ್ಯದ 2009–10ನೇ ಸಾಲಿನ ಆಯವ್ಯಯದಲ್ಲಿ ಕೆಲವೊಂದು ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಆಯವ್ಯಯದ ಲಭ್ಯತೆಗೆ ಅನುಸಾರ ರೂ. 13,45,20,000 ಗಳನ್ನು 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲಾಗಿದೆ. ಉಲ್ಲೇಖಿತ (3) ರ ಪತ್ರಗಳಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದ ಬಾಗಲಕೋಟೆ, ಬೆಂಗಳೂರು (ಗ್ರಾ) ಮತ್ತು ಬಿಜಾಪುರ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 3,08,64,000 ಗಳನ್ನು ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ರೂ. 1,02,88,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದರೆ, ರಾಜ್ಯದ 2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತಿಗಳಿಗೆ

ಒದಗಿಸಿರುವ ಅನುದಾನದಲ್ಲಿ ಕೊರೆತೆಯಿರುವುದರಿಂದ, ಜಿಲ್ಲೆಯ ಆಯವ್ಯಯದ ಲಭ್ಯತೆಗೆ ಅನುಸಾರ ರೂ. 67,43,000 ಗಳನ್ನು ಬಿಡುಗಡೆಗೊಳಿಸಲಾಗಿದೆ. ಉಲ್ಲೇಖಿತ (4) ರ ಪತ್ರಗಳಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದ ಬೀದರ್, ಚಿಕ್ಕಮಗಳೂರು, ದಾವಣಗೆರೆ, ಗುಲ್ಬರ್ಗಾ, ಹಾಸನ, ಹಾವೇರಿ, ಕೊಪ್ಪಳ, ರಾಮನಗರ, ಮೈಸೂರು, ತುಮಕೂರು ಮತ್ತು ಉಡುಪಿ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 15,49,93,000 ಗಳನ್ನು ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ರೂ. 5,16,64,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದರೆ, ರಾಜ್ಯದ 2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಜಿಲ್ಲೆಯ ಆಯವ್ಯಯದ ಲಭ್ಯತೆಗೆ ಅನುಸಾರ ರೂ. 4,20,44,000 ಗಳನ್ನು ಬಿಡುಗಡೆಗೊಳಿಸಲಾಗಿರುವುದರಿಂದ, ಈ ಆದೇಶ :

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜಿವೈ 2009, ಬೆಂಗಳೂರು, ದಿನಾಂಕ : 25–1–2010

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ರಾಜ್ಯ ಸರ್ಕಾರದ 2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲೆಗಳಿಗೆ ಒದಗಿಸಿದ ಅನುದಾನದ ಲಭ್ಯತೆಗೆ ಅನುಸಾರವಾಗಿ ಎರಡನೇ ಕಂತಿನ ಅನುದಾನ ರೂ. 4,20,44,000 ಗಳನ್ನು (ರೂ. ನಾಲ್ಕು ಕೋಟಿ ಇಪ್ಪತ್ತು ಲಕ್ಷದ ನಲವತ್ತನಾಲ್ಕು ಸಾವಿರ ಮಾತ್ರ) ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವಂತೆ ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು :

1999 ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75 : 25 ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ " 2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 198–ಗ್ರಾಮ ಪಂಚಾಯತ್‌ಗಳಿಗೆ ಸಹಾಯ–6 ಗ್ರಾಮ ಪಂಚಾಯತ್‌ಗಳು–01–ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2009–2010ನೇ (2501–01–198–6–01)" (ಲಿಂಕ್ ಕೋಡ್ 2501–01–800–0–07) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ 14–7–2005 ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 14 ಎಸ್‌ಜೆವೈ 2007, ದಿನಾಂಕ : 18–4–2007 ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

2009–10ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ Onlineಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ : ಗ್ರಾಅಪ 07 ಪಿಬಿಎಸ್ 2009 ದಿನಾಂಕ : 21–1–2010 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಪಿ.ಎ. ಮೇಘಣ್ಣವರ)

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿಗಳು,

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ 2009, ಬೆಂಗಳೂರು, ದಿನಾಂಕ : 25–1–2010

(ರೂ.ಗಳಲ್ಲಿ)

ಕ್ರ.ಸಂ.	ಜಿಲ್ಲಾ ಪಂಚಾಯತಿಯ ಹೆಸರು	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡಬೇಕಾದ ಎರಡನೇ ಕಂತಿನ ಅನುದಾನ	ರಾಜ್ಯದ ಆಯವ್ಯಯದಲ್ಲಿ ಜಿಲ್ಲೆಗೆ ನಿಗದಿ ಪಡಿಸಿದ ರಾಜ್ಯದ ಪಾಲಿನ ಅನುದಾನ	2009–10ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಈವರೆವಿಗೂ ಬಿಡುಗಡೆ ಮಾಡಿದ ಅನುದಾನ	ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನ	ಜಿಲ್ಲಾ ಆಯವ್ಯಯದ ಲಭ್ಯತೆಯಂತೆ ಬಿಡುಗಡೆ ಮಾಡುತ್ತಿರುವ ಎರಡನೇ ಕಂತಿನ ಅನುದಾನ
1	2	3	4	5	6	7	8	9	10
1	ಬೀದರ್	419	3800ZZ5701	1,61,49,000	53,83,000	1,00,00,000	53,82,000	46,18,000	46,18,000
2	ಚಿಕ್ಕಮಗಳೂರು	408	1800ZZ0017	91,36,000	30,45,000	59,40,000	47,14,000	12,26,000	12,26,000
3	ದಾವಣಗೆರೆ	451	1700ZZ0002	1,31,00,000	43,67,000	85,16,000	43,66,000	41,50,000	41,50,000
4	ಗುಲ್ಬರ್ಗಾ	417	3200ZZ0003	2,36,22,000	78,74,000	1,53,57,000	78,74,000	74,83,000	74,83,000
5	ಹಾಸನ	410	1300ZZ0003	1,11,67,000	37,22,000	75,00,000	39,47,000	35,53,000	35,53,000
6	ಹಾವೇರಿ	463	2700ZZ0001	1,41,64,000	47,21,000	92,00,000	47,21,000	44,79,000	44,79,000
7	ಕೊಪ್ಪಳ	466	1500ZZ0010	2,03,78,000	67,93,000	1,32,00,000	93,78,000	38,22,000	38,22,000
8	ಮೈಸೂರು	407	0900ZZ0001	1,87,86,000	62,62,000	1,22,00,000	62,62,000	59,38,000	59,38,000
9	ರಾಮನಗರ	452	0400ZZ0001	72,23,000	24,08,000	17,00,000	25,56,000	(–)8,56,000	0
10	ತುಮಕೂರು	406	0800ZZ0001	1,76,35,000	58,78,000	1,57,31,000	1,01,67,000	55,64,000	55,64,000
11	ಉಡುಪಿ	457	2000ZZ0001	36,33,000	12,11,000	40,00,000	23,94,000	16,06,000	12,11,000
				15,49,93,000	5,16,64,000	10,33,44,000	6,17,61,000	4,15,83,000	4,20,44,000

(ಪಿ.ಎ. ಮೇಘಣ್ಣವರ)
ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ.
ಸರ್ಕಾರದ ಜಂಟಿ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪಿ.ಆರ್. 374

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವಾಲಯ

ವಿಷಯ : 2009–10ನೇ ಸಾಲಿಗೆ ಡಿಆರ್‌ಡಿಎ ಆಡಳಿತ ಯೋಜನೆಯ ರಾಜ್ಯದ ಪಾಲಿನ ಎರಡನೇ ಕಂತಿನ ಅನುದಾನವನ್ನು ರಾಜ್ಯದ ಬೆಳಗಾಂ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಆರ್–18014 : 03 : 2009–10 ಡಿಆರ್‌ಡಿಎ (ಎಸ್‌ಆರ್ ನಂ. 10) ದಿನಾಂಕ : 13–4–09, (ಎಸ್‌ಆರ್ ನಂ. 32) ದಿನಾಂಕ 19–6–2009, (ಎಸ್‌ಆರ್ ನಂ. 36) ದಿನಾಂಕ 3–7–09 ಮತ್ತು (ಎಸ್‌ಎಲ್ ನಂ. 45) ದಿನಾಂಕ 10–8–09.

2) ಸರ್ಕಾರಿ ಆದೇಶ ಸಂಖ್ಯೆ : ಗ್ರಾಅಪ 1 ಎಸ್‌ಜೆವೈ (ಡಿಆರ್‌ಡಿಎ) 2009, ಬೆಂಗಳೂರು, ದಿನಾಂಕ 20–5–09, 15–7–09, 4–8–2009, 5–10–2009 ಮತ್ತು 23–12–09.

3) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಆರ್–17014 : 10 : 2009–10 ಡಿಆರ್‌ಡಿಎ (ಎಸ್‌ಎಲ್ ನಂ. 72) ದಿನಾಂಕ : 17–9–09, (ಎಸ್‌ಎಲ್ ನಂ. 78) ದಿನಾಂಕ 30–9–2009, (ಎಸ್‌ಎಲ್ ನಂ. 100) ದಿನಾಂಕ 4–11–09 ಮತ್ತು (ಎಸ್‌ಎಲ್ ನಂ. 122) ದಿನಾಂಕ 19–11–09.

4) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : ಆರ್–17014 : 10 : 2009–10 ಡಿಆರ್‌ಡಿಎ (ಎಸ್‌ಎಲ್ ನಂ. 133) ದಿನಾಂಕ : 4–12–09,

ಪ್ರಸ್ತಾವನೆ :

2009–10ನೇ ಸಾಲಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಡಿಆರ್‌ಡಿಎ ಆಡಳಿತ ಯೋಜನೆಗೆ ಓದಲಾಗಿದೆ (1) ಮತ್ತು (2) ರಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಒಂದನೇ ಕಂತಿನ ಅನುದಾನ ರೂ. 5,53,12,000 ಹಾಗೂ ರೂ. 1,84,36,000 ಗಳನ್ನು ಅನುಕ್ರಮವಾಗಿ ಬಿಡುಗಡೆ ಮಾಡಲಾಗಿದೆ. ಕೇಂದ್ರ ಸರ್ಕಾರ ಓದಲಾಗಿದೆ (3) ರ ದಿನಾಂಕ 30–9–2009, 4–11–2009 ಮತ್ತು 19–11–2009 ರ ಪತ್ರಗಳಲ್ಲಿ ರಾಜ್ಯದ 6 ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 1,67,42,000 ಬಿಡುಗಡೆ ಮಾಡಿದೆ. ಇದರನ್ವಯ ರಾಜ್ಯ ಸರ್ಕಾರ ಎರಡನೇ ಕಂತಿನ ಅನುದಾನ ರೂ. 55,80,000 ಗಳನ್ನು ಓದಲಾಗಿದೆ (3) ರ ದಿನಾಂಕ 23–12–2009 ರ ಆದೇಶದಲ್ಲಿ ಬಿಡುಗಡೆ ಮಾಡಿದೆ. ಓದಲಾಗಿದೆ. (4)ರ ಪತ್ರದಲ್ಲಿ ಕೇಂದ್ರ ಸರ್ಕಾರ ರಾಜ್ಯದ ಬೆಳಗಾಂ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗಳಿಗೆ ರೂ. 77,65,000 ಗಳನ್ನು ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರ ಸದರಿ ಜಿಲ್ಲೆಗಳಿಗೆ ಎರಡನೇ ಕಂತಿನ ಅನುದಾನ ರೂ. 25,89,000 ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದುದರಿಂದ ಈ ಆದೇಶ :

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 1 ಎಸ್‌ಜೆವೈ (ಡಿಆರ್‌ಡಿಎ) 2009, ಬೆಂಗಳೂರು, ದಿನಾಂಕ : 28–1–2010

ರಾಜ್ಯ ಸರ್ಕಾರವು, ಡಿಆರ್‌ಡಿಎ ಆಡಳಿತ ಯೋಜನೆಗೆ ರೂ. 25,89,000 ಗಳನ್ನು (ರೂ. ಇಪ್ಪತ್ತೈದು ಲಕ್ಷದ ಎಂಬತ್ತೊಂಬತ್ತು ಸಾವಿರ ಮಾತ್ರ) ಕೆಳಕಂಡ 3 ಜಿಲ್ಲಾ ಪಂಚಾಯತಿಗಳಿಗೆ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಕ್ರ.ಸಂ.	ಜಿಲ್ಲಾ ಪಂಚಾಯತಿ	ಜಿ.ಪಂ. ಕೋಡ್	ಡಿ.ಡಿ.ಓ. ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಅನುದಾನ	ರಾಜ್ಯ ಸರ್ಕಾರವು ಬಿಡುಗಡೆ ಮಾಡುತ್ತಿರುವ ಅನುದಾನ
1	ಬೆಳಗಾಂ	413	2200ZZ0002	33,83,000	11,28,000
2	ಚಿಕ್ಕಮಗಳೂರು	408	1800ZZ0017	19,89,000	6,63,000
3	ದಕ್ಷಿಣ ಕನ್ನಡ	409	1900ZZ0047	23,93,000	7,98,000
		ಒಟ್ಟು ರೂ.		77,65,000	25,89,000

ಷರತ್ತುಗಳು :

ಡಿಆರ್‌ಡಿಎ ಆಡಳಿತ ಯೋಜನೆಯ ಕೈಪಿಡಿಯ ಮಾರ್ಗಸೂಚಿಯಂತೆ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಪಂಚಾಯತಿಗಳ ಅನುದಾನವು ಜಿಲ್ಲಾ ಪಂಚಾಯತಿಗಳ ಸಿಬ್ಬಂದಿಗಳ ವೇತನ ಹಾಗೂ ಸಾದಿಲ್ವಾರು ವೆಚ್ಚಗಳಿಗೆ ಮಾತ್ರ ಉಪಯೋಗಿಸುವುದು. ಇನ್ನಾವುದೇ ಉದ್ದೇಶಗಳಿಗೆ ಉಪಯೋಗಿಸತಕ್ಕದ್ದಲ್ಲ.

ಅನುದಾನದ ಮಾದರಿಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ 75 : 25ರ ಅನುಪಾತದಲ್ಲಿರುತ್ತದೆ.

ಯೋಜನೆಯ ವೆಚ್ಚವನ್ನು ಲೆಕ್ಕ ಶೀರ್ಷಿಕೆ " 2515 ಇತರೆ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು 00–196– ಜಿಲ್ಲಾ ಪಂಚಾಯತ್‌ಗಳಿಗೆ ಸಹಾಯ–6 ಜಿಲ್ಲಾ ಪಂಚಾಯತ್–06–ಡಿಆರ್‌ಡಿಎ ಆಡಳಿತಾತ್ಮಕ ವೆಚ್ಚ– (ಕೇಂದ್ರ ಪುರಸ್ಕೃತ ಯೋಜನೆ) 2009–2010ನೇ (2515–00–196–6–06)" ರಡಿ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ ಎಫ್‌ಡಿ 1 ಜಡ್‌ಪಿಎ 2007 (ಪಿ2) ದಿನಾಂಕ 26–4–2007 ರನ್ವಯ ಜಿಲ್ಲಾ ಪಂಚಾಯತ್ ನಿಧಿ–1 ಕ್ಕೆ ಜಮೆ ಮಾಡಿಕೊಂಡು ಪೇಯಿಸ್ ರಸೀದಿಯ ಮೂಲಕ ಜಿಲ್ಲಾ ಪಂಚಾಯತಿ ನಿಧಿಯಿಂದ ಅನುದಾನವನ್ನು ಖಜಾನೆಯಿಂದ ಪಡೆದುಕೊಂಡು ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತೆರೆದಿರುವ ಬ್ಯಾಂಕ್ ಖಾತೆಗೆ ಜಮೆ ಮಾಡಿಕೊಂಡು ವೆಚ್ಚವನ್ನು ಭರಿಸತಕ್ಕದ್ದು.

ಈ ಆದೇಶದಲ್ಲಿ ಬಿಡುಗಡೆ ಮಾಡಿರುವ ಅನುದಾನದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಮಾಡುವುದು.

ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತಿ ಇವರು ಆಯಾ ತಿಂಗಳ ಪ್ರಗತಿ ವರದಿ ಹಾಗೂ ಹುದ್ದೆವಾರು ವಿವರಗಳನ್ನು ಮುಂದಿನ ತಿಂಗಳ 5ನೇ ತಾರಿಖೀನೊಳಗೆ ನಿರ್ದೇಶಕರು (ಸ್ವಉಕಾ) ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ

ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಲೆಕ್ಕ ಪರಿಶೋಧನಾ ವರದಿಗಳನ್ನು, ನಿರ್ದೇಶಕರು (ಸ್ವಉಕಾ) ಹಾಗೂ ಪದ ನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಕರ್ನಾಟಕ ಸರ್ಕಾರ, ಬೆಂಗಳೂರು ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರ್ನಾಟಕ ಸರ್ಕಾರ ಇವರ ಸಹಮತಿ ಸಂಖ್ಯೆ : ಗ್ರಾಅಪ 15 ಜಿಬಿಎಸ್ 2009 ದಿನಾಂಕ : 21–1–2010 ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 375

(ಪಿ.ಎ. ಮೇಘಣ್ಣವರ)

ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎನ್. ಗೋಪಾಲಯ್ಯ, ಶಾಖಾಧಿಕಾರಿ, (ನಿಯೋಜನೆ ಮೇರೆಗೆ ತಹಸೀಲ್ದಾರ್, ನೆಲಮಂಗಲ ತಾಲ್ಲೂಕು) ಇವರ 2007–08ನೇ ಸಾಲಿನ ಕಾರ್ಯನಿರ್ವಹಣಾ ವರದಿಯಲ್ಲಿನ ಪ್ರತಿಕೂಲ ಷರಾ ದೃಢೀಕರಿಸುವ ಬಗ್ಗೆ

ಓದಲಾಗಿದೆ :
1) ತಿಳುವಳಿಕೆ ಪತ್ರ ಸಂಖ್ಯೆ : ಸಿಆಸುಇ 08 ವಾರವ 2008, ದಿನಾಂಕ 3–7–2008
2) ಶ್ರೀ ಎನ್. ಗೋಪಾಲಯ್ಯ, ಶಾಖಾಧಿಕಾರಿ, ಇವರ ಪತ್ರ ದಿನಾಂಕ 14–8–2008
3) ಶ್ರೀಮತಿ ಶಾಲಿನಿ ರಜನೀಶ್, ಕಾರ್ಯದರ್ಶಿಗಳು, ಕರ್ನಾಟಕ ಮತ್ತು ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್, ಗುಲಬರ್ಗಾ, ಇವರಿಗೆ ಬರೆದ ಅರೆ ಸರ್ಕಾರಿ ಪತ್ರ ಸಂಖ್ಯೆ : ಸಿಆಸುಇ 08 ವಾರವ 08, ದಿನಾಂಕ 24–1–2009.
4) ಶ್ರೀಮತಿ ಶಾಲಿನಿ ರಜನೀಶ್, ಕಾರ್ಯದರ್ಶಿಗಳು, ಕರ್ನಾಟಕ ಮತ್ತು ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್, ಗುಲಬರ್ಗಾ, ಇವರ ಅ.ಸ. ಪತ್ರ ಸಂಖ್ಯೆ : ಹೈಕಮಂ/ಕಾ/ಆಶಾ/ರಹಸ್ಯವರದಿ/2008–09, ದಿನಾಂಕ : 3–2–2009.

ಪ್ರಸ್ತಾವನೆ :

ಶ್ರೀ ಎನ್. ಗೋಪಾಲಯ್ಯ, ಶಾಖಾಧಿಕಾರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಪ್ರಸ್ತುತ ನಿಯೋಜನೆ ಮೇರೆಗೆ ತಹಸೀಲ್ದಾರ್, ನೆಲಮಂಗಲ ತಾಲ್ಲೂಕು) ಇವರ 2007–08ನೇ ಸಾಲಿನ ಕಾರ್ಯನಿರ್ವಹಣಾ ವರದಿಯ ಭಾಗ–5ರಲ್ಲಿ ಅಂಗೀಕಾರ ಪ್ರಾಧಿಕಾರದಿಂದ ಈ ಕೆಳಕಂಡ ಪ್ರತಿಕೂಲ ಷರಾವನ್ನು ದಾಖಲಿಸಿತ್ತು.

"ಅತೃಪ್ತಿಕರ, ಅವರ ಕಾರ್ಯವೈಖರಿ ಬಗ್ಗೆ ಶಿಸ್ತಿನ ಕ್ರಮ ಜರುಗಿಸಲಾಗಿದೆ".

ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ : 1 ರ ತಿಳುವಳಿಕೆ ಪತ್ರದಲ್ಲಿ ಕರ್ನಾಟಕ ನಾಗರೀಕ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಗಳು 2000 ರ ನಿಯಮ 9 (2) ರನ್ವಯ ಸದರಿ ಪ್ರತಿಕೂಲ ಷರಾವನ್ನು ಶ್ರೀ ಎನ್. ಗೋಪಾಲಯ್ಯ, ಶಾಖಾಧಿಕಾರಿ, ರವರಿಗೆ ತಿಳಿಸಲಾಗಿತ್ತು. ಈ ತಿಳುವಳಿಕೆ ಪತ್ರಕ್ಕೆ ಶ್ರೀ ಗೋಪಾಲಯ್ಯರವರು ಮೇಲೆ ಓದಲಾದ ಕ್ರಮ ಸಂಖ್ಯೆ : 2 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು.

ಮೇಲೆ ಓದಲಾದ ಕ್ರಮ ಸಂಖ್ಯೆ : 3 ರಲ್ಲಿ ಸದರಿ ಅಧಿಕಾರಿಯ ಮೇಲ್ಮನವಿ ಬಗ್ಗೆ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 04 ಸೇರವ 2002 ದಿನಾಂಕ : 29–8–2002ರ ಪ್ಯಾರಾ 24 ರನ್ವಯ ಶ್ರೀಮತಿ ಶಾಲಿನಿ ರಜನೀಶ್, ಹಿಂದಿನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ (ಪ್ರಸ್ತುತ ಕಾರ್ಯದರ್ಶಿಗಳು, ಕರ್ನಾಟಕ ಮತ್ತು ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್, ಗುಲಬರ್ಗಾ) (ಅಂಗೀಕಾರ ಪ್ರಾಧಿಕಾರ) ಇವರ ಅಭಿಪ್ರಾಯವನ್ನು ಕೋರಲಾಗಿತ್ತು. ಸದರಿ ಅಂಗೀಕಾರ ಪ್ರಾಧಿಕಾರದವರು ಮೇಲೆ ಓದಲಾದ ಕ್ರಮ ಸಂಖ್ಯೆ : 4 ರಲ್ಲಿ ಶ್ರೀ ಎನ್. ಗೋಪಾಲಯ್ಯ, ಶಾಖಾಧಿಕಾರಿ, ಇವರ 2007–08ನೇ ಸಾಲಿನ ಕಾರ್ಯನಿರ್ವಹಣಾ ವರದಿಯಲ್ಲಿನ ಭಾಗ–5 ರಲ್ಲಿ ನಮೂದಿಸಿದ ಷರಾ ಕುರಿತು

ಅಭಿಪ್ರಾಯ ನೀಡುತ್ತಾ, ಶ್ರೀ ರಾಮು ಫೌಂಡೇಷನ್ ರೂರಲ್ ಆರ್ಗನೈಸೇಷನ್, ತುಮಕೂರು, ಈ ಸಂಸ್ಥೆಗೆ ವೃದ್ಧಾಶ್ರಮ ಹಾಗೂ ಸಹಾಯವಾಣಿ ಮಂಜೂರಾತಿ ನೀಡಿರುವ ಪ್ರಕರಣದಲ್ಲಿ ಕರ್ತವ್ಯಲೋಪ ಎಸಗಿದ್ದು, ಈ ಕುರಿತು ಶಿಸ್ತಿನ ಕ್ರಮ ಕೈಗೊಳ್ಳಲಾಗುತ್ತಿದೆ. ಎಂದು ತಿಳಿಸುತ್ತಾ, ಅವರ ಕಾರ್ಯನಿರ್ವಹಣಾ ವರದಿಯಲ್ಲಿ ನಮೂದಿಸಿರುವ ಷರಾ ಬಗ್ಗೆ ಸಮರ್ಥನೆ ನೀಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 08 ವಾರವ 2008, ಬೆಂಗಳೂರು, ದಿನಾಂಕ : 4–2–2010

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಸಿವಿಲ್ ಸೇವಾ (ಕಾರ್ಯನಿರ್ವಹಣಾ ವರದಿಗಳು) ನಿಯಮಾವಳಿಗಳು 2000ರ ನಿಯಮ 10 (2) ರನ್ವಯ ಶ್ರೀ ಎನ್. ಗೋಪಾಲಯ್ಯ, ಶಾಖಾಧಿಕಾರಿ (ಪ್ರಸ್ತುತ ನಿಯೋಜನೆ ಮೇರೆಗೆ ತಹಸೀಲ್ದಾರ್, ನೆಲಮಂಗಲ ತಾಲ್ಲೂಕು) ಇವರು ಈ ಹಿಂದೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ಅವರ 2007–08ನೇ ಸಾಲಿನ ಕಾರ್ಯನಿರ್ವಹಣಾ ವರದಿಯಲ್ಲಿನ ಅಂಗೀಕಾರ ಪ್ರಾಧಿಕಾರ ದಾಖಲಿಸಿದ ಪ್ರತಿಕೂಲ ಷರಾಗಳನ್ನು ದೃಢೀಕರಿಸಲು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 377

(ಜಾಯ್ಸ್ ಸುರೇಂದ್ರ)
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಆಡಳಿತ)

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಶ್ರೀನಿವಾಸ ನಾಯಕ್, ನಿರ್ದೇಶಕರು (ಕಮರ್ಶಿಯಲ್) ಪವರ್ ಕಂಪೆನಿ ಆಫ್, ಕರ್ನಾಟಕ ಅವರು ಸದರಿ ಕಂಪನಿಯ ಹಣವನ್ನು ಮೆ. Bajaj Alliance Life Insurance Company Ltd., ನಲ್ಲಿ ನಿಯಮ ಬಾಹಿರವಾಗಿ ಠೇವಣಿ ಇಟ್ಟಿರುವ ಬಗ್ಗೆ ಸಿ.ಐ.ಡಿ. ತನಿಖೆ.

ಓದಲಾಗಿದೆ : ಇಂಧನ ಇಲಾಖೆಯ ಕಡತ ಸಂ. ಇಂಇ 186 ಪಿಎಸ್‌ಜಿ 2009.

ಪ್ರಸ್ತಾವನೆ:

ಇಂಧನ ಇಲಾಖೆಯು ಮೇಲೆ ಓದಲಾದ ಆ ಇಲಾಖೆಯ ಕಡತದಲ್ಲಿ ಈ ಕೆಳಕಂಡ ಪ್ರಸ್ತಾವನೆಯನ್ನು ಒಳಾಡಳಿತ ಇಲಾಖೆಗೆ ಕಳುಹಿಸಿರುತ್ತದೆ.

(i) ಶ್ರೀ ಎಸ್. ಶ್ರೀನಿವಾಸ ನಾಯಕ್, ನಿರ್ದೇಶಕರು (ಕಮರ್ಶಿಯಲ್), ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್, ಇವರು ESCOM ಗಳಿಂದ ಸ್ವೀಕರಿಸಿರುವ ರೂ. 18 ಕೋಟಿಗಳ ಶೇರು ಹಣವನ್ನು ಖಾಸಗಿ ಆರ್ಥಿಕ ಸಂಸ್ಥೆಯಾದ ಮೆ. Bajaj Alliance Life Insurance Company Ltd., ನಲ್ಲಿ ಮಂಡಳಿಯ ಅನುಮತಿ ಇಲ್ಲದೆ ಠೇವಣಿ ಇಟ್ಟಿರುತ್ತಾರೆ.

(ii) ಈ ಠೇವಣಿಯನ್ನು ಸದರಿ ಸಂಸ್ಥೆಯು ವಾರ್ಷಿಕ ಶೇ. 18/20 ರ ಬಡ್ಡಿ ನೀಡುವುದೆಂಬ ಹಿನ್ನೆಲೆಯಲ್ಲಿ ಇಡಲಾಗಿರುತ್ತದೆ.

(iii) ಸದರಿ ಮೊತ್ತದ ಸ್ವೀಕೃತಿಯ ಬಗ್ಗೆ Bajaj Alliance Life Insurance Company Ltd., 25–1–08 ರಂದು ರಶೀದಿಯನ್ನು ನೀಡಿರುತ್ತದೆ. ಈ ಮೊತ್ತಕ್ಕೆ Bajaj Alliance Life Insurance Company Ltd., ಶ್ರೀ ತುಷಾರ್ ಕಾಂತ್ ಮತ್ತು ರಾಕೇಶ್ ಕುಮಾರ್ ಸೂರಿ ಎಂಬುವವರ ಹೆಸರಿಗೆ 2005/2006 ರಲ್ಲಿ ಹೊರಡಿಸಿರುವ 2 ಜೀವ ವಿಮಾ ನಿಗಮದ ಪಾಲಿಸಿಯನ್ನು ನೀಡಿರುತ್ತದೆ. ಈ ಎರಡು ಪಾಲಿಸಿಗಳನ್ನು ನೀಡಿದ ಸಮಯದಲ್ಲಿ Power Company of Karnataka Ltd., ರಚನೆಯಾಗಿರಲಿಲ್ಲ. ಕಾರ್ಪೋರೇಟ್ ಪಾಲಿಸಿಗಳನ್ನು ನೀಡುವ ಬದಲಾಗಿ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಪಾಲಿಸಿಗಳನ್ನು ನೀಡಲಾಗಿರುತ್ತದೆ.

(iv) ರೂ. 18.00 ಕೋಟಿಗಳಲ್ಲಿ ಠೇವಣಿಯನ್ನು 50% in unit + Mutual funds and 50% in cash-fund scheme ಗಳಲ್ಲಿ ನಿರ್ವಹಿಸಬೇಕಾಗಿರುತ್ತದೆ. 2 ಖಾಸಗಿ ಪಾಲಿಸಿಗಳನ್ನು ನೀಡಿರುವುದು ಶೇ. 95

ನ್ನು ಈಕ್ವಿಟಿಯಲ್ಲಿ ಮತ್ತು ಶೇ 5 ಮಾತ್ರ Cash + fund ನಲ್ಲಿ ವಿನಿಯೋಗಿಸಿದಂತಾಗುತ್ತದೆ ಈ ಕ್ರಮವು Power Company of Karnataka Ltd., ನ ಹಿತಕ್ಕೆ ವಿರುದ್ಧವಾಗಿರುತ್ತದೆ.

(v) ರೂ. 18.00 ಕೋಟಿಗೆ ಖಾಸಗಿ ವ್ಯಕ್ತಿಗಳ ಹೆಸರಿನಲ್ಲಿ ಜೀವ ವಿಮಾ ಪಾಲಿಸಿ ನೀಡಿರುವುದರಿಂದ ಈ ಕ್ರಮವು ನಿಯಮ ಬಾಹಿರವಾಗಿರುತ್ತದೆ.

(vi) ಈ ವ್ಯವಹಾರದಲ್ಲಿ ರೂ. 18.00 ಲಕ್ಷಗಳ ಕಮಿಷನ್ ಪಾವತಿ ಮಾಡಿರುವುದು ವ್ಯಕ್ತವಾಗುತ್ತಿದೆ.

(vii) ಈ ಅವ್ಯವಹಾರದ ಬಗ್ಗೆ ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಮೊ. ಸಂ. 308/09 ನ್ನು ಐಪಿಸಿ ಕಲಂ 403,406,409,418,420,120 ಬಿ ಅನ್ವಯ ದಿನಾಂಕ 12–8–2009 ರಂದು ದಾಖಲು ಮಾಡಲಾಗಿರುತ್ತದೆ.

(viii) ಈ ಅವ್ಯವಹಾರದ ಬಗ್ಗೆ ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಮೊ.ಸಂ. 308/9 ನ್ನು ಐಪಿಸಿ ಕಲಂ 403,406,409,418,420,120 ಬಿ ಅನ್ವಯ ದಿನಾಂಕ 12–8–2009 ರಂದು ದಾಖಲು ಮಾಡಿರುವ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ಹಸ್ತಾಂತರಿಸುವುದರೊಂದಿಗೆ ಸಿ.ಐ.ಡಿ.ಯು ಕೆಳಕಂಡ ಅಂಶಗಳ ಬಗ್ಗೆಯೂ ತನಿಖೆ ಮಾಡುವಂತೆ ಇಂಧನ ಇಲಾಖೆಯು ಕೋರಿರುತ್ತದೆ.

1. How two cheques for Rs. 9 crores each drawn in favour of M/s. Bajaj Allianz Life Insurance Company Limited were credited to the 2 existing personal insurance policies of 2 senior executives of M/s. Bajaj Allianz Life Insurance Company Limited Sri Tushar Khan and Sri Rakesh Kumar Suri (accused iv and v).
2. How personal policies of 2 senior executives of M/s. Bajaj Allianz Life Insurance Company Limited were allowed to be assigned in favour of Power company of Karnataka Ltd., by the CEO,CFO & VP (O) Pune head Office (accused I, ii, iii) although it was abviously known to them that these existing policies were in the names of 2 senior executives of their own company viz., Sri Tushar Khan and Sri Rakesh Kumar Suri and were being topped up by substantial amounts of Rs. 18 crores (Rs. 9 crores each) despite a Government company such as Power Company of Karnataka Ltd., having no insurable interest in them.
3. Whether the 2 senior executives of M/s. Bajaj Allianz Life Insurance Company Limited cheated Power Company of Karnataka Ltd., on the basis of fraudulent policy documents by inserting the format of Absolute Assignment of Policy for valuable consideration dated 25th January 2008 into an existing policy document without approval of under writing department of PUNE head office particularly since it is not executed on a stamp paper of appropriate value (as clearly indicated on the top of the format). This assignment appears to be forged by the Bajaj Allianz Life Insurance Company Limited, Bangalore office since Pune head office could not possibly issue such policy on the same day of issuance of cheques dated 25th January 2008, without even waiting for collection/credit of the high value cheques to Bajaj Allianz Life Insurance Company Limited Account.
4. Whether the 2 senior executives of Bajaj Allianz Life Insurance Company Limited cheated Power Company of Karnataka Ltd., on the basis of fraudulent assignment letter dated 25th January 2008 which appears to be forged by the 2 senior Executives of Bajaj Allianz Life Insurance Company Limited, Bangalore office since Pune head office could not

possibly issue such assignment letter on the same day of issuance of cheques dated 25th January 2008 without even waiting for collection/credit of the cheques to Bajaj Allianz Life Insurance Company Limited Account. Moreover the letter appears to be fraudulent since no change of address was recorded in the books maintained by Pune head office as borne out by the fact that all monthly statements continued to be sent from the data base to the residential address of Sri Tushar Khan and Sri Rakesh Kumar Suri.

ಇಂಧನ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ : ಒಇ 13 ಸಿಐಡಿ 2010, ಬೆಂಗಳೂರು, ದಿನಾಂಕ : 4–2–2010

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಈ ಅವ್ಯವಹಾರದ ಬಗ್ಗೆ ಬೆಂಗಳೂರಿನ ಅಲಸೂರು ಗೇಟ್ ಪೊಲೀಸ್ ಠಾಣೆಯಲ್ಲಿ ಐಪಿಸಿ ಕಲಂ 403,406,409,418,420,120 ಬಿ ಅನ್ವಯ ದಿನಾಂಕ 12–8–2009 ರಂದು ದಾಖಲು ಮಾಡಿರುವ ಮೊ. ಸಂ. 308/09ನ್ನು ತನಿಖೆಗಾಗಿ ಸಿ.ಐ.ಡಿ.ಗೆ ವರ್ಗಾಹಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

ಸಿ.ಐ.ಡಿ.ಯು ಕೆಳಕಂಡ ಅಂಶಗಳ ಬಗ್ಗೆಯೂ ತನಿಖೆ ಮಾಡುವಂತೆ ಆದೇಶಿಸಿದೆ.

1. How two cheques for Rs. 9 crores each drawn in favour of M/s. Bajaj Allianz Life Insurance Company Limited were credited to the 2 existing personal insurance policies of 2 senior executives of M/s. Bajaj Allianz Life Insurance Company Limited Sri Tushar Khan and Sri Rakesh Kumar Suri (accused iv and v).
2. How personal policies of 2 senior executives of M/s. Bajaj Allianz Life Insurance Company Limited were allowed to be assigned in favour of Power company of Karnataka Ltd., by the CEO,CFO & VP (O) Pune head Office (accused I, ii, iii) although it was abviously known to them that these existing policies were in the names of 2 senior executives of their own company viz., Sri Tushar Khan and Sri Rakesh Kumar Suri and were being topped up by substantial amounts of Rs. 18 crores (Rs. 9 crores each) despite a Government company such as Power Company of Karnataka Ltd., having no insurable interest in them.
3. Whether the 2 senior executives of M/s. Bajaj Allianz Life Insurance Company Limited cheated Power Company of Karnataka Ltd., on the basis of fraudulent policy documents by inserting the format of Absolute Assignment of Policy for valuable consideration dated 25th January 2008 into an existing policy document without approval of under writing department of PUNE head office particularly since it is not executed on a stamp paper of appropriate value (as clearly indicated on the top of the format). This assignment appears to be forged by the Bajaj Allianz Life Insurance Company Limited, Bangalore office since Pune head office could not possibly issue such policy on the same day of issuance of cheques dated 25th January 2008, without even waiting for collection/credit of the high value cheques to Bajaj Allianz Life Insurance Company Limited Account.
4. Whether the 2 senior executives of Bajaj Allianz Life Insurance Company Limited cheated Power Company of Karnataka Ltd., on the basis of fraudulent assignment letter dated 25th January 2008 which appears to be forged by the 2 senior Executives of Bajaj Allianz Life Insurance

Company Limited, Bangalore office since Pune head office could not possibly issue such assitgnment letter on the same day of issuance of cheques dated 25th January 2008 without even waiting for collection/credit of the cheques to Bajaj Allianz Life Insurance Company Limited Account. Moreover the letter appears to be fraudulent since no change of address was recorded in the books maintained by Pune head office as borne out by the fact that all monthly statements continued to be sent from the data base to the residential address of Sri Tushar Khan and Sri Rakesh Kumar Suri.

Karnataka Power Transmission Corporation Ltd., Bangalore ಇವರು ಸಿ.ಐ.ಡಿ. ತನಿಖಾ ತಂಡಕ್ಕೆ ಅಗತ್ಯವಿರುವ ದಾಖಲೆ/ಮಾಹಿತಿಯನ್ನು ನೀಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ. ಆರ್. 378

(ಪಿ. ಶಿವರಾಮ ಭಟ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಅಪರಾಧಗಳು)

ಕಂದಾಯ ಸಚಿವಾಲಯ

ವಿಷಯ : ಉಡುಪಿ ಜಿಲ್ಲೆ, ಶಿವಳ್ಳಿ ಗ್ರಾಮದ ಸ.ನಂ.171/3 ರಲ್ಲಿ 0.38 ಎಕರೆ ಮತ್ತು ಹೆರ್ಗಾ ಗ್ರಾಮದ ಸ.ನಂ. 93/2 ಮತ್ತಿತರ ಒಟ್ಟು 16.24 ಎ/ಗು ಜಮೀನನ್ನು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1) ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ, ಉಡುಪಿ ರವರ ಪತ್ರ. ಸಂ: ಎಲ್‌ಎನ್‌ಡಿ/ಪಿಡಿಆರ್/8/08–09 ದಿನಾಂಕ : 17–11–2008.
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ , ಮೈಸೂರು ರವರ ಪತ್ರ ಸಂ : ಎಲ್‌ಎನ್‌ಡಿ/ಸಿಆರ್/206/08–09, ದಿನಾಂಕ : 28–01–2009.

ಪ್ರಸ್ತಾವನೆ :

ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು ರವರು ಮೇಲೆ ಕ್ರಮ ಸಂಖ್ಯೆ 2 ರಲ್ಲಿ ಓದಲಾದ ದಿನಾಂಕ: 28–01–2009ರ ಪತ್ರದಲ್ಲಿ ಉಡುಪಿ ಜಿಲ್ಲೆ, ಶಿವಳ್ಳಿ ಗ್ರಾಮದ ಸ.ನಂ. 171/3 ರಲ್ಲಿ 0.38 ಎಕರೆ ಮತ್ತು ಹೆರ್ಗಾ ಗ್ರಾಮದ ಸ.ನಂ. 93/2 ರಲ್ಲಿ 10.39 ಮತ್ತು ಸ.ನಂ. 94/3ಬಿ2 ರಲ್ಲಿ 5.47 ಎಕರೆ ಹೀಗೆ ಒಟ್ಟು 16.24 ಎಕರೆ ಜಮೀನನ್ನು ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ರವರಿಗೆ ಪ್ರಚಲಿತ ಮಾರುಕಟ್ಟೆ ದರ ವಿಧಿಸಿ ಮಂಜೂರು ಮಾಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿಂದೆ ಸರ್ಕಾರದ ಅದೇಶ ಸಂಖ್ಯೆ : ಆರ್‌ಡಿ 81 ಎಲ್‌ಜಿಎ 84(ಪಿ) ದಿ:16–05–1989ರಲ್ಲಿ ಮಣಿಪಾಲ ಇನ್‌ಸ್ಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್, ಮಣಿಪಾಲ ರವರಿಗೆ ಹೆರ್ಗಾ ಹಾಗೂ ಶಿವಳ್ಳಿ ಗ್ರಾಮದಲ್ಲಿನ ಒಟ್ಟು 31–43 ಎಕರೆ ಜಮೀನನ್ನು ಮಂಜೂರು ಮಾಡಲಾಗಿತ್ತು. ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಗ್ರಾಮ	ಸರ್ವೆ ನಂ.	ವಿಸ್ತೀರ್ಣ
1	ಹೆರ್ಗಾ	93/2	12–60
2	ಹೆರ್ಗಾ	94/3ಬಿ2	5–47
3	ಹೆರ್ಗಾ	94/1	0–73
4	ಶಿವಳ್ಳಿ	171/3	12–25
5	ಶಿವಳ್ಳಿ	320	31–43
		ಒಟ್ಟು	31–43

ತದನಂತರ, ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 21 ಎಲ್‌ಜಿಎ 93 ದಿ : 21-04-1999 ರಲ್ಲಿ ಸದರಿ ಸಂಸ್ಥೆಗೆ ಮೇಲಿನಂತೆ ಜಮೀನು ಮಂಜೂರು ಮಾಡಿ ಸರ್ಕಾರವು ಹೊರಡಿಸಿದ ದಿ : 16-05-1989ರ ಆದೇಶವನ್ನು ರದ್ದುಗೊಳಿಸಿ, ಹೆರ್ಗಾ ಹಾಗೂ ಶಿವಳ್ಳಿ ಗ್ರಾಮದ ಒಟ್ಟು 31.43 ಎಕರೆ ಜಮೀನನ್ನು ಉಡುಪಿ ಜಿಲ್ಲೆಯ ಜಿಲ್ಲಾ ಕಛೇರಿ ಸಂಕೀರ್ಣ, ಸಿಬ್ಬಂದಿ ವಸತಿ ಗೃಹ ಮತ್ತು ಇತರೆ ಜಿಲ್ಲಾ ಕಛೇರಿಗಳಿಗೆ ಕಾಯ್ದಿರಿಸಿ ಆದೇಶಿಸಲಾಗಿರುತ್ತದೆ.

ಮೇಲಿನ ರದ್ದತಿ ಆದೇಶವನ್ನು ಸದರಿ ಸಂಸ್ಥೆಯವರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಸದರಿ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಅವರ ನ್ಯಾಯಾಲಯದಲ್ಲಿ ಸದರಿ ಪ್ರಕರಣವನ್ನು ವಿಚಾರಣೆಗೆ ಒಳಪಡಿಸಲಾಗಿರುತ್ತದೆ. ಈ ಬಗ್ಗೆ ಪ್ರಧಾನ ಕಾರ್ಯದರ್ಶಿಯವರು ವಿವರವಾಗಿ ವಿಚಾರಣೆ ಮಾಡಿ ಸರ್ಕಾರದ ಅದೇಶ ಸಂಖ್ಯೆ : ಆರ್‌ಡಿ 81 ಎಲ್‌ಜಿಎ 84(ಪಿ) ದಿ : 16-05-1989 ರಲ್ಲಿ T.A. Pai Management Institute, Manipal ರವರಿಗೆ ಮಂಜೂರು ಮಾಡಲಾದ ಒಟ್ಟು 31 ಎಕರೆ 43 ಸೆಂಟ್ಸ್ ಜಮೀನಿನ ಮಂಜೂರಾತಿಯನ್ನು ರದ್ದುಪಡಿಸಿ ಇವುಗಳ ಪೈಕಿ 15-00 ಎಕರೆ ಜಮೀನನ್ನು ಉಡುಪಿ ಜಿಲ್ಲಾ ಕಟ್ಟಡಗಳ ಸಂಕೀರ್ಣಕ್ಕಾಗಿ ಉಪಯೋಗಿಸಲು ಕಾಯ್ದಿರಿಸಿ, ಉಳಿದ ಜಮೀನು ಕಕ್ಷಿದಾರ ಸಂಸ್ಥೆಯ ಹಿಂಬದಿಯಲ್ಲಿ ಹೊಂದಿಕೊಂಡಿರುವುದರಿಂದ, ಸಂಸ್ಥೆಯು ಅಪೇಕ್ಷಿಸಿದಲ್ಲಿ ಹಾಗೂ ಅರ್ಜಿ ಸಲ್ಲಿಸಿದಲ್ಲಿ ಪ್ರಸ್ತುತ ನಿಯಮಗಳಂತೆ ಮಂಜೂರಾತಿಸಲು ಕ್ರಮ ಕೈಗೊಳ್ಳಬಹುದಾಗಿದೆ ಎಂದು ನ್ಯಾಯಾಲಯದಲ್ಲಿ ತೀರ್ಪು ನೀಡಿ ಅದೇಶ ಸಂಖ್ಯೆ : ಆರ್‌ಡಿ 36 ಎಲ್‌ಜಿಡಬ್ಲ್ಯೂ 2000 ದಿ : 31-03-2005ರಂದು ಹೊರಡಿಸಿರುತ್ತಾರೆ.

ಮೇಲಿನ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ ಇವರ ನ್ಯಾಯಾಲಯದ ಅದೇಶದಂತೆ, ಮಣಿಪಾಲ ಸಂಸ್ಥೆಯವರು ದಿ : 07-08-2008ರಂದು ಸರ್ಕಾರಕ್ಕೆ ಮನವಿಯನ್ನು ಸಲ್ಲಿಸಿ ತಾವು ಕೋರಿರುವ 16.24 ಎಕರೆ ಜಮೀನನ್ನು ಮಂಜೂರು ಮಾಡುವಂತೆ ಕೋರಿ ಉಡುಪಿ ಜಿಲ್ಲಾದಿಕಾರಿಯವರಿಗೆ ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ಜಮೀನು ಅನಾಧೀನ ವರ್ಗಕ್ಕೆ ಸೇರಿದ ಜಮೀನಾಗಿದ್ದು, ಉಡುಪಿ ನಗರ ಸಭೆಯ ವ್ಯಾಪ್ತಿಯಲ್ಲಿ ಬರುತ್ತದೆ. ಕರ್ನಾಟಕ ಭೂ ಮಂಜೂರಾತಿ ನಿಯಮ 1969ರ ನಿಯಮ 19ರಡಿ ಯಾವುದೇ capitation ಶುಲ್ಕ ವಿಧಿಸದ ಶೈಕ್ಷಣಿಕ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ಮಂಜೂರು ಮಾಡಲು ಅವಕಾಶವಿದೆ. ಅಲ್ಲದೇ ಅದೇ ನಿಯಮಾವಳಿ ನಿಯಮ 10(2)(4) ಅಡಿಯಲ್ಲಿ ನಗರ ಸಭೆ ವ್ಯಾಪ್ತಿಯಲ್ಲಿನ ಜಮೀನುಗಳನ್ನು ಖಾಸಗಿ ಸಂಸ್ಥೆಗಳಿಗೆ ಮಂಜೂರು ಮಾಡಲು ಅವಕಾಶ ಇರುವುದಿಲ್ಲ.

ಈ ಜಮೀನಿನ ಪ್ರಚಲಿತ ಮಾರುಕಟ್ಟೆ ದರವು ಸೆಂಟ್ಸ್ ಒಂದಕ್ಕೆ ರೂ. 50,000/- ಇದ್ದು, 16-24 ಎಕರೆ ಜಮೀನಿಗೆ ಒಟ್ಟು ರೂ. 8.12 ಕೋಟಿಗಳಾಗಿರುತ್ತದೆ. ಈ ದರವನ್ನು ಪಾವತಿಸಲು ಅರ್ಜಿದಾರರ ಸಂಸ್ಥೆಯವರು ಒಪ್ಪಿಗೆ ನೀಡಿರುತ್ತಾರೆ ಎಂದು ಉಡುಪಿ ಜಿಲ್ಲಾಧಿಕಾರಿಯವರು ಮೇಲೆ ಓದಲಾದ ಕ್ರ.ಸಂ. 1ರ ಪತ್ರದಲ್ಲಿ ತಿಳಿಸಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 15 ಎಲ್‌ಜಿಎ 2009, ಬೆಂಗಳೂರು, ದಿನಾಂಕ : 19ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ತೆರೆದ ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ ಆದೇಶ ಸಂಖ್ಯೆ : ಆರ್‌ಡಿ 36 ಎಲ್‌ಜಿಡಬ್ಲ್ಯೂ 2000 ದಿನಾಂಕ : 31-03-2005ರಲ್ಲಿ ನೀಡಿರುವ ತೀರ್ಪಿನನ್ವಯ ಉಡುಪಿ ಜಿಲ್ಲೆ ಶಿವಳ್ಳಿ ಗ್ರಾಮದ ಸ.ನಂ. 171/3ರಲ್ಲಿ 0-38 ಎಕರೆ ಹೆರ್ಗಾ ಗ್ರಾಮದ ಸ.ನಂ. 93/2ರಲ್ಲಿ 10-39 ಎಕರೆ, ಸ.ನಂ.94/3ಬಿ2 ರಲ್ಲಿ 5-47 ಎಕರೆ ಹೀಗೆ ಒಟ್ಟು 16-24 ಎಕರೆ ಜಮೀನನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ 1969ರ 10(2)(iv) ಮತ್ತು ನಿಯಮ 19ನ್ನು ಸಡಿಲಿಸಿ ಇದೇ ನಿಯಮಾವಳಿ ನಿಯಮದ 21ರಡಿ ಪ್ರಚಲಿತ ಮಾರುಕಟ್ಟೆ ದರ ರೂ. 8.12 ಕೋಟಿ (ಎಂಟು ಕೋಟಿ 12 ಲಕ್ಷ ರೂ. ಗಳು ಮಾತ್ರ) ಹಾಗೂ ನಿಯಮಾನುಸಾರ ಇತರೆ ವೆಚ್ಚಗಳನ್ನು ವಿಧಿಸಿ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಇವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಂಜೂರು ಮಾಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.616

ಎಲ್. ಕೃಷ್ಣಪ್ಪ
ಪೀಠಾಧಿಕಾರಿ,
ಕಂದಾಯ ಇಲಾಖೆ (ಭೂ.ಮಂ-2).

ಕಂದಾಯ ಸಚಿವಾಲಯ

ವಿಷಯ : ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ನ್ಯಾನಪ್ಪನಹಳ್ಳಿ ಗ್ರಾಮದ ಸ.ನಂ. 39 ರಲ್ಲಿ 20 ಗುಂಟೆ ಜಮೀನನ್ನು ಶ್ರೀ ಮೂಲ ಮೃತಿಕ ಬೃಂದಾವನ ರಾಘವೇಂದ್ರ ಸ್ವಾಮಿ ಚಾರಿಟೆಬಲ್ ಟ್ರಸ್ಟ್ ಇವರಿಗೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ : 1) ಶ್ರೀ ಮೂಲ ಮೃತಿಕ ಬೃಂದಾವನ ರಾಘವೇಂದ್ರ ಸ್ವಾಮಿ ಚಾರಿಟೆಬಲ್ ಟ್ರಸ್ಟ್ ಇವರ ಮನವಿಯ ದಿ : 28–01–2009.

2) ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರ ಪತ್ರ ಸಂಖ್ಯೆ : ಎಲ್‌ಎನ್‌ಡಿ (ಎಸ್) ಸಿಆರ್ 1/09–10, ದಿ : 29–04–2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಪತ್ರದಲ್ಲಿ ಶ್ರೀ ಮೂಲ ಮೃತಿಕ ಬೃಂದಾವನ ರಾಘವೇಂದ್ರ ಸ್ವಾಮಿ ಚಾರಿಟೆಬಲ್ ಟ್ರಸ್ಟ್ ಇವರು ಸರ್ಕಾರಕ್ಕೆ ಸಲ್ಲಿಸಿದ ಮನವಿಯಲ್ಲಿ ಶ್ರೀ ರಾಘವೇಂದ್ರ ಮಠ ಹಾಗೂ ದೇವಸ್ಥಾನದ ನಿರ್ಮಾಣಕ್ಕಾಗಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ನ್ಯಾನಪ್ಪನಹಳ್ಳಿ ಗ್ರಾಮದ ಸ.ನಂ. 39ರಲ್ಲಿ 20 ಗುಂಟೆ ಜಮೀನನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಪತ್ರದಲ್ಲಿ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ ಇವರು ದಿ : 29–04–2009ರ ಪತ್ರದಲ್ಲಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ನ್ಯಾನಪ್ಪನಹಳ್ಳಿ ಗ್ರಾಮದ ಸ.ನಂ. 39ರಲ್ಲಿ ಒಟ್ಟು 10.09 ಎಕರೆ ಜಮೀನಿದ್ದು, ಈ ಪೈಕಿ 20 ಗುಂಟೆ ಜಮೀನು ಖುಲ್ಲಾ ಇರುವುದಾಗಿ ತಿಳಿಸಿರುತ್ತಾರೆ. ಸದರಿ ಜಮೀನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯ ಒಳಗಡೆ ಬರುತ್ತಿದ್ದು, ಸದರಿ ಜಮೀನಿನ ಮಾರ್ಗಸೂಚಿ ಬೆಲೆ ಎಕರೆಯೊಂದಕ್ಕೆ ರೂ. 45 ಲಕ್ಷಗಳೆಂದು ಹಾಗೂ ಮಾರುಕಟ್ಟೆ ಬೆಲೆ ಎಕರೆಯೊಂದಕ್ಕೆ ರೂ. 90 ಲಕ್ಷಗಳೆಂದು ತಿಳಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 335 ಎಲ್‌ಜಿಬಿ 2009, ಬೆಂಗಳೂರು, ದಿನಾಂಕ : 23ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 27ರಲ್ಲಿನ ಅಧಿಕಾರವನ್ನು ಚಲಾಯಿಸಿ ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ನ್ಯಾನಪ್ಪನಹಳ್ಳಿ ಗ್ರಾಮದ ಸ.ನಂ. 39 ರಲ್ಲಿ 20 ಗುಂಟೆ ಜಮೀನನ್ನು ಶ್ರೀ ಮೂಲ ಮೃತಿಕ ಬೃಂದಾವನ ರಾಘವೇಂದ್ರ ಸ್ವಾಮಿ ಚಾರಿಟೆಬಲ್ ಟ್ರಸ್ಟ್ ಇವರಿಗೆ ಶ್ರೀ ರಾಘವೇಂದ್ರ ಮಠ ಹಾಗೂ ದೇವಸ್ಥಾನ ನಿರ್ಮಿಸುವ ಉದ್ದೇಶಕ್ಕಾಗಿ ಮಾರ್ಗಸೂಚಿ ಬೆಲೆಯ ಶೇಕಡ 25 ರಷ್ಟು ದರ ವಿಧಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲು ಸರ್ಕಾರವು ಆದೇಶಿಸಿದೆ.

1. ಸದರಿ ಜಮೀನನ್ನು ಯಾವ ಉದ್ದೇಶಕ್ಕಾಗಿ ಮಂಜೂರು ಮಾಡಲಾಗಿದೆಯೋ ಅದೇ ಉದ್ದೇಶಕ್ಕೆ ನಿಗಧಿಪಡಿಸಿರುವ ಅವಧಿಯಲ್ಲಿ ಬಳಸತಕ್ಕದ್ದು.
2. ಸದರಿ ಜಮೀನನ್ನು ಧಾರ್ಮಿಕ ಉದ್ದೇಶಕ್ಕಲ್ಲದೇ ಯಾವುದೇ ಇತರ ವಾಣಿಜ್ಯ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ.
3. ಸದರಿ ಜಮೀನಿನ ಹಿಂದೆ ಇರುವ ಸರ್ಕಾರಿ ಜಮೀನಿನ ಸಂಪರ್ಕ ರಸ್ತೆಗಾಗಿ ಅಗತ್ಯವಿರುವ ವಿಸ್ತೀರ್ಣದ ಜಾಗವನ್ನು ಬಿಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.617

ಇ. ಈಶ್ವರ ನಾಯಕ್
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಭೂ.ಮಂ).

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವಾಲಯ

ವಿಷಯ : ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡುವ ಸಂದರ್ಭದಲ್ಲಿ ಅನುಸರಿಸಬೇಕಾದ ಮೀಸಲಾತಿ ಬಗ್ಗೆ.

ಓದಲಾಗಿದೆ :
1) ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರ ಸುತ್ತೋಲೆ ಸಂ : ಸಿಎಫ್‌ಎಸ್ : ಪಿಡಿ : ಹೊನ್ಯಾಬೆ ಅಂ:44/05–06, ದಿ : 21–1–2006.
2) ಸರ್ಕಾರದ ಪತ್ರ ಸಂ : ಅನಾಸ 36 ಡಿಆರ್‌ಎ 2006 (ಭಾಗ–1), ದಿ : 01–02–2007
3) ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಇವರ ಪತ್ರ ಸಂ : ಸಿಎಫ್‌ಎಸ್ : ಪಿಡಿ : ನ್ಯಾಬೆ ಅಂ : 34:2008–09, ದಿ : 22–02–2010.

ಪ್ರಸ್ತಾವನೆ :

ಉಲ್ಲೇಖ (1)ರಲ್ಲಿನ ಆಯುಕ್ತರು, ಆಹಾರ ನಾಗರೀಕ ಸರಬರಾಜು ಇಲಾಖೆ ಇವರು ಹೊರಡಿಸಿದ ಸುತ್ತೋಲೆಯಲ್ಲಿ ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡುವ ಸಂದರ್ಭದಲ್ಲಿ ಖಾಸಗಿ ವ್ಯಕ್ತಿಗಳಿಗೆ ಮೀಸಲಾತಿ ಕುರಿತಂತೆ ಮತ್ತು ಅರ್ಹರಿಗೆ ಮಂಜೂರಾತಿ ನೀಡುವುದಕ್ಕೆ ಕ್ರಮ ಸಂ : 1 ರಿಂದ 15 ರವರೆಗೆ ನೀಡಿರುವ ಸೂಚನೆಗಳನ್ನು ಪಾಲಿಸಲು ತಿಳಿಸಿರುವುದು ಸರಿಯಷ್ಟೆ.

ಈ ಸಂಬಂಧದಲ್ಲಿ ಉಲ್ಲೇಖ (3)ರ ಪತ್ರದಲ್ಲಿ ಆಯುಕ್ತರು ಪ್ರಸ್ತಾವನೆ ಮಾಡಿರುವುದನ್ನು ಸರ್ಕಾರವು ಪರಿಶೀಲಿಸಿದೆ. ಅದರಂತೆ, ಖಾಸಗಿ ವ್ಯಕ್ತಿಗಳಿಗೆ ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡುವಾಗ ಶೇ. 15 ರಷ್ಟು ಪರಿಶಿಷ್ಟ ಜಾತಿಯವರಿಗೆ ಮತ್ತು ಶೇಕಡಾ 5 ರಷ್ಟು ಪರಿಶಿಷ್ಟ ಪಂಗಡಗಳಿಗೆ ಹಾಗೂ ಇತರೆ ಹಿಂದುಳಿದ ವರ್ಗಗಳಿಗೆ ಸರ್ಕಾರಿ ಆದೇಶ ಸಂ : ಸಕಇ 225 ಬಿಸಿಎ 2000, ದಿ : 30–03–2002ರಲ್ಲಿ ನೀಡಲಾಗಿರುವ ಮೀಸಲಾತಿಯಂತೆ ನೀಡುವಂತೆ ಉಲ್ಲೇಖ (1) ರ ದಿನಾಂಕ 21–01–2006 ರ ಸುತ್ತೋಲೆಯಲ್ಲಿ ಸೂಚನೆ ನೀಡಲಾಗಿದೆ. ಮುಂದುವರೆದಂತೆ ಉಲ್ಲೇಖ (2)ರ ಸರ್ಕಾರದ ದಿನಾಂಕ 1–2–2007ರ ಪತ್ರದಲ್ಲಿ ಸದರಿ ಸುತ್ತೋಲೆಯ ಕ್ರಮ ಸಂ : 10(ಡಿ)ಯ ನಿಬಂಧನೆಯನ್ನು ಮಾರ್ಪಡಿಸಿ, ಪರಿಶಿಷ್ಟ ಜಾತಿ/ಪಂಗಡದವರಿಗೆ ಮತ್ತು ಹಿಂದುಳಿದ ವರ್ಗದವರಿಗೆ ತಾಲ್ಲೂಕು ಪ್ರದೇಶವನ್ನು ಯೂನಿಟ್ ಆಗಿ ಪರಿಗಣಿಸಿ ತಾಲ್ಲೂಕಿನ ಸದರಿ ವರ್ಗದವರು ಹೆಚ್ಚು ಸಂಖ್ಯೆಯಲ್ಲಿ ವಾಸವಾಗಿರುವ ಗ್ರಾಮಗಳಲ್ಲಿ ಮಾತ್ರ ಕಡ್ಡಾಯವಾಗಿ ಮೀಸಲಾತಿಯನ್ನು ಜಾರಿಗೊಳಿಸತಕ್ಕದ್ದೆಂದು ಇಲಾಖಾ ಮುಖ್ಯಸ್ಥರಾದ ಆಯುಕ್ತರು, ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರಿಗೆ ನಿರ್ದೇಶಿಸಲಾಗಿದೆ.

ಅದರಂತೆ, ಸದರಿ ಸುತ್ತೋಲೆಯಲ್ಲಿನ ಸೂಚನೆಗಳು ಮತ್ತು ಮೀಸಲಾತಿ ಗಣನೆಗೆ ತೆಗೆದುಕೊಳ್ಳುವ ಕುರಿತು ಸಂಬಂಧಪಟ್ಟ ಪ್ರಾಧಿಕಾರಿಗಳಿಗೆ ಸುತ್ತೋಲೆ ರೂಪದಲ್ಲಿ ನೀಡಲ್ಪಟ್ಟಿವೆಯೇ ಹೊರತು ಸರ್ಕಾರದಿಂದ ಈ ಬಗ್ಗೆ ಯಾವುದೇ ಆದೇಶವನ್ನು ಹೊರಡಿಸಿರಲಿಲ್ಲವೆಂದು ಉಲ್ಲೇಖ (3)ರ ಪತ್ರದಲ್ಲಿ ಆಯುಕ್ತರು, ಆನಾಸ ಇವರು ಸರ್ಕಾರಕ್ಕೆ ಸಲ್ಲಿಸಿರುವ, ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆನಾಸ 14 ಎಫ್‌ಸಿಎಸ್ 2010, ಬೆಂಗಳೂರು, ದಿನಾಂಕ : 24ನೇ ಫೆಬ್ರವರಿ 2010

ಕರ್ನಾಟಕ ಅಗತ್ಯ ವಸ್ತುಗಳ (ಸಾವಿಪ) ನಿಯಂತ್ರಣ ಅದೇಶ 1992ರ ಅಡಿಯಲ್ಲಿ ನ್ಯಾಯಬೆಲೆ ಅಂಗಡಿ ಮಂಜೂರು ಮಾಡಲು ಅಧಿಕಾರವುಳ್ಳ ಪ್ರಾಧಿಕಾರಿಗಳು ಹೊಸ ನ್ಯಾಯ ಬೆಲೆ ಅಂಗಡಿ ಮಂಜೂರು ಮಾಡುವಾಗ ಮೇಲೆ ಓದಲಾದ ಉಲ್ಲೇಖ (1)ರ ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಇವರ ದಿ : 21–01–2006ರ ಸುತ್ತೋಲೆಯಲ್ಲಿನ ಸೂಚನೆಗಳ ಜೊತೆಗೆ ಸರ್ಕಾರಿ ಅದೇಶ ಸಂ : ಸಕಇ 225 ಬಿಸಿಎ 2000, ದಿ : 30–03–2002ರಲ್ಲಿ ಮೀಸಲಾಗಿರುವ ಮೀಸಲಾತಿಯಂತೆ ಖಾಸಗಿ ವ್ಯಕ್ತಿಗಳಲ್ಲಿ ಶೇ. 15 ರಷ್ಟು ಪರಿಶಿಷ್ಟ ಜಾತಿಯವರಿಗೆ ಮತ್ತು ಶೇಕಡಾ 5 ರಷ್ಟು ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗದವರಿಗೆ ತಾಲ್ಲೂಕು ಪ್ರದೇಶವನ್ನು ಯೂನಿಟ್ ಆಗಿ ಪರಿಗಣಿಸಿ ಬ್ಯಾಕ್‌ಲಾಗ್ ಮೀಸಲಾತಿ ಗಣನೆಗೆ ತೆಗೆದುಕೊಂಡು ಕಡ್ಡಾಯವಾಗಿ ಪಾಲಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಎಂ. ಹಿರೇಮಠ

ಸರ್ಕಾರದ ಅಧೀನ ಕಾರ್ಯದರ್ಶಿ,

ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಪಿ.ಆರ್.618

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಮಾನ್ಯ ಶಾಸಕರುಗಳ ಆಪ್ತ ಸಹಾಯಕರನ್ನು ನೇಮಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 90 ಶಿಸನೇ 96, ದಿನಾಂಕ : 28–11–96
2) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ : ಸಿಆಸುಇ 90 ಶಿಸನೇ 96, ದಿನಾಂಕ : 16–12–96
3) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 180 ಶಿಸನೇ 99, ದಿನಾಂಕ : 01–02–2000
4) ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 92 ಶಿಸನೇ 2000, ದಿನಾಂಕ : 16–08–2000
5) ಅಧಿಸೂಚನೆ ಸಂಖ್ಯೆ ಸಿಆಸುಇ 48 ಎಸ್‌ಅರ್‌ಆರ್ 2009 ದಿನಾಂಕ : 20–01–2010

ಪ್ರಸ್ತಾವನೆ :

ಮೇಲೆ ಓದಲಾದ (1) ಮತ್ತು (2)ರ ಅಧಿಕೃತ ಜ್ಞಾಪನಗಳಲ್ಲಿ ಮಾನ್ಯ ಶಾಸಕರ ಆಪ್ತ ಸಹಾಯಕರನ್ನು ಒದಗಿಸುವ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಮೇಲೆ ಓದಲಾದ (3)ರ ಆದೇಶದಲ್ಲಿ ಮೇಲೆ ಓದಲಾಗಿರುವ (1) ಮತ್ತು (2)ರ ಅಧಿಕೃತ ಜ್ಞಾಪನಗಳನ್ನು ಭಾಗಶಃ ಮಾರ್ಪಡಿಸಿ ರಾಜ್ಯ ಸರ್ಕಾರದ ಯಾವುದೇ ಇಲಾಖೆಗಳಲ್ಲಿನ ಗ್ರೂಪ್ ಸಿ ವೃಂದದ ನೌಕರರನ್ನು ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ನೇಮಿಸಲು ಅವಕಾಶ ಕಲ್ಪಿಸಲಾಗಿದೆ. ಮೇಲೆ ಓದಲಾದ (4)ರ ಅದೇಶದಲ್ಲಿ ನಿಗಮ ಮಂಡಳಿ : ಸ್ಥಳೀಯ ಸಂಸ್ಥೆಗಳು ಸ್ವಾಯುತ್ತ : ಶಾಸನಬದ್ಧ ಸಂಸ್ಥೆಗಳ ಗ್ರೂಪ್ ಸಿ ವೃಂದದ ನೌಕರರನ್ನು ಷರತ್ತಿಗೊಳಪಟ್ಟು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಅವಕಾಶ ನೀಡಿದೆ. ಮೇಲೆ (5)ರಲ್ಲಿ ಓದಲಾದ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15 ರನ್ವಯ ಮಾನ್ಯ ವಿಧಾನ ಸಭಾ ಮತ್ತು ವಿಧಾನ ಪರಿಷತ್ ಸದಸ್ಯರುಗಳ ಆಪ್ತ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಅವಕಾಶ ಕಲ್ಪಿಸಲಾಗಿದೆ.

ಅದರಂತೆ ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 177 ಅಹಿಸೇ 2009, ಬೆಂಗಳೂರು, ದಿನಾಂಕ : 23ನೇ ಫೆಬ್ರವರಿ 2010

ಸೂಕ್ತ ಪರಿಶೀಲನೆಯ ನಂತರ ಗ್ರೂಪ್ 'ಸಿ' ವೃಂದದಲ್ಲಿ ಪ್ರಥಮ ದರ್ಜೆ ಸಹಾಯಕರ/ದ್ವಿತೀಯ ದರ್ಜೆ ಸಹಾಯಕರು/ಶೀಘ್ರಲಿಪಿಗಾರರಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಮಾತ್ರ ಅವರ ವಿದ್ಯಾರ್ಹತೆಯನುಸಾರ ಕಂದಾಯ ಇಲಾಖೆಯಲ್ಲಿ ಮಂಜೂರಾಗಿರುವ ಪ್ರಥಮ ದರ್ಜೆ ಸಹಾಯಕರ/ದ್ವಿತಿಯ ದರ್ಜೆ ಸಹಾಯಕರ/ಶೀಘ್ರಲಿಪಿಗಾರರ ಹುದ್ದೆಗಳಿಗೆದುರಾಗಿ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15(1)(ಬಿ)(vii)ರನ್ನಯ ಮಾನ್ಯ ಶಾಸಕರ ಆಪ್ತ ಸಹಾಯಕರಾಗಿ ಸರ್ಕಾರದಿಂದ ಅನುಮೋದಿಸಲ್ಪಟ್ಟ ಮತ್ತು ನಿಬಂಧನೆಗಳಿಗೆ ಒಳಪಟ್ಟು ನೇಮಿಸಲು ಅವಕಾಶ ನೀಡಿದೆ.

ಗುತ್ತಿಗೆ ನೇಮಕಾತಿಯು ಮೇಲೆ (5)ರಲ್ಲಿ ಓದಲಾದ ಅಧಿಸೂಚನೆ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿ : 27–01–2010 ರಿಂದ ಜಾರಿಗೆ ಬರುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಆಇ 923 ಸೇವೆಗಳು–1/09 ದಿನಾಂಕ : 7–08–2009ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎನ್. ಕೃಷ್ಣಮೂರ್ತಿ

ಪಿ.ಆರ್.619

ಸರ್ಕಾರದ ಅಧೀನ ಕಾರ್ಯದರ್ಶಿ,

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಿಬ್ಬಂದಿ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಧಾರವಾಡ ಮತ್ತು ಮಂಗಳೂರಿನ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ ಸಿಬ್ಬಂದಿ ನೇಮಕಾತಿ ಹಾಗೂ ವೇತನ ಶ್ರೇಣಿ ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ : 1) ನಿರ್ದೇಶಕರು (ತಾಂತ್ರಿಕ) ಇವರು ಪತ್ರ ಸಂ : ಕ.ವಿ.ತಂ.ಆ/ಸ.ಸಭೆ/9/2009, ದಿನಾಂಕ : 15–10–2009.

ಪ್ರಸ್ತಾವನೆ :

ಮೇಲೆ ಓದಲಾದ (1) ರಲ್ಲಿನ ನಿರ್ದೇಶಕರು (ತಾಂತ್ರಿಕ) ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಧಾರವಾಡ ಮತ್ತು ಮಂಗಳೂರಿನ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಲು ಮತ್ತು

ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರದ ಕರ್ನಾಟಕ ನಾಗರೀಕ ಸೇವಾ ನಿಯಮದಂತೆ ವೇತನ ಶ್ರೇಣಿ ಮತ್ತು ಇತರೇ ಭತ್ಯೆಗಳನ್ನು ನಿಗಧಿಪಡಿಸಲು ದಿನಾಂಕ : 14–10–2009ರಂದು ನಿರ್ದೇಶಕರು (ತಾಂತ್ರಿಕ) ಇವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಒಂದು ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ 20 ಹುದ್ದೆಗಳನ್ನು ಸೃಜನೆ ಮಾಡಬೇಕಾಗಿದ್ದು, ಈ ಸಿಬ್ಬಂದಿಗೆ ಬೇಕಾದ ತರಬೇತಿಯನ್ನು ಎನ್.ಸಿ.ಎಸ್.ಎಮ್ ಕೊಲ್ಕತ್ತ ಸಂಸ್ಥೆಯು ನೀಡುತ್ತದೆ. ಈ ವಿಜ್ಞಾನ ಕೇಂದ್ರಗಳ ಆಡಳಿತಾತ್ಮಕ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗಿರುತ್ತದೆ. ರಾಜ್ಯ ಸರ್ಕಾರದಲ್ಲಿ ಹಾಲಿ ಜಾರಿಯಲ್ಲಿರುವ ವೇತನ ಶ್ರೇಣಿಯನ್ನು ನಿಗದಿಪಡಿಸಬೇಕಾಗಿರುತ್ತದೆ. ಆದ್ದರಿಂದ ಆರ್ಥಿಕ ಇಲಾಖೆಯ ಸಹಮತಿಯ ಮೇರೆಗೆ ಧಾರವಾಡ ಮತ್ತು ಮಂಗಳೂರಿನ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ ಸಿಬ್ಬಂದಿಗಳ ನೇಮಕ ಮತ್ತು ವೇತನ ಶ್ರೇಣಿಗಳನ್ನು ನಿಗಧಿಪಡಿಸಬೇಕಾಗಿರುತ್ತದೆ.

ಸರ್ಕಾರವು ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 175 ವಿತ್ರಮ 2009, ಬೆಂಗಳೂರು, ದಿನಾಂಕ : 9ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನಲೆಯಲ್ಲಿ ಧಾರವಾಡ ಮತ್ತು ಮಂಗಳೂರಿನ ಪ್ರಾದೇಶಿಕ ವಿಜ್ಞಾನ ಕೇಂದ್ರಗಳಿಗೆ ಕೆಳಕಂಡ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲು ಮತ್ತು ಸಿಬ್ಬಂದಿಗಳಿಗೆ ರಾಜ್ಯ ಸರ್ಕಾರದ ಕರ್ನಾಟಕ ನಾಗರೀಕ ಸೇವಾ ನಿಯಮದಂತೆ ವೇತನ ಶ್ರೇಣಿ ಮತ್ತು ಇತರೇ ಭತ್ಯೆಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನಿಗಧಿಪಡಿಸಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಹುದ್ದೆ	ಹುದ್ದೆಗಳ ಸಂಖ್ಯೆ	ವೇತನ ಶ್ರೇಣಿ
1.	Senior Curator	1	ರೂ. 10800–20025
2.	Curator	1	ರೂ. 10000–18150
3.	Education Assistant	2	ರೂ. 8825–16000
4	Technical Assistant	1	ರೂ. 8000–14800
5	First Division Assistant	2	ರೂ. 7275–13350
6	Technicians	8	ರೂ. 6250–12000
7	Steno Grapher	1	ರೂ. 7725–13350
8	Second Division Assistant	2	ರೂ. 5800–10500
9	Driver	2	ರೂ. 5800–10500
	ಒಟ್ಟು ಹುದ್ದೆಗಳು	20	

1. ಜ್ಯೂನಿಯರ್ ಸ್ಟೆನೋ ಹುದ್ದೆಯು ರಾಜ್ಯ ಸರ್ಕಾರದ ವೇತನ ಶ್ರೇಣಿಯಲ್ಲಿ ಇಲ್ಲದಿರುವುದರಿಂದ ಈ ಹುದ್ದೆಯ ಬದಲಿಗೆ ಶೀಘ್ರಲಿಪಿಗಾರ ಹುದ್ದೆಯನ್ನು ಸೃಜಿಸಲಾಗಿದ್ದು, ಬೆರಳಚ್ಚುಗಾರರ ಕಾರ್ಯವನ್ನು ಶೀಘ್ರಲಿಪಿಗಾರರೇ ನಿರ್ವಹಿಸತಕ್ಕದ್ದು ಮತ್ತು ಯಾವುದೇ ಕಾರಣಕ್ಕೂ ಬೆರಳಚ್ಚುಗಾರರ ಹುದ್ದೆಯನ್ನು ಸೃಜಿಸತಕ್ಕದ್ದಲ್ಲ.

2. ಪರಿಷ್ಕೃತ ಮಾರ್ಗಸೂಚಿಯಂತೆ Assistant (General) ಹುದ್ದೆಯನ್ನು ಸೃಜಿಸಬೇಕಾಗಿದ್ದು, ರಾಜ್ಯ ಸರ್ಕಾರದ ವೇತನ ಶ್ರೇಣಿಯಲ್ಲಿ ಈ ಹುದ್ದೆಯು ಇಲ್ಲದ ಕಾರಣ ಪ್ರಥಮ ದರ್ಜೆ ಸಹಾಯಕ ಹುದ್ದೆಯನ್ನು ಸೃಜಿಸಲಾಗಿದೆ.

3. ಮೇಲಿನ ಸಿಬ್ಬಂದಿಗಳನ್ನು ಎನ್.ಸಿ.ಎಸ್.ಎಮ್ ಕೊಲ್ಕತ್ತ ಇವರ ಮಾರ್ಗಸೂಚಿಯನ್ವಯ ನೇಮಕಾತಿ ಮಾಡಿಕೊಳ್ಳತಕ್ಕದ್ದು. ಹಾಗೂ ಸದರಿ ಹುದ್ದೆಗಳ ವೇತನ ಭತ್ಯೆಯನ್ನು ರಾಜ್ಯ ಸರ್ಕಾರವು ಬಿಡುಗಡೆ ಮಾಡಿದ ಆಯವ್ಯಯದ ಮಿತಿಯಲ್ಲಿ ಭರಿಸತಕ್ಕದ್ದು.

4. ನೇಮಕಾತಿ ಮಾಡಿಕೊಂಡ ಸಿಬ್ಬಂದಿಯನ್ನು ಎನ್.ಸಿ.ಎಸ್.ಎಮ್ ಕೊಲ್ಕತ್ತ ಇವರು ಏರ್ಪಡಿಸುವ ತರಬೇತಿ ಕಾರ್ಯಕ್ರಮಕ್ಕೆ ಕಳುಹಿಸಿಕೊಡತಕ್ಕದ್ದು.

5. ಪರಿಷ್ಕೃತ ಮಾರ್ಗಸೂಚಿಯಲ್ಲಿ Curator ಮತ್ತು Education Assistant ತಲಾ 2 ಹುದ್ದೆಗಳನ್ನು ಸೃಜಿಸಬೇಕಾಗಿದ್ದು, ರಾಜ್ಯ ಸರ್ಕಾರದ ಆರ್ಥಿಕ ಸಹಾಯಾನುದಾನಕ್ಕೆ ಸೀಮಿತಗೊಳಿಸಿ Curator ಮತ್ತು Education Assistant ಹುದ್ದೆಗಳನ್ನು ತಲಾ ಒಂದು ಹುದ್ದೆಗೆ ಸೀಮಿತಗೊಳಿಸಲಾಗಿದೆ.

6. ಮೇಲೆ ತಿಳಿಸಿರುವ 20 ಹುದ್ದೆಗಳಿಗೆ ಮುಂಬಡ್ತಿ ನೀಡುವಂತಹ ಸಂದರ್ಭದಲ್ಲಿ ಕ್ರಮ ಸಂಖ್ಯೆ 1 ರಿಂದ 9 ಹುದ್ದೆಗಳಿಗೆ ರಾಜ್ಯ ಸರ್ಕಾರದ ಕರ್ನಾಟಕ ನಾಗರೀಕ ಸೇವಾ ನಿಯಮಗಳನ್ವಯ ಮುಂಬಡ್ತಿ ನೀಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ : ಆಇ 349 ವೆಚ್ಚ. 2/2009, ದಿನಾಂಕ : 29-01-2010 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.620

ಕೆ. ಬೋರಲಿಂಗಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 2800.00 ಲಕ್ಷಗಳಲ್ಲಿ ಕಲ್ಪಿಸುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ವ್ಯ.ನಿ., ಕನನೀಸ ಮತ್ತು ಒಚ ಮಂಡಳಿ ಬೆಂಗಳೂರು ರವರ ಪತ್ರ ಸಂಖ್ಯೆ:ಕಜಮಂ/ಮುಅ (ಉ)/ಆಶ್ರೇಕಾಅ(ಬೆ)/ಉಮುಅ-1/ತಾಸ-5/ಸಅ-2/ಹೊನ್ನಾವರ/1657/2009-10 ದಿನಾಂಕ 16.09.2009.

ಪ್ರಸ್ತಾವನೆ :

ಹೊನ್ನಾವರ ಪಟ್ಟಣವು ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ತಾಲ್ಲೂಕು ಕೇಂದ್ರವಾಗಿದ್ದು 2001ನೇ ಸಾಲಿನ ಜನಗಣತಿಯ ಪ್ರಕಾರ ಈ ಪಟ್ಟಣದ ಜನಸಂಖ್ಯೆಯು 17824 ಇದ್ದು, ಪ್ರಸ್ತುತ 20000 ಇರುತ್ತದೆ. 2026ನೇ ಇಸವಿಯ ಮಧ್ಯಂತರ ಘಟ್ಟದಲ್ಲಿ 24,661 ಹಾಗೂ ಅಂತಿಮ ಘಟ್ಟ 2041ರಲ್ಲಿ 30752 ಜನಸಂಖ್ಯೆಯನ್ನು ನಿರೀಕ್ಷಿಸಲಾಗಿದೆ. ಹಾಲಿ ಈ ಪಟ್ಟಣಕ್ಕೆ ದಿವಳ್ಳಿ ಗ್ರಾಮದ ಹತ್ತಿರ ಇರುವ ಅಘನಾಶಿನಿ ನದಿ ಮೂಲವಾಗಿಟ್ಟುಕೊಂಡು 2021ರಲ್ಲಿ ಅಂದಾಜಿಸಲಾದ 35000 ಜನಸಂಖ್ಯೆಗೆ ತಲಾ ದಿನಂಪ್ರತಿ 113 ಲೀಟರ್ ನೀರು ಪರಿಗಣಿಸಿ ವಿನ್ಯಾಸಿಸಲಾಗಿದ್ದು, ಪ್ರಸ್ತುತ ತಲಾ ದಿನಂಪ್ರತಿ 100 ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ಸದರಿ ನೀರು ಸರಬರಾಜು ನಿರ್ವಹಣೆಯನ್ನು ಸ್ಥಳೀಯ ಸಂಸ್ಥೆ ನಿರ್ವಹಿಸುತ್ತಿದ್ದು, ಪ್ರಸ್ತುತ ನೀರು ಸರಬರಾಜು ಸ್ಥಿತಿಯನ್ನು ಕೊಳವೆ ಬಾವಿ ಮತ್ತು ತೆರೆದ ಬಾವಿ ಮೂಲಗಳಿಂದ ಉತ್ತಮಪಡಿಸಬಹುದಾಗಿದೆ.

ಹೊನ್ನಾವರ ಪಟ್ಟಣದಲ್ಲಿ ಪ್ರಸ್ತುತ ಒಳಚರಂಡಿ ಯೋಜನೆ ಇರುವುದಿಲ್ಲ. ಆದರೆ, ಕೆಲವು ಬಡಾವಣೆಗಳಲ್ಲಿ ಸೆಪ್ಟಿಕ್ ಟ್ಯಾಂಕ್ ಮತ್ತು ಇಂಗುತೊಟ್ಟಿಯ ಮೂಲಕ ವೈಯಕ್ತಿಕ ನೆಲೆಗಟ್ಟಿನಲ್ಲಿ ವ್ಯವಸ್ಥೆಯನ್ನು ಮಾಡಿಕೊಂಡಿರುತ್ತಾರೆ. ನಾಗರೀಕರ ಆರೋಗ್ಯ ಮತ್ತು ನೈರ್ಮಲ್ಯ ದೃಷ್ಟಿಯಿಂದ ಒಳಚರಂಡಿ ಯೋಜನೆ ಅವಶ್ಯಕತೆ ಇರುತ್ತದೆ.

ಅದರಂತೆ ಮಂಡಳಿ ಮತ್ತು ಲೋಕೋಪಯೋಗಿ ಇಲಾಖೆಯ 2009-10ನೇ ದರಪಟ್ಟಿಯನ್ವಯ ಯೋಜನೆಯ ಅಂದಾಜನ್ನು ರೂ. 2800.00 ಲಕ್ಷಗಳಿಗೆ ತಯಾರಿಸಿ ಒಳಚರಂಡಿ ಯೋಜನೆಯಡಿ ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಯೋಜನೆಯನ್ನು ಕೈಗೆತ್ತಿಕೊಳ್ಳಲು ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ರವರು ಮೇಲೆ ಓದಲಾದ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ರಾಜ್ಯ ಸರ್ಕಾರದ ಸಾಲ	ಶೇ.30	ರೂ.	840.00	ಲಕ್ಷಗಳು
ಆರ್ಥಿಕ ಸಂಸ್ಥೆಯಿಂದ ಸಾಲ	ಶೇ.50	ರೂ.	1400.00	ಲಕ್ಷಗಳು
ಸ್ಥಳೀಯ ಸಂಸ್ಥೆ ವಂತಿಕೆ	ಶೇ. 20	ರೂ.	560.00	ಲಕ್ಷಗಳು
	ಒಟ್ಟು	ರೂ.	2800.00	ಲಕ್ಷಗಳು

ಸದರಿ ಯೋಜನೆಯನ್ನು 2009–10ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಕ್ರಿಯಾ ಯೋಜನೆಯ ಪ್ರವರ್ಗ–ಡಿ ಯಡಿಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ರೂ.934.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 19 ಯುಡಿಎಸ್ 2009, ಬೆಂಗಳೂರು, ದಿನಾಂಕ: 2ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಅಂದಾಜು ರೂ. 2800.00 ಲಕ್ಷಗಳಲ್ಲಿ (ರೂ. ಎರಡು ಸಾವಿರದ ಎಂಟು ನೂರು ಲಕ್ಷಗಳಲ್ಲಿ ಮಾತ್ರ) ಕಲ್ಪಿಸುವ ಯೋಜನೆಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು **"ಒಳಚರಂಡಿ ಯೋಜನೆಯಡಿ"** ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು, ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) ETP and escalation charges should not be more than 5% and the estimate should be revised accordingly.
2) Water rates as proposed by KUWS&DB have to be implemented to meet O&M cost.
3) KTPP provisions, quality control and timely completion of the project should be ensured.
4) Ensure Environment Impact Assessment (EIA) Study as well as pollution control Board's clearance, before commencement of Project.
5) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ನ್ನು ಪಾಲಿಸುವುದು.
6) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡಕೂಡದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD 43 Exp-9:2010 ದಿನಾಂಕ 02.02.2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.628

(ಸಿ.ಟಿ. ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಕೃಷ್ಣ ನದಿ ಮೂಲದಿಂದ ಬಾಗಲಕೋಟೆ ಜಿಲ್ಲೆಯ ರಬಕವಿ–ಬನಹಟ್ಟಿ ನಗರಸಭೆಗೆ ಸೇರಿದ ಬನಹಟ್ಟಿ ಪಟ್ಟಣಕ್ಕೆ ನೀರು ಸರಬರಾಜು ಸುಧಾರಣಾ ಯೋಜನೆಯನ್ನು ಅಂದಾಜು ರೂ. 1718.00 ಲಕ್ಷಗಳಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡುವ ಕುರಿತು.

ಓದಲಾಗಿದೆ : ವ್ಯ.ನಿ., ಕನನೀಸ ಒಚ ಮಂಡಳಿರವರ ಪತ್ರ ಸಂಖ್ಯೆ:ಕಜಮಂ: ಮುಅ(ಉ):ಅಅ(ಬೆ):ಉಮುಅ:ತಾಸ–2:ಸಅ–3:ಬನಹಟ್ಟಿ 2009–10/2299, ದಿನಾಂಕ 13.11.2009.

ಪ್ರಸ್ತಾವನೆ :

ಬನಹಟ್ಟಿ ಪಟ್ಟಣವು ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲ್ಲೂಕಿನ ರಬಕವಿ–ಬನಹಟ್ಟಿ ನಗರ ಸಭೆಯ ವ್ಯಾಪ್ತಿಗೆ ಒಳಪಡುವ ನಾಲ್ಕು ಪಟ್ಟಣಗಳಲ್ಲಿ ಒಂದಾಗಿದ್ದು, ರಬಕವಿ, ರಾಂಪುರ ಮತ್ತು ಹೊಸೂರು ಇತರ 3 ಪಟ್ಟಣಗಳು. ಬನಹಟ್ಟಿ ಪಟ್ಟಣದ ಜನಸಂಖ್ಯೆಯು ಸುಮಾರು 40,000 ಗಳಿರುತ್ತದೆ. ರಬಕವಿ–ಬನಹಟ್ಟಿ ನಗರ ಸಭೆ ವ್ಯಾಪ್ತಿಯ ನಾಲ್ಕು ಪಟ್ಟಣಗಳಿಗೆ ಮೂಲ ನೀರು ಸರಬರಾಜು ವ್ಯವಸ್ಥೆಯು ಕೃಷ್ಣ ನದಿ ಮೂಲದಿಂದ 1968ರಲ್ಲಿ ಅನುಷ್ಠಾನಗೊಳಿಸಿದ್ದು, ನಾಲ್ಕು ಪಟ್ಟಣದ ಒಟ್ಟು 60000 ಜನಸಂಖ್ಯೆಗೆ ತಲಾ ದಿನಂಪ್ರತಿ 60 ಲೀಟರ್‌ನಂತೆ ನೀರು ಸರಬರಾಜು ಮಾಡಲು ವಿನ್ಯಾಸಿಸಲಾಗಿತ್ತು. ಸದರಿ ಪಟ್ಟಣಗಳು ಶೀಘ್ರವಾಗಿ ಬೆಳೆಯುತ್ತಿರುವ ಕಾರಣ 1992ರಲ್ಲಿ ಸರ್ಕಾರವು ರೂ. 922.80 ಲಕ್ಷಗಳ ಅಂದಾಜಿನಲ್ಲಿ ಹೆಚ್ಚುವರಿ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡಿದ್ದು, ಸದರಿ ಯೋಜನೆಯನ್ನು ಅನುಷ್ಠಾನಗೊಳಿಸಿ 2002ರಲ್ಲಿ ಚಾಲನೆಗೊಳಿಸಲಾಗಿದೆ. ಈ ಯೋಜನೆಯನ್ನು 2021ರಲ್ಲಿ ನಿರೀಕ್ಷಿಸಲಾದ 1,50,000 ಜನರಿಗೆ ತಲಾ ದಿನಂಪ್ರತಿ 135 ಲೀಟರ್‌ನಂತೆ ನೀರು ಸರಬರಾಜು ಮಾಡಲು ವಿನ್ಯಾಸಿಸಲಾಗಿದೆ.

ನಿರ್ವಹಣಾ ದೃಷ್ಟಿಯನ್ನು ಪರಿಗಣಿಸಿ, ಹಳೆ ಯೋಜನೆಯನ್ನು ಬನಹಟ್ಟಿ ಪಟ್ಟಣಕ್ಕೆ ಮತ್ತು ಹೆಚ್ಚುವರಿ ಯೋಜನೆಯನ್ನು ಇತರೇ 3 ಪಟ್ಟಣಗಳ ಉಪಯುಕ್ತತೆಗೆ ಪ್ರತ್ಯೇಕಿಸಲಾಗಿದೆ. ಹಳೆಯ ಯೋಜನೆಯಲ್ಲಿ ಜಾಕವೆಲ್ ಕಂ ಪಂಪ್ ಮನೆ ದುರಸ್ತಿ, 125 ಹೆಚ್.ಪಿ.ಡೀಪವೆಲ್ ಟರ್ಬೈನ್ ಪಂಪ್ ಬದಲಾವಣೆ, ಸಿ.ಐ.ಕಚ್ಚಾನೀರಿನ ಏರು ಕೊಳವೆ ಮಾರ್ಗ ಸರಿಪಡಿಸುವಿಕೆ, ಜಲಶುದ್ಧೀಕರಣ ಘಟಕದ ಮೇಜರ್ ದುರಸ್ತಿ, ಇತ್ಯಾದಿಗಳನ್ನಲ್ಲದೆ ಹೊಸ ಬಡಾವಣೆಗಳಿಗೆ ಮೇಲ್ಮಟ್ಟ ಜಲಸಂಗ್ರಹಗಾರ ನಿರ್ಮಾಣ, ವಿತರಣಾ ವ್ಯವಸ್ಥೆ ರೀಮಾಡಲಿಂಗ್, ಅಗತ್ಯವಿರುವುದರಿಂದ ಬನಹಟ್ಟಿ ಪಟ್ಟಣಕ್ಕೆ ಸಮರ್ಪಕ ನೀರು ಸರಬರಾಜು ಇರುವುದಿಲ್ಲ.

ಕೃಷ್ಣ ನದಿ ಮೂಲದಿಂದ ಹಾಲಿ ಇರುವ ಯೋಜನೆಯನ್ನು ಸುಧಾರಣೆಗೊಳಿಸಲು ಯೋಜನಾ ವರದಿಯನ್ನು ತಯಾರಿಸಲಾಗಿದ್ದು, ಬನಹಟ್ಟಿ ಪಟ್ಟಣದಲ್ಲಿ 2026 ಮಧ್ಯಂತರ ಅವಧಿಗೆ ನಿರೀಕ್ಷಿಸಲಾದ 57000 ಜನಸಂಖ್ಯೆಗೆ ಮತ್ತು 2041ರ ಅಂತಿಮ ಅವಧಿಗೆ ನಿರೀಕ್ಷಿಸಲಾದ 69000 ಜನಸಂಖ್ಯೆಗೆ ತಲಾ ದಿನಂಪ್ರತಿ 135 ಲೀಟರ್‌ನಂತೆ ನೀರು ಸರಬರಾಜು ಮಾಡಲು ಒಟ್ಟು 14 ಎಂ.ಎಲ್.ಡಿ., ನೀರು ಪಡೆಯಲು ಉದ್ದೇಶಿಸಿ ಯೋಜನೆಯನ್ನು ವಿನ್ಯಾಸಿಸಲಾಗಿದೆ. ಬನಹಟ್ಟಿ ಪಟ್ಟಣಕ್ಕೆ ನೀರು ಸರಬರಾಜು ಸುಧಾರಣಾ ಯೋಜನೆಯ ಅಂದಾಜು ಪಟ್ಟಿಯನ್ನು 2009–10ನೇ ಸಾಲಿನ ಚಾಲ್ತಿದರ ಪಟ್ಟಿ, ಸಾಮಗ್ರಿಗಳಿಗೆ ಮಂಡಳಿಯ ದರ ಒಪ್ಪಂದ ಮತ್ತು ಮಾರುಕಟ್ಟೆಯ ದರಗಳನ್ನಾಧರಿಸಿ ರೂ.1718.00 ಲಕ್ಷಗಳಿಗೆ ತಯಾರಿಸಿ, ಯೋಜನೆಯನ್ನು ಈ ಕೆಳಕಂಡ ಆರ್ಥಿಕ ಮಾದರಿಯಲ್ಲಿ ಕೈಗೆತ್ತಿಕೊಳ್ಳಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕನನೀಸ ಮತ್ತು ಒಚ ಮಂಡಳಿ ರವರು ಮೇಲೆ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸರ್ಕಾರದಿಂದ ಅನುದಾನ (ಶೇ. 50 ರಷ್ಟು)	ರೂ.	859.00	ಲಕ್ಷಗಳು
ಆರ್ಥಿಕ ಸಂಸ್ಥೆಗಳಿಂದ ಸಾಲ (ಶೇ. 50 ರಷ್ಟು)	ರೂ.	859.00	ಲಕ್ಷಗಳು
ಒಟ್ಟು	ರೂ.	1718.00	ಲಕ್ಷಗಳು

ಸದರಿ ಯೋಜನೆಯನ್ನು 2009–10ನೇ ಸಾಲಿನ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕ್ರಿಯಾ ಯೋಜನೆಯ ಪ್ರವರ್ಗ–ಡಿ ಯಡಿಯಲ್ಲಿ ಸೇರಿಸಿ ಪ್ರಸ್ತುತ ಸಾಲಿನಲ್ಲಿ ರೂ.573.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಮಂಡಳಿಯ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 29 ಯುಡಬ್ಲ್ಯೂಎಸ್ 2009, ಬೆಂಗಳೂರು, ದಿನಾಂಕ: 2ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕೃಷ್ಣಾ ನದಿ ಮೂಲದಿಂದ ಬಾಗಲಕೋಟೆ ಜಿಲ್ಲೆ ರಬಕವಿ ಬನಹಟ್ಟಿ ನಗರ ಸಭೆಗೆ ಸೇರಿದ ಬನಹಟ್ಟಿ ಪಟ್ಟಣಕ್ಕೆ ನೀರು ಸರಬರಾಜು ಸುಧಾರಣಾ ಯೋಜನೆಯನ್ನು ಅಂದಾಜು ರೂ. 1718.00 ಲಕ್ಷಗಳಲ್ಲಿ (ರೂ. ಒಂದು ಸಾವಿರದ ಏಳು ನೂರ ಹದಿನೆಂಟು ಲಕ್ಷಗಳು ಮಾತ್ರ) ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು **"ನಗರ ನೀರು ಸರಬರಾಜು ಯೋಜನೆಯಡಿ"** ಕೈಗೆತ್ತಿಕೊಳ್ಳಲು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಸರ್ಕಾರದ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ.

1) ETP, escalation charges should not be more than 5% and the estimate should be revised accordingly.
2) Water rates as proposed by KUWS&DB have to be implemented to meet O&M cost.
3) KTPP provisions, quality control and timely completion of the project should be ensured.
4) ಸದರಿ ಕಾಮಗಾರಿಯನ್ನು ಕೈಗೊಳ್ಳುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ನ್ನು ಪಾಲಿಸುವುದು.
5) ಅಂದಾಜು ಪರಿಷ್ಕರಣೆಗೆ ಯಾವುದೇ ಅವಕಾಶ ನೀಡಕೂಡದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ FD 69 Exp-9:2010 ದಿನಾಂಕ 03.02.2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.629

(ಸಿ.ಟಿ. ನಾರಾಯಣಸ್ವಾಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎನ್. ಸುಬ್ಬರಾವ್, ವಿಚಾರಣಾಧಿಕಾರಿಗಳು, ಹಾಗೂ ಜಿಲ್ಲಾ ಸೆಷನ್ಸ್ (ನಿವೃತ್ತ), ಇವರಿಗೆ ವಿಚಾರಣಾ ವರದಿ ಸಲ್ಲಿಸಿರುವುದಕ್ಕಾಗಿ ಗೌರವ ಧನ ಮತ್ತು ವಾಹನ ಭತ್ಯೆ ಮಂಜೂರಾತಿ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 06 ಇಮುವಿ 2008 ದಿನಾಂಕ 17.01.2009.
2) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ 15.10.2009.

ಪ್ರಸ್ತಾವನೆ :

ಶ್ರೀ ಪಿ.ವೈ. ರಾಜೇಂದ್ರ ಕುಮಾರ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ಇಲ್ಲಿ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಗಣಕ ಯಂತ್ರಗಳ ಖರೀದಿಯಲ್ಲಿ ನಿಯಮಗಳನ್ನು ಉಲ್ಲಂಘಿಸಿ ಕರ್ತವ್ಯ ಲೋಪ ಹಾಗೂ ಹಣ ದುರುಪಯೋಗ ಎಸಗಿರುವ ಮತ್ತು ಅಧಿಕಾರ ದುರುಪಯೋಗ ಪಡಿಸಿಕೊಂಡಿರುವ ಒಟ್ಟು 7 ಆರೋಪಗಳಿಗಾಗಿ ಸದರಿ ಅಧಿಕಾರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಮೇಲೆ ಓದಲಾದ (1)ರಲ್ಲಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಇವರನ್ನು ವಿಚಾರಣಾಧಿಕಾರಿಯಾಗಿ ನೇಮಿಸಲಾಗಿತ್ತು. ಮೇಲೆ ಓದಲಾದ (2)ರಲ್ಲಿ ವಿಚಾರಣಾಧಿಕಾರಿಗಳು ದಿನಾಂಕ 15.10.2009 ರಂದು ವಿಚಾರಣೆಯ ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ವಿಚಾರಣಾಧಿಕಾರಿಯವರಿಗೆ ಗೌರವ ಧನ ಮತ್ತು ವಾಹನ ಭತ್ಯೆಯನ್ನು ನೀಡುವ ಕುರಿತು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 06 ಇಮುವಿ 2008, ಬೆಂಗಳೂರು, ದಿನಾಂಕ 1ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ವಿಚಾರಣಾ ವರದಿ ಸಲ್ಲಿಸಿರುವ ಕಾರಣ ಇವರಿಗೆ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 22 ಸೇಇವಿ 2007, ದಿನಾಂಕ 11.04.2008 ರನ್ವಯ, ರೂ. 8000/–ಗಳ ಗೌರವಧನ ಹಾಗೂ ರೂ. 1500/– ಗಳ ವಾಹನ ಭತ್ಯೆಯನ್ನು ಪಾವತಿ ಮಾಡಬೇಕೆಂದು ಆದೇಶಿಸಿದೆ.

ಈ ವೆಚ್ಚವನ್ನು ಆಯವ್ಯಯದ ಲೆಕ್ಕಶೀರ್ಷಿಕೆ 2052/ಸಚಿವಾಲಯ, ಸಾಮಾನ್ಯ ಸೇವೆಗಳು–090 ಸಚಿವಾಲಯ–01. ಕರ್ನಾಟಕ ಸರ್ಕಾರ ಸಚಿವಾಲಯ–051, ಸಾಮಾನ್ಯ ವೆಚ್ಚಗಳು ಇಲ್ಲಿ ಭರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.630

(ಎಂ.ಎಸ್. ಶಿವರಾಮ್)
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಸೇವೆಗಳು–3)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಗೌರವ ಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ Law Clerks-cum-Research Assistants ಹುದ್ದೆಗಳನ್ನು ಮುಂದುವರಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂ:ಸಿಆಸುಇ 29 ಸೇಉನ್ಯಾ 2006, ದಿನಾಂಕ 12.04.2006.
2) ಸರ್ಕಾರಿ ಆದೇಶ ಸಂ:ಸಿಆಸುಇ 84 ಸೇಉನ್ಯಾ 2006, ದಿನಾಂಕ 25.01.2007.
3) ಸರ್ಕಾರಿ ಆದೇಶ ಸಂ:ಸಿಆಸುಇ 09 ಸೇಉನ್ಯಾ 2008, ದಿನಾಂಕ 05.02.2008.
4) ಸರ್ಕಾರಿ ಆದೇಶ ಸಂ:ಸಿಆಸುಇ 29 ಸೇಉನ್ಯಾ 2009, ದಿನಾಂಕ 09.02.2009.
5) ಕರ್ನಾಟಕ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್ ಜನರಲ್‌ರವರ ಪತ್ರ ಸಂ: ಹೆಚ್‌ಸಿಇ 623/2006, ದಿನಾಂಕ 06.01.2010.

ಪ್ರಸ್ತಾವನೆ :

ಮೇಲೆ (1) ರಲ್ಲಿ ಓದಲಾದ ದಿನಾಂಕ 12.4.2006 ರ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಕಾನೂನು ಪದವೀಧರರನ್ನು ರೂ. 6,000/– ಗಳ ಗೌರವ ಧನದ ಆಧಾರದ ಮೇಲೆ Law Clerks-cum-Research Assistants ಗಳಾಗಿ 1 ವರ್ಷದ ಅವಧಿಗೆ ನೇಮಿಸಿಕೊಳ್ಳಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿತ್ತು. ಆನಂತರದ ಮೇಲೆ (2)ರಲ್ಲಿ ಓದಲಾದ ದಿನಾಂಕ 25.01.2007ರ ಸರ್ಕಾರಿ ಆದೇಶದಲ್ಲಿ ಸದರಿ ಗೌರವ ಧನವನ್ನು ರೂ. 10,000/– ಗಳಿಗೆ

ಹೆಚ್ಚಿಸಲಾಗಿತ್ತು, ಸದರಿ ಹುದ್ದೆಯನ್ನು ಮೇಲೆ (3) ಮತ್ತು (4) ರ ಸರ್ಕಾರಿ ಆದೇಶಗಳಲ್ಲಿ ಒಂದೊಂದು ವರ್ಷಕ್ಕೆ ಮುಂದುವರೆಸಲಾಗಿತ್ತು. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ಅವರು ಮೇಲೆ (5) ರಲ್ಲಿ ಓದಲಾದ ದಿನಾಂಕ 6.01.2010ರ ಪತ್ರದಲ್ಲಿ ಸದರಿ ಹುದ್ದೆಗಳನ್ನು ದಿನಾಂಕ 01.02.2010 ರಿಂದ 2 ವರ್ಷಗಳ ಅವಧಿಗೆ 41 ಹುದ್ದೆಗಳನ್ನು ಮುಂದುವರಿಸಲು ಕೋರಿದ್ದಾರೆ. ಇದನ್ನು ಪರಿಶೀಲಿಸಿದ ಸರ್ಕಾರವು ಈ ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂ.ಸಿಆಸುಇ 07 ಸೇಉನ್ಯಾ 2010, ಬೆಂಗಳೂರು, ದಿನಾಂಕ 2ನೇ ಮಾರ್ಚ್ 2010

ಕರ್ನಾಟಕ ಉಚ್ಚ ನ್ಯಾಯಾಲಯದ Law Clerks-cum-Research Assistants ಗಳ 41 ಹುದ್ದೆಗಳನ್ನು ದಿನಾಂಕ 1.02.2010 ರಿಂದ 31.1.2011 ರವರೆಗೆ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂ.ಆಇ 125 ವೆಚ್ಚ–12/10, ದಿನಾಂಕ 25.02.2010 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.631

(ಎಂ.ಎಸ್. ಶಿವರಾಮ್)

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು–3)

PUBLIC ENTERPRISES SECRETARIAT

Sub : Institution of "ANNUAL CHIEF MINISTER'S RATNA AWARDS" to the Ten best performing meritorious State Public Sector Enterprises for the year 2009-10-reg.

Read :
1) G.O.No.DPE:80:SPU:2008 dated 25/11/2008
2) G.O.No.DPE:23:SPU:2009 dated 04/04/2009
3) G.O.No.DPE:13:ARU:2010 dated 25/02/2010

Preamble:

The Department of Public Enterprises, Government of India has introduced "PRIME MINISTER'S RATNA AWARD" for the best performing Public Sector Undertakings of Government of India. This award is instituted consciously by Government of India with a view to inculcate the habit of competition among Public Sector Undertakings and Private Sectors and ultimately achieve excellence and best performances. This "RATNA" award has created awareness and competitiveness not only among Public Sector Undertakings but also among Private Sector Undertakings. The introduction of this award has achieved amazing results with unimaginable profits and created huge employment opportunities and adding to GDP of Karnataka.

With a view to improve and inculcate competitiveness among themselves and to improve core potential and performance of Karnataka State Public Sectors orders were issued as read (2) above to institute five "ANNUAL CHIEF MINISTERS RATNA AWARDS" for the best performing State Public Enterprises and befitting citations to the chief Executive Officers of concerned Public Enterprises.

After the signing of MoU, a tremendous enhancement in performance is being seen among all KSLPEs in the arena of productivity, managerial skill optimal utilization of resources and healthy marketing competition. As a result of considerable improvements in the performances of KSLPEs. DPE has decided to institute 5 more Annual Chief Minister's Ratna Awards for the best performing KSLPEs out of the re-appropriated amount of Rs.5.00 lakhs from the head account 3451-00-091-0-02 as read (3) above in addition to existing 5 [five] awards for the year 2009-10.

Hence this order.

Government Order No. DPE:23:SPU:2009(2), Bangalore, Dated : 25th February 2010

Government of Karnataka has decided to institute 10 [Ten] "ANNUAL CHIEF MINISTER'S RATNA AWARDS" to the Ten best performing meritorious State Public Sector Enterprises and befitting citations to the Chief Executive Officers of concerned Public Sector Undertakings. Each award carries a citation and Rs. 99,999/- [Ninety Nine Thousand Nine Hundred and Ninety Nine Rupees Only].

This expenditure is debitable to the head of account 3451-00-091-0-01.

By Order and in the name of the Governor of Karnataka,
(Y.N. Rudraiah)
Under Secretary to Government-1[I/c]
Department of Public Enterprises.

PR. 632

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಮೈಸೂರು ರಸ್ತೆ ಜಂಕ್ಷನ್‌ನಿಂದ ಕೋಕೋಕೋಲಾ ಫ್ಯಾಕ್ಟರಿ ರಸ್ತೆಯನ್ನು (ಬಿಡದಿ ಕೈಗಾರಿಕಾ ಪ್ರದೇಶ) ನಾಲ್ಕು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ರಸ್ತೆ ಸರಪಳಿ 0.00 ರಿಂದ 3.00 ಕಿ.ಮೀ.ವರೆಗಿನ ಕಾಮಗಾರಿಯ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ರವರ ಪತ್ರ ಸಂಖ್ಯೆ:ಮುಇಅ:ಸಂಕದ:ರಶಾ:ಸಇ–4:2009–10 ಬಿಡದಿ ಕೈಗಾರಿಕಾ ಪ್ರದೇಶ 4 ಪಥರಸ್ತೆ:ರಾಮನಗರ, ದಿನಾಂಕ 07–01–2010

1. ಬಿಡದಿ ಹಾರೋಹಳ್ಳಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಒಟ್ಟು 19.60 ಕಿ.ಮೀ. ಉದ್ದವಿರುತ್ತದೆ. ಈ ರಸ್ತೆಯ ಕಿಮೀ. 0.00 ರಿಂದ 3.00 ಕಿಮೀ. ವರೆಗೆ KIADB ಕೈಗಾರಿಕಾ ಪ್ರದೇಶವಿದ್ದು ಅನೇಕ ಕೈಗಾರಿಕಾ ಘಟಕಗಳಿರುತ್ತದೆ. ಇದರಲ್ಲಿ ಪ್ರಮುಖವಾಗಿ ಟೊಯೋಟ ಕಿರ್ಲೋಸ್ಕರ್, ಟೊಯೋಟ ಆಟೋಮೊಬೈಲ್, ಟೊಯೋಟ ಟೆಕ್ನೋಪಾರ್ಕ್, ಸಕ್ಕರೆ ಕಾರ್ಖಾನೆ, ಜವಳಿ, ಗ್ರಾನೈಟ್, ಇನ್ನೋವೇಟಿವ್ ಫಿಲಂ ಸಿಟಿ ಇತ್ಯಾದಿ ರಫ್ತು ಆಧಾರಿತ ಕೈಗಾರಿಕೆಗಳು ಇರುತ್ತವೆ. ಇದಲ್ಲದೆ, ಅನೇಕ ಹೊಸ ಕೈಗಾರಿಕಾ ಘಟಕಗಳು ನಿವೇಶನಗಳನ್ನು ಹೊಂದಿದ್ದು ಕೈಗಾರಿಕೆಗಳನ್ನು ವಿಸ್ತರಿಸಲಾಗುತ್ತಿವೆ.

2. 2009ನೇ ಸಾಲಿನಲ್ಲಿ ನಡೆಸಲಾದ ವಾಹನ ಸಂಚಾರ ಸಮೀಕ್ಷೆಯಂತೆ ವಾಹನದಟ್ಟಣೆ PCU 17342 ಆಗಿದ್ದು (4762 CV/day), ಹಾಗೂ ಈ ರಸ್ತೆಯ ಪ್ರದೇಶದ ಸುತ್ತಮುತ್ತ ಹೆಚ್ಚಿನ ಸಂಖ್ಯೆಯ ರಫ್ತು ಆಧಾರಿತ ಕೈಗಾರಿಕಾ ಘಟಕಗಳಿದ್ದು ಇವುಗಳಿಂದ ವಾರ್ಷಿಕ ಸುಮಾರು ರೂ. 2000–00 ಕೋಟಿ ಮೊತ್ತದಷ್ಟು ರಫ್ತು ವಹಿವಾಟು ಆಗುತ್ತಿರುವುದಾಗಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ತಿಳಿದು ಬಂದಿರುತ್ತದೆ. ಹಾಲಿ ರಸ್ತೆಯು Dual carriage way ಇದ್ದು, ವಾಹನ ಸಂಚಾರ ದಟ್ಟಣೆ ಹೆಚ್ಚಿರುವುದರಿಂದ IRC ನಿಯಮದನ್ವಯ ನಾಲ್ಕು ಪಥದ ರಸ್ತೆಯನ್ನಾಗಿ ಮಾರ್ಪಡಿಸಬೇಕಾಗಿರುತ್ತದೆ. ಸದರಿ ಪ್ರಸ್ತಾವನೆಗೆ 18ನೇ SLEPC (State Level Export Promotion Committee) ಉಪಸಮಿತಿಯ ದಿನಾಂಕ 04–11–2009ರ ಸಭೆಯಲ್ಲಿ ರೂ. 750–00 ಲಕ್ಷಗಳನ್ನು ASIDE ಅಡಿಯಲ್ಲಿ ಒದಗಿಸಲು ತೀರ್ಮಾನಿಸಲಾಗಿರುತ್ತದೆ.

3. ಮಾನ್ಯ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ 21–12–2009 ರಂದು ನಡೆದ 12ನೇ SLEPC ಸಭೆಯಲ್ಲಿ ASIDE ಹಾಗೂ ಕರ್ನಾಟಕ ಸರ್ಕಾರದ ವತಿಯಿಂದ ರೂ. 750.00 ಲಕ್ಷಗಳನ್ನು ಒದಗಿಸಲು ತೀರ್ಮಾನಿಸಲಾಗಿರುತ್ತದೆ.

4. ಮೇಲಿನ ವಿಷಯಗಳ ಹಿನ್ನೆಲೆಯಲ್ಲಿ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದಕ್ಷಿಣ) ಬೆಂಗಳೂರು ಇವರು ಸದರಿ ಕಾಮಗಾರಿಗೆ ರೂ. 1500–00 ಲಕ್ಷಗಳ ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ಮೇಲೆ ಓದಲಾದ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಿದ್ದು, ಲೆಕ್ಕಶೀರ್ಷಿಕೆ "5054 ಇತರೆ ರಸ್ತೆ" ಅಡಿಯಲ್ಲಿ ರೂ. 750–00 ಲಕ್ಷಗಳ ಮೊತ್ತಕ್ಕೆ ಶೇಕಡ 30ರಂತೆ ರೂ. 225–00 ಲಕ್ಷಗಳ ಪೂರಕ ಅನುದಾನ ಒದಗಿಸಲು ಮತ್ತು ರೂ. 1500–00 ಲಕ್ಷಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ಕೋರಿರುತ್ತಾರೆ. ಸದರಿ ಅಂದಾಜು ಪಟ್ಟಿಯನ್ನು 2008–09ನೇ ಸಾಲಿನ

ಲೋಕೋಪಯೋಗಿ ಹಾಗೂ ರಾಷ್ಟ್ರೀಯ ಹೆದ್ದಾರಿ ದರಪಟ್ಟಿಗಳನ್ವಯ ತಯಾರಿಸಲಾಗಿರುತ್ತದೆ. ಸದರಿ ಕಾಮಗಾರಿಯನ್ನು 2009–10ನೇ ಸಾಲಿನ ಅಪೆಂಡಿಕ್ಸ್–ಇ ನಲ್ಲಿ ಹೆಚ್ಚುವರಿ ಕಾಮಗಾರಿಯಾಗಿ ಸೇರ್ಪಡೆಗೊಳಿಸಬೇಕಾಗಿದೆ.

5. ಕರ್ನಾಟಕ ಸರ್ಕಾರದ ನಿಯಮಗಳು (Transaction of Business) 1977ರ ಮೊದಲನೇ ಷಡ್ಯೂಲ್‌ನ ಐಟಂ 15ರ ಪ್ರಕಾರ ಸದರಿ ಪ್ರಸ್ತಾವನೆಗೆ ಸಚಿವ ಸಂಪುಟದ ಅನುಮೋದನೆ ಪಡೆಯಲಾಗಿದೆ. ಮೇಲಿನ ವಿಷಯಗಳ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ, ಲೋಇ 88 ಇಎಪಿ 2009 ಬೆಂಗಳೂರು, ದಿನಾಂಕ 26ನೇ ಫೆಬ್ರವರಿ 2010

i) ಮೈಸೂರು ರಸ್ತೆ ಜಂಕ್ಷನ್‌ನಿಂದ ಕೋಕೋಕೋಲಾ ಫ್ಯಾಕ್ಟರಿ ರಸ್ತೆಯನ್ನು (ಬಿಡದಿ ಕೈಗಾರಿಕಾ ಪ್ರದೇಶ) ನಾಲ್ಕು ಪಥದ ರಸ್ತೆಯನ್ನಾಗಿ ಅಭಿವೃದ್ಧಿಪಡಿಸುವ ಸರಪಳಿ 0.00 ರಿಂದ 3.00 ಕಿ.ಮೀ.ವರೆಗಿನ ರಸ್ತೆ ಕಾಮಗಾರಿಯ ರೂ. 1500–00 ಲಕ್ಷಗಳ ಅಂದಾಜಿಗೆ ಲೆಕ್ಕಶೀರ್ಷಿಕೆ "5054 ಇತರೆ ರಸ್ತೆ" ಅಡಿಯಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ii) ASIDE ವತಿಯಿಂದ ರೂ. 750–00 ಲಕ್ಷಗಳನ್ನು ಭರಿಸಲು ಹಾಗೂ ಉಳಿದ 750–00 ಲಕ್ಷಗಳನ್ನು ಇಲಾಖಾ ವತಿಯಿಂದ ಭರಿಸಬೇಕಾಗಿದ್ದು ರೂ. 750–00 ಲಕ್ಷಗಳಿಗೆ ಶೇಕಡ 30 ರಂತೆ ರೂ. 225–00 ಲಕ್ಷಗಳ ಪೂರಕ ಅನುದಾನವನ್ನು 2009–10ನೇ ಸಾಲಿಗೆ ಅಪೆಂಡಿಕ್ಸ್–ಇ ನಲ್ಲಿ ಹೆಚ್ಚುವರಿಯಾಗಿ ಸೇರ್ಪಡೆಗೊಳಿಸಿ ಒದಗಿಸಲು ಅನುಮೋದನೆ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಹಮತಿ ಸಂಖ್ಯೆ ಲೋಇ 1015 ಆಕೋ–1/09 ದಿನಾಂಕ 22–01–2010 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.633

(ಎಂ. ದೇವಿಪ್ರಸಾದ್)

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಹಾಗೂ

ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಹುಡ್ಕೋದಿಂದ ಪಡೆದ ಸಾಲಕ್ಕೆ 2010ರ ಫೆಬ್ರವರಿ ತಿಂಗಳಿಗೆ ತ್ರೈಮಾಸಿಕ ಅಸಲು ಮತ್ತು ಬಡ್ಡಿ ಬಿಡುಗಡೆ ಬಗ್ಗೆ.

ಓದಲಾಗಿದೆ : ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ಪತ್ರ ಸಂಖ್ಯೆ ಕೆಆರ್‌ಡಿಸಿಎಲ್/ಎಂ.ಡಿ./2009–10/2809 ದಿನಾಂಕ 28–01–2010.

ಪ್ರಸ್ತಾವನೆ :

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಕೈಗೊಳ್ಳುತ್ತಿರುವ ಯೋಜನೆಗಳಿಗಾಗಿ ವಿವಿಧ ಸ್ಕೀಂಗಳ ಅಡಿಯಲ್ಲಿ ಹುಡ್ಕೋದಿಂದ ಪಡೆದ ಸಾಲವು ಈವರೆಗೆ ಒಟ್ಟು 76,95,00,000/– ರೂ.ಗಳು ದಿನಾಂಕ 31–01–2010 ರ ಅಂತ್ಯಕ್ಕೆ ಬಾಕಿ ಇರುತ್ತದೆ. ಓದಲಾದ ದಿನಾಂಕ 28–01–2010ರ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರದಲ್ಲಿ, 2010ರ ಫೆಬ್ರವರಿ ತಿಂಗಳಿಗೆ ಕೊನೆಗೊಳ್ಳುವ ತ್ರೈಮಾಸಿಕಕ್ಕೆ ಮೇಲಿನ ಸಾಲದ ಮರುಪಾವತಿಗೆ ಅಸಲು ಹಾಗೂ ಬಡ್ಡಿ ಅನುಕ್ರಮವಾಗಿ 7,21,00,000/– ರೂ.ಗಳು ಮತ್ತು 2,13,60,860/– ರೂ.ಗಳು ಒಟ್ಟು ಮೊತ್ತ 9,34,60,860/– ರೂ.ಗಳನ್ನು ಬಿಡುಗಡೆ ಮಾಡಿ ಸರ್ಕಾರದ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ, ಲೋಇ 11 ಇಎಪಿ 2010 ಬೆಂಗಳೂರು, ದಿನಾಂಕ 22ನೇ ಫೆಬ್ರವರಿ 2010

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಹುಡ್ಕೋದಿಂದ ಪಡೆದುಕೊಂಡಿರುವ ಸಾಲದ ಬಾಬತ್ತಿಗೆ 2010ರ ಫೆಬ್ರವರಿ ತಿಂಗಳಿಗೆ ಕೊನೆಗೊಳ್ಳುವ ತ್ರೈಮಾಸಿಕ ಅವಧಿಗೆ ಅಸಲು ಹಾಗೂ ಬಡ್ಡಿ ಸೇರಿ ಒಟ್ಟು 9,33,81,251/– ರೂ.ಗಳನ್ನು (ಒಂಬತ್ತು ಕೋಟಿ ಮುವತ್ತಮೂರು ಲಕ್ಷದ ಎಂಭತ್ತೊಂದು ಸಾವಿರದ ಇನ್ನೂರ ಐವತ್ತೊಂದು ರೂಪಾಯಿಗಳು ಮಾತ್ರ)

ಲೆಕ್ಕಶೀರ್ಷಿಕೆ "5054–80–190–0–01–240 (ಯೋಜನೇತರ) ಸಾಲ ಮೇಲುಸ್ತುವಾರಿ" ಅಡಿಯಲ್ಲಿ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ.

ಸದರಿ ಬಿಲ್ಲಿನ ಮೊತ್ತಕ್ಕೆ ನಿರ್ದೇಶಕರು (ಆರ್ಥಿಕ) ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲುರುಜು ಮಾಡಿಸುವುದು ಹಾಗೂ ಈ ಬಿಲ್ಲನ್ನು (ಸ್ವೀಕೃತದ ರಶೀದಿ) ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಲೋಇ 143 ಆಕೋ–1/10 ದಿನಾಂಕ 16–02–2010ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.634

(ಎಂ. ದೇವಿಪ್ರಸಾದ್)

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಹಾಗೂ

ಒಳನಾಡು ಜಲಸಾರಿಗೆ ಇಲಾಖೆ (ಇಎಪಿ)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಎಸ್.ಕೆ. ವಾಸುದೇವ, ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಇವರ ವಿರುದ್ಧ ಇಲಖಾ ವಿಚಾರಣೆ–ಮರು ವಿಚಾರಣೆ–ಸಂಭಾವನೆ ಪಾವತಿ ಕುರಿತು.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ ಸಂಕಇ 109 ಕೆಎಂಯು 98, ದಿನಾಂಕ 01.06.1999.

2) ಶ್ರೀ ಬಿ. ಶ್ರೀನಿವಾಸರಾವ್ ನಿವೃತ್ತ ನ್ಯಾಯಾಧೀಶರು ಅವರ ದಿನಾಂಕ 10.9.2009ರ ವಿಚಾರಣಾ ವರದಿ.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ದಿನಾಂಕ 01.06.1999ರ ಸರ್ಕಾರದ ಆದೇಶ ಸಂಖ್ಯೆ ಸಂಕಇ 109 ಕೆಎಂಯು 98 ರಲ್ಲಿ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಅಪಿಲು) ನಿಯಮಾವಳಿ, 1957ರ ಅಡಿಯಲ್ಲಿ ಶ್ರೀ ಎಸ್.ಕೆ. ವಾಸುದೇವ, ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು ಇವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಶ್ರೀ ಬಿ. ಶ್ರೀನಿವಾಸರಾವ್ ನಿವೃತ್ತ ನ್ಯಾಯಾಧೀಶರು, ನಂ. 1172/1/ರಾಜಮ್ಮ ಲೈನ್, ವಿಷ್ಣುವರ್ಧನ ರಸ್ತೆ, ಚಾಮರಾಜಪುರ, ಮೈಸೂರು ಇವರನ್ನು ವಿಚಾರಣಾ ಅಧಿಕಾರಿಯಾಗಿ ನೇಮಿಸಲಾಗಿತ್ತು.

ವಿಚಾರಣೆ ನಡೆಸಿದ ವಿಚಾರಣಾ ಅಧಿಕಾರಿಗಳು ಮೇಲೆ (2)ರಲ್ಲಿ ಓದಲಾದ ದಿನಾಂಕ 10.09.2009ರ ಪ್ರಕಾರ ವಿಚಾರಣಾ ವರದಿ ಸಲ್ಲಿಸಿರುತ್ತಾರೆ. ಸದರಿಯವರಿಗೆ ವಿಚಾರಣಾ ಅಧಿಕಾರಿಯಾಗಿ ವಿಚಾರಣೆ ನಡೆಸಿದ್ದಕ್ಕೆ ಸಂಭಾವನೆ ಹಾಗೂ ಸಾರಿಗೆ ಭತ್ಯೆಗಳನ್ನು ಮಂಜೂರು ಮಾಡಲು ನಿರ್ಧರಿಸಿ ಸರ್ಕಾರವು ಮುಂದಿನಂತೆ ಆದೇಶಿಸುತ್ತದೆ.

ಸರ್ಕಾರದ ಆದೇಶ ಸಂಕಇ 109 ಕೆಎಂಯು 1998 ಬೆಂಗಳೂರು, ದಿನಾಂಕ 24ನೇ ಫೆಬ್ರವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಶ್ರೀ ಬಿ. ಶ್ರೀನಿವಾಸರಾವ್, ನಿವೃತ್ತ ನ್ಯಾಯಾಧೀಶರು, ಶ್ರೀ ಎಸ್.ಕೆ. ವಾಸುದೇವ ಪುರಾತತ್ವ ಸಂರಕ್ಷಣಾ ಇಂಜಿನಿಯರ್, ಪ್ರಾಚ್ಯವಾಸ್ತು ಮತ್ತು ಸಂಗ್ರಹಾಲಯ ಇಲಾಖೆ, ಇವರ ವಿರುದ್ಧ ವಿಚಾರಣೆ ನಡೆಸಿ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 22 ಸೇಇವಿ 2007 ದಿನಾಂಕ 11.04.2008 ರಲ್ಲಿ ನಿಗದಿಪಡಿಸಿರುವಂತೆ ರೂ. 8000/– ಗಳ ಗೌರವಧನ ಹಾಗೂ ರೂ. 1500/– ಗಳ ವಾಹನ ಭತ್ಯೆಯನ್ನು ಹೀಗೆ ಒಟ್ಟು ರೂ. 9500/– (ಒಂಬತ್ತು ಸಾವಿರದ ಐದುನೂರು ರೂ.ಗಳು ಮಾತ್ರ) ಗಳನ್ನು ಪಾವತಿಸಲು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಇವರಿಗೆ ಮಂಜೂರಾತಿ ನೀಡಿ ಆದೇಶಿಸಿದೆ.

ಈ ಆದೇಶವನ್ನು ಇಲಾಖಾ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 96 ದಿನಾಂಕ 10.07.1996 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.635

(ಎಂ.ಕೆ. ಧರ್ಮರಾಜಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

(ಆಡಳಿತ ಕನ್ನಡ)

ಕಂದಾಯ ಸಚಿವಾಲಯ

ವಿಷಯ : ಶ್ರೀ ಸಿ. ಪ್ರಕಾಶನ್, ಹಿಂದಿನ ತಹಶೀಲ್ದಾರ್, ಹಾನಗಲ್ ತಾಲ್ಲೂಕು, ಪ್ರಸ್ತುತ ನಿವೃತ್ತ ತಹಶೀಲ್ದಾರ್ ಹಾಗೂ ಶ್ರೀ ಎಸ್.ವಿ. ಕರಲಿಂಗಣ್ಣನವರ್, ಹಿಂದಿನ ಶಿರಸ್ತೇದಾರ್, ಹಾನಗಲ್ ತಾಲ್ಲೂಕು, ಪ್ರಸ್ತುತ ಉಪತಹಶೀಲ್ದಾರ್, ನಾಡಕಚೇರಿ, ಬೊಮ್ಮನಹಳ್ಳಿ, ಹಾವೇರಿ ತಾಲ್ಲೂಕು ಇವರ ವಿರುದ್ಧ ಜಂಟಿ ಇಲಾಖಾ ವಿಚಾರಣಾ – ಆರೋಪದಿಂದ ಕೈಬಿಡುವ ಬಗ್ಗೆ.

ಓದಲಾಗಿದೆ :

1. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಇವರ ಪತ್ರ ಸಂಖ್ಯೆ : ಭೂಸುವಿ : 35/2005–06, ದಿನಾಂಕ : 20–2–2006.
2. ಜಿಲ್ಲಾಧಿಕಾರಿಗಳು, ಹಾವೇರಿ ಜಿಲ್ಲೆ ಇವರ ಪತ್ರ ಸಂಖ್ಯೆ : ಸಿಬ್ಬಂದಿ(2) ವಹಿ : 105/2005–06, ದಿನಾಂಕ : 04–03–2006, 28–10–2006.
3. ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ : ಆರ್‌ಡಿ 54 ಎಡಿಇ 2006, ದಿನಾಂಕ : 13–12–2006.
4. ಶ್ರೀ ಸಿ. ಪ್ರಕಾಶನ್ ಇವರ ಲಿಖಿತ ಸಮಜಾಯಷಿ ದಿನಾಂಕ : 11–1–2007.
5. ಶ್ರೀ ಎಸ್.ವಿ. ಕರಲಿಂಗಣ್ಣನವರ್ ಇವರ ಲಿಖಿತ ಸಮಜಾಯಿಷಿ ದಿನಾಂಕ : 22–1–2007.
6. ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 54 ಎಡಿಇ 2006, ದಿನಾಂಕ : 16–06–2007.
7. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿ ದಿನಾಂಕ : 10–02–2009.

ಪ್ರಸ್ತಾವನೆ :

ಹಾನಗಲ್ ತಾಲ್ಲೂಕಿನ 162 ದೇವಸ್ಥಾನಗಳ ತಸ್ತೀಕ್ ಹಣ ಒಟ್ಟು ರೂ. 2,59,049/– (ಎರಡು ಲಕ್ಷದ ಐವತ್ತೊಂಬತ್ತು ಸಾವಿರದ ನಲವತ್ತೊಂಬತ್ತು ರೂಪಾಯಿಗಳು ಮಾತ್ರ) ಗಳ ಬಿಲ್ಲನ್ನು ಹಿರಿಯ ಉಪವಿಭಾಗಾಧಿಕಾರಿಗಳು, ಸವಣೂರು ಇವರು ದಿನಾಂಕ : 24–3–2005ರಂದು ಮೇಲು ರುಜು ಮಾಡಿ ಕಳುಹಿಸಿದ್ದು, ಈ ಹಣವನ್ನು ಖಜಾನೆಯಿಂದ ನಗದೀಕರಿಸಿದ ಮೇಲೆ ಸಂಬಂಧಿಸಿದವರಿಗೆ ಚೆಕ್ ಮುಖಾಂತರ ಪಾವತಿ ಮಾಡಬೇಕಾಗಿರುತ್ತದೆ. ಆದರೆ, ತಾಲ್ಲೂಕು ಕಛೇರಿಯಲ್ಲಿ ನಗದೀಕರಿಸಿದ ಹಣವನ್ನು ನೇರವಾಗಿ ದೇವಸ್ಥಾನಗಳ ವಹಿವಾಟುದಾರರಿಗೆ ನಗದು ಬಟವಾಡೆ ಮಾಡಿ ಉಳಿದ ಶಿಲ್ಕು ರೂ. 17,521/– (ಹದಿನೇಳು ಸಾವಿರದ ಐದು ನೂರ ಇಪ್ಪತ್ತೊಂದು ರೂ.ಗಳು ಮಾತ್ರ) ಅನ್ನು ದಿನಾಂಕ : 5–12–2005ರಂದು ಬ್ಯಾಂಕಿಗೆ ಜಮಾ ಮಾಡಿರುವುದು ಕಂಡುಬರುತ್ತದೆ. ಇದನ್ನು ಪರಿಶೀಲಿಸಲಾಗಿ ಸಂಬಂಧಿಸಿದ ದೇವಸ್ಥಾನಗಳ ಅರ್ಚಕರಿಗೆ ತಸ್ತೀಕ್ ಹಣ ಬಟವಾಡೆ ಆಗಿರುವುದಿಲ್ಲವೆಂದು ಹಣ ಬಟವಾಡೆಯಾದ ವ್ಯಕ್ತಿಗಳ ಹೆಸರಿನವರು ಗ್ರಾಮದಲ್ಲಿ ಯಾರು ಇರುವುದಿಲ್ಲವೆಂದು ಖೊಟ್ಟಿ ಸಹಿ ಮಾಡಿ ತಸ್ತೀಕ್ ಹಣ ಬಟವಾಡೆ ಮಾಡಿರುವುದು ಕಂಡು ಬಂದಿದೆ ಎಂಬ ಅಂಶ ಮೇಲ್ನೋಟಕ್ಕೆ ಸಾಬೀತಾಗಿದ್ದು, ಹಣ ದುರುಪಯೋಗವಾಗಿದ್ದು ಕಂಡು ಬಂದಿದೆಯೆಂದು ಹಿರಿಯ ಉಪವಿಭಾಗಾಧಿಕಾರಿಗಳು, ಸವಣೂರು ಇವರು ವರದಿ ಮಾಡಿರುವುದನ್ನು ಉಲ್ಲೇಖಿಸಿ ಈ ಅವಧಿಯಲ್ಲಿ ಹಾನಗಲ್ ತಹಶೀಲ್ದಾರ್ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಈ ಕೆಳಕಂಡ ಅಧಿಕಾರಿ/ನೌಕರರುಗಳು ಈ ವಿಷಯವನ್ನು ನಿರ್ವಹಿಸಿರುವುದು ಕಂಡು ಬಂದಿರುತ್ತದೆಂದು ಸದರಿ ಸಿಬ್ಬಂದಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಮೇಲೆ ಕ್ರ.ಸಂ. (1)ರಲ್ಲಿ ಓದಲಾದ ದಿನಾಂಕ : 20–2–2006ರ ಪತ್ರದಲ್ಲಿ ಹಾವೇರಿ ಜಿಲ್ಲಾಧಿಕಾರಿಗಳು ಸರ್ಕಾರವನ್ನು ಕೋರಿರುತ್ತಾರೆ.

1. ಶ್ರೀ ಸಿ. ಪ್ರಕಾಶನ್, ತಹಶೀಲ್ದಾರ್
2. ಶ್ರೀ ಎಸ್.ವಿ. ಕರಲಿಂಗಣ್ಣನವರ್, ಶಿರಸ್ತೇದಾರ್
3. ಶ್ರೀ ಪಿ.ಕೆ. ರಿತ್ತಿಮಠ, ದ್ವಿ.ದ.ಸ.

ಜಿಲ್ಲಾಧಿಕಾರಿಗಳ ವರದಿ ಆಧರಿಸಿ ಮೇಲ್ಕಾಣಿಸಿದ ಅಧಿಕಾರಿ/ನೌಕರರುಗಳನ್ನು ಸಮಸಂಖ್ಯೆಯ ದಿನಾಂಕ : 17–8–2006ರಲ್ಲಿ ಇಲಾಖಾ ವಿಚಾರಣೆ ಬಾಕಿಯಿರಿಸಿ ಸೇವೆಯಿಂದ ಅಮಾನತ್ತು ಮಾಡಲಾಯಿತು. ಆದರೆ, ಶ್ರೀ ಪಿ.ಕೆ.ರಿತ್ತಿಮಠ, ದ್ವಿ.ದ.ಸ. ಇವರು ದಿನಾಂಕ : 20–8–2006ರಂದು ಮರಣ ಹೊಂದಿದ್ದರಿಂದ, ಉಳಿದ ಅಧಿಕಾರಿ/ನೌಕರರಾದ ಶ್ರೀ ಸಿ. ಪ್ರಕಾಶನ್, ಹಿಂದಿನ ತಹಶೀಲ್ದಾರ್, ಹಾನಗಲ್ ಮತ್ತು ಶ್ರೀ ಎಸ್.ವಿ. ಕರಲಿಂಗಣ್ಣನವರ್, ಶಿರಸ್ತೇದಾರ್, ತಾಲ್ಲೂಕು

ಕಛೇರಿ, ಹಾನಗಲ್ ಇವರ ವಿರುದ್ಧ ಕ್ರ.ಸಂ.(2)ರಲ್ಲಿರುವ ಪತ್ರಗಳಲ್ಲಿ ಜಂಟಿ ಇಲಾಖಾ ವಿಚಾರಣೆ ನಡೆಸಲು ದೋಷಾರೋಪಣಾ ಪಟ್ಟಿಗಳನ್ನು ಅನುಬಂಧ 1 ರಿಂದ 4 ರವರೆಗೆ ತಯಾರಿಸಿ ಹಾವೇರಿ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಕಳುಹಿಸಿರುತ್ತಾರೆ.

ಸದರಿ ಆರೋಪ ಪಟ್ಟಿಗಳನ್ನು ಮೇಲೆ ಓದಲಾದ ಕ್ರ.ಸಂ. (3)ರ ದಿನಾಂಕ : 13–12–2006ರಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 13ರಡಿಯಲ್ಲಿ ದೋಷಾರೋಪಣೆಗಳನ್ನು ಅನುಬಂಧ 1 ರಿಂದ 4ರವರೆಗೆ ಕಾರಣ ಕೇಳುವ ನೋಟೀಸಿನೊಂದಿಗೆ ಶ್ರೀ ಸಿ.ಪ್ರಕಾಶನ್, ತಹಶೀಲ್ದಾರ್ ಮತ್ತು ಶ್ರೀ ಎಸ್.ವಿ. ಕರಲಿಂಗಣ್ಣನವರ್, ಶಿರಸ್ತೇದಾರ್, ಇವರಿಗೆ ಜಾರಿ ಮಾಡಿ ಆರೋಪಗಳ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಸೂಚಿಸಲಾಗಿತ್ತು.

ಮೇಲೆ ಓದಲಾದ ಕ್ರ.ಸಂ. (4) ಮತ್ತು (5)ರಲ್ಲಿ ಶ್ರೀ ಸಿ. ಪ್ರಕಾಶನ್, ತಹಶೀಲ್ದಾರ್ ಮತ್ತು ಶ್ರೀ ಎಸ್.ವಿ. ಕರಲಿಂಗಣ್ಣನವರ್, ಶಿರಸ್ತೇದಾರ್, ಇವರುಗಳು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿ ತಮ್ಮ ವಿರುದ್ಧ ಮಾಡಲಾದ ಆರೋಪಗಳನ್ನು ಅಲ್ಲಗೆಳೆದಿರುತ್ತಾರೆ. ಹಾಗೂ ಅವುಗಳನ್ನು ಒಪ್ಪಿಕೊಂಡಿರುವುದಿಲ್ಲ. ಸದರಿ ರಕ್ಷಣಾ ಹೇಳಿಕೆಗಳನ್ನು ಪರಿಶೀಲಿಸಲಾಗಿದ್ದು, ಆಪಾದನೆಗಳನ್ನು, ಸಮರ್ಥಿಸುವಂತಹ ಅಂಶಗಳು ಹಾಗೂ ದಾಖಾಲಾತಿಗಳನ್ನು ಒದಗಿಸಿರುವುದಿಲ್ಲವಾದ್ದರಿಂದ ಸರ್ಕಾರವು ಈ ಪ್ರಕರಣದಲ್ಲಿ ಸತ್ಯಾಸತ್ಯತೆಯನ್ನು ತಿಳಿಯಲು ಮೇಲೆ ಓದಲಾದ ಕ್ರ.ಸಂ. (6), ದಿನಾಂಕ : 16–06–2007ರಲ್ಲಿ ಶ್ರೀ ಬಿ.ಕೆ.ಕಣವಿ, ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಕೇಂದ್ರ ಸ್ಥಾನಿಕ ಸಹಾಯಕರು, ಜಿಲ್ಲಾಧಿಕಾರಿಗಳ ಕಛೇರಿ, ಹಾವೇರಿ ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ. (7)ರ ದಿನಾಂಕ : 10–02–2009ರಲ್ಲಿ ವಿಚಾರಣಾಧಿಕಾರಿಗಳಾದ ಶ್ರೀ ಬಿ.ಕೆ. ಕಣವಿ ನಿವೃತ್ತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಇವರು ಈ ಪ್ರಕರಣದ ಬಗ್ಗೆ ಜಂಟಿ ಇಲಾಖಾ ವಿಚಾರಣೆ ನಡೆಸಿ ದಾಖಲೆ ಹಾಗೂ ಸಾಕ್ಷಿಗಳನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಪ್ರಮುಖ ಆರೋಪಿಯು ವಿಷಯ ನಿರ್ವಾಹಕರಾದ ಶ್ರೀ ರಿತ್ತಿಮಠರವರು ಕಾರಣಕರ್ತರಾಗಿರುವುದಾಗಿ ಹಾಗೂ ಆರೋಪಿತ ಅಧಿಕಾರಿ/ನೌಕರರಾದ ಶ್ರೀ ಸಿ. ಪ್ರಕಾಶನ್, ಹಿಂದಿನ ತಹಶೀಲ್ದಾರ್, ಹಾನಗಲ್ ತಾಲ್ಲೂಕು ಹಾಗೂ ಶ್ರೀ ಕರಿಲಿಂಗಣ್ಣನವರ್ ಹಿಂದಿನ ಶಿರಸ್ತೇದಾರ್, ಹಾನಗಲ್ ತಾಲ್ಲೂಕು ಕಛೇರಿ ಇವರುಗಳು ಕಾರಣಕರ್ತರಲ್ಲವೆಂದು ತಿಳಿಸುತ್ತಾ ಹಾಗೂ ಈಗಾಗಲೇ ಶ್ರೀ ರಿತ್ತೀಮಠ, ಇವರು ಮರಣ ಹೊಂದಿರುವುದರಿಂದ ಶ್ರೀ ಸಿ. ಪ್ರಕಾಶನ್, ಹಿಂದಿನ ತಹಶೀಲ್ದಾರ್, ಹಾನಗಲ್ ತಾಲ್ಲೂಕು ಹಾಗೂ ಶ್ರೀ ಕರಿಲಿಂಗಣ್ಣನವರ್, ಹಿಂದಿನ ಶಿರಸ್ತೇದಾರ್ ಇವರುಗಳ ವಿರುದ್ಧ ಆರೋಪಗಳು ಸಾಕ್ಷಿಗಳ ಕೊರತೆಯಿಂದ ಸಾಬೀತಾಗಿಲ್ಲವೆಂದು ವಿಚಾರಣಾ ವರದಿಯಲ್ಲಿ ವರದಿ ಮಾಡಿರುತ್ತಾರೆ. ಆದ್ದರಿಂದ ಸರ್ಕಾರವು ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಒಪ್ಪಿ ಆರೋಪಿತ ಅಧಿಕಾರಿ/ನೌಕರರ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆ ಕೈಬಿಡಲು ನಿರ್ಧರಿಸಿರುವುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆರ್‌ಡಿ 54 ಎಡಿಇ 2006 (ಪಿ), ಬೆಂಗಳೂರು, ದಿನಾಂಕ : 01–03–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ವಿಚಾರಣಾಧಿಕಾರಿಗಳು ಈ ಪ್ರಕರಣದ ಬಗ್ಗೆ ಜಂಟಿ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾ ವರದಿಯಲ್ಲಿ ಆರೋಪಿತ ಅಧಿಕಾರಿ/ನೌಕರರಾದ ಶ್ರೀ ಸಿ. ಪ್ರಕಾಶನ್, ಹಿಂದಿನ ತಹಶೀಲ್ದಾರ್, ಹಾನಗಲ್ ತಾಲ್ಲೂಕು, ಪ್ರಸ್ತುತ ನಿವೃತ್ತ ತಹಶೀಲ್ದಾರ್ ಹಾಗೂ ಶ್ರೀ ಕರಿಲಿಂಗಣ್ಣನವರ್, ಹಿಂದಿನ ಶಿರಸ್ತೇದಾರ್ ಪ್ರಸ್ತುತ ಉಪತಹಶೀಲ್ದಾರ್, ನಾಡಕಛೇರಿ, ಬೊಮ್ಮನಹಳ್ಳಿ, ಹಾವೇರಿ ತಾಲ್ಲೂಕು ಇವರುಗಳ ವಿರುದ್ಧದ ಆರೋಪಗಳು ಸಾಬೀತಾಗಿಲ್ಲವೆಂದು ವರದಿ ಮಾಡಿರುವುದರಿಂದ ಸದರಿಯವರುಗಳ ವಿರುದ್ಧ ಹೂಡಲಾಗಿದ್ದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆದೇಶಿಸಿದೆ.

ಸದರಿ ಅಧಿಕಾರಿ/ನೌಕರರು ಈ ಹಿಂದೆ ಕಳೆದ ಅಮಾನತ್ತಿನ ಅವಧಿಯನ್ನು ಕರ್ತವ್ಯದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 654

(ಎಸ್. ಬಿ. ಸಸಾಲಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

COMMERCE AND INDUSTRIES SECRETARIAT

Sub :- Approval to the Project Proposal of M/s Surya Vijayanagar Steels and Power Ltd., to setup a "5 MTPA Integrated Steel Plant with 500 MW Captive Power Plant" in Bagalkot District.

Read :- Proceedings of the 20th State High Level Clearance Committee (SHLCC) meeting held on 05-01-2010.

Preamble:

M/s Surya Vijayanagar Steels and Power Ltd., proposes to establish a "5 MTPA Integrated Steel Plant with 500 MW Captive Power Plant" in Bagalkot District, with an investment of Rs. 20,000 crores, generating employment to about 10,000 persons.

In the 20th State High Level Clearance Committee (SHLCC) meeting held on 05-01-2010, the proposal of the Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following order.

Government Order No. CI 43 SPI 2010, Bangalore, dated : 25-02-2010

Government is pleased to accord in principle approval for the project proposal of M/s Surya Vijayanagar Steels and Power Ltd., to establish a "5 MTPA Integrated Steel Plant with 500 MW Captive Power Plant" in Bagalkot District, with an investment of Rs. 20,000 crores, generating employment to about 10,000 persons and extend the following infrastructure facilities, incentives and concessions.

INFRASTRUCTURE FACILITIES :

1. **Land :** 4000 acres-KIADB to acquire and allot as SUC with consent of land owners.
2. **Power :** 90 MW from HESCOM.
3. **Water :** 15 MGD from nearest source.
4. **Incentives and Concessions :** Special incentives and concessions will be considered separately.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The Promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with Government Policy of Employment to local people i.e. Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

5. **Social Infrastructure Development :** The Company is advised to takeup social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a. The project proponents shall provide employment to at least one member of the family of each land looser as the land is being acquired through KIADB.
   b. The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c. The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

(**Aparna Pavate)**

Desk Officer (Technical Cell)

Commerce and Industries Department

PR NO. 655

COMMERCE AND INDUSTRIES SECRETARIAT

Sub :- Approval to the Project Proposal of M/s Kalyani Steels Ltd., to setup a “2x1,20,000 Metric Ton Per Annum Low Ash Metallurgical Coke manufacturing unit and 2x9 MW Power Plant” in Koppal District.

Read :- Proceedings of the 20th State High Level Clearance Committee (SHLCC) meeting held on 05.01.2010.

Preamble:

M/s Kalyani Steels Ltd., proposes to establish a “2x1,20,000 Metric Ton Per Annum Low Ash Metallurgical Coke manufacturing unit and 2x9 MW Power Plant” in Koppal District, with an investment of Rs. 148.71 crores, generating employment to about 100 persons.

In the 20th State High Level Clearance Committee (SHLCC) meeting held on 05-01-2010, the proposal of the Company has been approved.

Government has examined the recommendations made by the State High Level Clearance Committee in the 20th Meeting held on 05-01-2010, in all aspects.

Hence the following order.

Government Order No. CI 33 SPI 2010, Bangalore, dated : 25-02-2010

Government is pleased to accord in principle approval for the project proposal of M/s Kalyani Steels Ltd., to establish a “2x1,20,000 Metric Ton Per Annum Low Ash Metallurgical Coke manufacturing unit and 2x9 MW Power Plant” in Koppal District, with an investment of Rs. 148.71 crores, generating employment to about 100 persons and extend the following infrastructure facilities, incentives and concessions.

INFRASTRUCTURE FACILITIES :

1 **Land :** 52 acres 11 guntas-leased land from M/s Hospet Power Ltd.

2 **Power :** 1000 KVA from GESCOM.

3 **Water :** 34.73 MLD from Tungabhadra River.

4 **Incentives and Concessions :** As applicable under New Industrial Policy 2009-14.

GENERAL TERMS AND CONDITIONS :

1. **MOU :** The project proponents will have to sign a MOU with the Government of Karnataka during the Global Investors Meet in June 2010.
2. **Environment :** The Promoters to obtain CFE and CFO from KSPCB and environmental clearance from MOEF, GOI.
3. **Employment :** The Company shall prepare a plan for development of Human Resources required for the project, train local people and provide employment to these trained local youth and comply with Government Policy of Employment to local people i.e. Dr. Sarojini Mahishi report. A copy of Human Resources Development plan shall be sent to the Commissioner for I.D. & Director of Industries and Commerce for monitoring.
4. **Vendor Development :** Where ever there is scope for vendor development for the project, the company shall prepare a vendor development plan, develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.
5. **Social Infrastructure Development :** The Company is advised to takeup social infrastructure development projects in the vicinity of the proposed location of the unit. A copy of such projects shall be sent to the Commissioner for I.D. & Director of Industries and Commerce for monitoring.
6. **Others :**
   a. The project proponents shall provide employment to at least one member of the family of each land looser as the land is being acquired through KIADB.
   b. The project proponents shall adopt rain water harvesting, waste water recycling and water conservation techniques. Zero discharge facility should be adopted wherever applicable.
   c. The promoters shall take all statutory and other necessary clearances from the competent authorities including GOI and shall submit milestones/progress in implementation of the project regularly, which will be monitored by the Department.

This approval is valid for a period of two years from the date of issue.

By Order and in the name of the Governor of Karnataka

(**Aparna Pavate)**

Desk Officer (Technical Cell)

Commerce and Industries Department

PR NO. 656

ಕಂದಾಯ ಸಚಿವಾಲಯ

ವಿಷಯ : 2009–10ನೇ ಸಾಲಿಗೆ ಎಸ್‌ಜಿಎಸ್‌ವೈ ಎರಡನೇ ಕಂತಿನ ರಾಜ್ಯದ ಪಾಲಿನ ಅನುದಾನವನ್ನು ರಾಜ್ಯದ 14 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ : ಜೆ 12022/1/2009 ಎಸ್‌ಜಿಎಸ್‌ವೈ–I(10) ದಿನಾಂಕ : 16–04–09 ಮತ್ತು (42) ದಿನಾಂಕ : 07–08–09.

2. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ 2009, ಬೆಂಗಳೂರು, ದಿನಾಂಕ : 20–05–09, 25–09–09, 08–12–09 ಮತ್ತು 25–01–2010.

3. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ : ಜೆ 12022/1/2009 ಎಸ್‌ಜಿಎಸ್‌ವೈ– I(72) ದಿನಾಂಕ : 03–11–09 (73) ದಿನಾಂಕ : 12–11–09 (102)

ದಿನಾಂಕ : 14–12–09 (120), ದಿನಾಂಕ : 22–12–09 ಮತ್ತು (132)
ದಿನಾಂಕ : 30–12–09.

4. ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪತ್ರದ ಸಂಖ್ಯೆ : ಜೆ 12022/1/2009 ಎಸ್‌ಜಿಎಸ್‌ವೈ– I(156) ದಿನಾಂಕ : 19–01–10 (159) ದಿನಾಂಕ : 25–01–10 (175), ದಿನಾಂಕ : 08–02–10.

ಪ್ರಸ್ತಾವನೆ :

2009–10ನೇ ಸಾಲಿನಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ಓದಲಾಗಿದೆ (1) ರಲ್ಲಿ ಒಂದನೇ ಕಂತಿನ ಅನುದಾನ ರೂ. 41,10,50,000 ಗಳನ್ನು ರಾಜ್ಯದ ಎಲ್ಲಾ 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿತ್ತು. ಇದಕ್ಕನುಗುಣವಾಗಿ ರಾಜ್ಯ ಸರ್ಕಾರವು ಓದಲಾಗಿದೆ (2)ರ ದಿನಾಂಕ 20–05–2009 ಮತ್ತು 25–09–2009ರ ಆದೇಶಗಳಲ್ಲಿ ಮೊದಲನೇ ಕಂತಿನ ಅನುದಾನ ರೂ. 13,70,16,000 ಬಿಡುಗಡೆ ಮಾಡಬೇಕಿತ್ತು. ಆದರೆ ರಾಜ್ಯದ 2009–10ನೇ ಸಾಲಿನ ಆಯವ್ಯಯದಲ್ಲಿ ಕೆಲವೊಂದು ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಆಯವ್ಯಯದ ಲಭ್ಯತೆಗೆ ಅನುಸಾರ ರೂ. 13,45,20,000ಗಳನ್ನು 29 ಜಿಲ್ಲಾ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲಾಗಿದೆ. ಓದಲಾಗಿದೆ (3)ರ ಪತ್ರಗಳಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದ 14 ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 18,58,57,000 ಗಳನ್ನು ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ರೂ. 6,19,52,000ಗಳನ್ನು ಬಿಡುಗಡೆ ಮಾಡಬೇಕಾಗಿದ್ದು, ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಜಿಲ್ಲೆಯ ಆಯವ್ಯಯದ ಲಭ್ಯತೆಗೆ ಅನುಸಾರ ಓದಲಾಗಿದೆ (2) ದಿನಾಂಕ 08–12–2009 ಮತ್ತು 25–01–2010ರ ಆದೇಶಗಳಲ್ಲಿ ರೂ. 4,87,87,000ಗಳನ್ನು ಬಿಡುಗಡೆಗೊಳಿಸಲಾಗಿದೆ. ಓದಲಾಗಿದೆ (4)ರ ಪತ್ರಗಳಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ರಾಜ್ಯದ 14 ಜಿಲ್ಲಾ ಪಂಚಾಯತಿಗಳಾದ ಬೆಂಗಳೂರು ನಗರ, ಬೆಳಗಾಂ ಚಾಮರಾಜನಗರ, ಚಿತ್ರದುರ್ಗ, ದಕ್ಷಿಣ ಕನ್ನಡ, ಧಾರವಾಡ, ಕೋಲಾರ, ಶಿವಮೊಗ್ಗ, ಉತ್ತರ ಕನ್ನಡ, ಬಳ್ಳಾರಿ, ಗದಗ್, ಕೊಡಗು, ರಾಯಚೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಪಂಚಾಯತಿಗಳಿಗೆ ಎರಡನೇ ಕಂತಿನ ಅನುದಾನ ರೂ. 14,38,52,000ಗಳನ್ನು ಬಿಡುಗಡೆ ಮಾಡಿದ್ದು, ಇದರನ್ವಯ ರಾಜ್ಯ ಸರ್ಕಾರವು ತನ್ನ ಪಾಲಿನ ಅನುದಾನ ರೂ. 4,79,51,000ಗಳನ್ನು ಬಿಡುಗಡೆ ಮಾಡಬೇಕಾಗಿದೆ. ಆದರೆ ರಾಜ್ಯದ 2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಒದಗಿಸಿರುವ ಅನುದಾನದಲ್ಲಿ ಕೊರತೆಯಿರುವುದರಿಂದ, ಜಿಲ್ಲೆಯ ಆಯವ್ಯಯದ ಲಭ್ಯತೆಗೆ ಅನುಸಾರ ರೂ. 3,29,27,000ಗಳನ್ನು ಬಿಡುಗಡೆಗೊಳಿಸಬೇಕಾಗಿರುವುದರಿಂದ, ಈ ಆದೇಶ :

ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 7 ಎಸ್‌ಜಿವೈ 2009, ಬೆಂಗಳೂರು, ದಿನಾಂಕ : 25–02–2010

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆಯಡಿ (ಎಸ್‌ಜಿಎಸ್‌ವೈ) ರಾಜ್ಯ ಸರ್ಕಾರದ 2009–10ನೇ ಸಾಲಿನ ಆಯವ್ಯಯದಲ್ಲಿ ಜಿಲ್ಲೆಗಳಿಗೆ ಒದಗಿಸಿದ ಅನುದಾನದ ಲಭ್ಯತೆಗೆ ಅನುಸಾರವಾಗಿ ಎರಡನೇ ಕಂತಿನ ಅನುದಾನ ರೂ. 3,29,27,000ಗಳನ್ನು (ರೂ. ಮೂರು ಕೋಟಿ ಇಪ್ಪತ್ತೊಂಬತ್ತು ಲಕ್ಷದ ಇಪ್ಪತ್ತೇಳು ಸಾವಿರ ಮಾತ್ರ) ಲಗತ್ತಿಸಿರುವ ಅನುಬಂಧದಲ್ಲಿ ತೋರಿಸಿರುವಂತೆ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

ಷರತ್ತುಗಳು :

1999ರ ಮೇ ತಿಂಗಳ ಎಸ್‌ಜಿಎಸ್‌ವೈ ಕೈಪಿಡಿಯ ಮಾರ್ಗಸೂಚಿಯಂತೆ ಹಣವನ್ನು ಉಪಯೋಗಿಸುವುದು. ಅನುಷ್ಠಾನ ಏಜೆನ್ಸಿಗಳಿಗೆ ಸರ್ಕಾರಿ ಆದೇಶ ತಲುಪಿದ 15 ದಿವಸದೊಳಗೆ ಬಿಡುಗಡೆ ಮಾಡತಕ್ಕದ್ದು.

ನಿಧಿಯ ಮಾದರಿ ಕೇಂದ್ರ ಮತ್ತು ರಾಜ್ಯದ ನಡುವೆ 75 : 25 ರ ಅನುಪಾತದಲ್ಲಿ ನೀಡಲಾಗುವುದು.

ಯೋಜನೆಯ ವೆಚ್ಚವನ್ನು ಪ್ರಧಾನ ಲೆಕ್ಕ ಶೀರ್ಷಿಕೆ "2501 ಗ್ರಾಮೀಣಾಭಿವೃದ್ಧಿಗಾಗಿ ವಿಶೇಷ ಕಾರ್ಯಕ್ರಮಗಳು 01 ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳು–198–ಗ್ರಾಮ ಪಂಚಾಯತ್‌ಗಳಿಗೆ ಸಹಾಯ–6–ಗ್ರಾಮ ಪಂಚಾಯತ್‌ಗಳು–01–ಬ್ಲಾಕ್ ಅನುದಾನ ಕೇಂದ್ರ ಪುರಸ್ಕೃತ ಯೋಜನೆ (ಸ್ವರ್ಣ ಜಯಂತಿ ಗ್ರಾಮ ಸ್ವರೋಜ್‌ಗಾರ್ ಯೋಜನೆ) 2009–2010ನೇ (2501–01–198–6–01)" (ಲಿಂಕ್ ಕೋಡ್ 2501–01–800–0–07) ಸಾಲಿನಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 7 ಜೆಡ್‌ಪಿಎ 2003 ದಿನಾಂಕ 14–07–2005ರನ್ವಯ ಖಜಾನೆಯಿಂದ ಪಡೆಯುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳಿಗೆ ಹಣ ತೆಗೆಯಲು ಕಾನೂನು ರೀತ್ಯ ಅಧಿಕಾರ ನೀಡಲಾಗಿದೆ. ಈ ಯೋಜನೆಯಡಿ ಕೇಂದ್ರ ಸರ್ಕಾರವು ನೇರವಾಗಿ ಜಿಲ್ಲಾ ಪಂಚಾಯತಿಗೆ ಬಿಡುಗಡೆ ಮಾಡಿರುವ ಅನುದಾನ

ಮತ್ತು ರಾಜ್ಯದ ಪಾಲಿನ ಅನುದಾನವೂ ಸೇರಿದಂತೆ ಒಟ್ಟು ಅನುದಾನವನ್ನು ಸರ್ಕಾರದ ಸುತ್ತೋಲೆ ಸಂಖ್ಯೆ : ಗ್ರಾಅಪ 14 ಎಸ್‌ಜೆವೈ 2007 ದಿನಾಂಕ 18–04–2007ರ ಸೂಚನೆಯಂತೆ ಕ್ರಮ ಕೈಗೊಳ್ಳುವುದು.

ಬಿಡುಗಡೆ ಮಾಡುವ ಹಣದ ಆಂತರಿಕ ಲೆಕ್ಕಪರಿಶೋಧನೆಯನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಮಾಡುವುದು.

2009–10ನೇ ಸಾಲಿನ ಅನುಮೋದಿತ ವಾರ್ಷಿಕ ಯೋಜನೆಯನ್ನು ಸಂಬಂಧಿಸಿದ ಜಿಲ್ಲಾ ಪಂಚಾಯತಿಗಳ ಯೋಜನಾ ನಿರ್ದೇಶಕರು (ಡಿಆರ್‌ಡಿಎ) ಸರ್ಕಾರಕ್ಕೆ ಸಲ್ಲಿಸುವುದು.

ಆರ್ಥಿಕ ಮತ್ತು ಭೌತಿಕ ಸಾಧನೆಯ ಮಾಸಿಕ ಪ್ರಗತಿ ವರದಿಯನ್ನು ಪ್ರತಿ ಮಾಹೆಯ 5ನೇ ತಾರೀಖಿನೊಳಗೆ ಕೇಂದ್ರ ಸರ್ಕಾರದ online ಗೆ upload ಮಾಡಿ ಪ್ರತಿಯನ್ನು ಸ್ವ ಉದ್ಯೋಗ ಕಾರ್ಯಕ್ರಮಗಳ ಶಾಖೆಗೆ ತಪ್ಪದೇ ಕಳುಹಿಸುವುದು.

ಸಂಬಂಧಿಸಿದ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು ಹಣ ಉಪಯೋಗ ಪ್ರಮಾಣ ಪತ್ರ ಹಾಗೂ ಆಡಿಟ್ ಮಾಡಿದ ಲೆಕ್ಕಗಳನ್ನು ನಿರ್ದೇಶಕರು (ಸ್ವಉಕಾ) ಹಾಗೂ ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರಿಗೆ ತಪ್ಪದೇ ಕಳುಹಿಸುವುದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಇವರ ಸಹಮತಿ ಸಂಖ್ಯೆ : ಗ್ರಾಅಪ 45 ಪಿಬಿಎಸ್ 2010 ದಿನಾಂಕ 23–02–2010ರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 657

(ಪಿ.ಎ. ಮೇಘಣ್ಣವರ)

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಅನುಬಂಧ

ಸರ್ಕಾರದ ಆದೇಶದ ಸಂಖ್ಯೆ : ಗ್ರಾಅಪ 7 ಎಸ್‌ಜೆವೈ 2010, ಬೆಂಗಳೂರು, ದಿನಾಂಕ : 25–02–2010

ಕ್ರ ಸಂ	ಜಿಲ್ಲಾ ಪಂಚಾಯತಿಯ ಹೆಸರು	ಜಿಲ್ಲಾ ಕೋಡ್	ಡಿ.ಡಿ.ಓ ಕೋಡ್	ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಎರಡನೇ ಕಂತಿನ ಅನುದಾನ	ರಾಜ್ಯ ಸರ್ಕಾರವು ಮಾಡಬೇಕಾದ ಎರಡನೇ ಕಂತಿನ ಅನುದಾನ	ರಾಜ್ಯದ ಆಯವ್ಯಯದಲ್ಲಿ ನಿಗದಿಪಡಿಸಿದ ರಾಜ್ಯದ ಪಾಲಿನ ಅನುದಾನ	2009–10ನೆ ಸಾಲಿನಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಈವರೆವಿಗೂ ಬಿಡುಗಡೆ ಮಾಡಿದ ಅನುದಾನ	ಜಿಲ್ಲಾ ಪಂಚಾಯತಿ ಗಳಲ್ಲಿ ಲಭ್ಯವಿರುವ ಅನುದಾನ	*ಜಿಲ್ಲಾ ಆಯವ್ಯಯದ ಲಭ್ಯತೆಯಂತೆ ಬಿಡುಗಡೆ ಮಾಡುತ್ತಿರುವ ಎರಡನೇ ಕಂತಿನ ಅನುದಾನ*
1	2	3	4	5	6	7	8	9	10
1	ಬೆಂಗಳೂರು ನಗರ	401	0100ZZ8001	41,30,000	13,77,000	26,85,000	13,76,000	13,09,000	13,09,000
2.	ಬೆಳಗಾಂ	413	2200ZZ0002	1,09,57,000	36,52,000	1,86,43,000	95,58,000	90,85,000	36,52,000
3.	ಬಳ್ಳಾರಿ	418	3400ZZ0001	2,27,85,000	75,95,000	1,48,13,000	75,95,000	72,18,000	72,18,000
4.	ಚಾಮರಾಜನಗರ	456	1000ZZ0001	2,01,21,000	67,07,000	96,00,000	80,55,000	15,45,000	15,45,000
5.	ಚಿಕ್ಕಬಳ್ಳಾಪುರ	453	0600ZZ0001	84,55,000	28,18,000	35,47,000	41,92,000	(–)6,45,000	0
6.	ಚಿತ್ರದುರ್ಗ	403	1600ZZ0001	1,29,41,000	43,14,000	1,05,00,000	54,10,000	50,90,000	43,14,000
7.	ದಕ್ಷಿಣ ಕನ್ನಡ	409	1900ZZ0047	54,45,000	18,15,000	57,35,000	33,65,000	23,70,000	18,15,000
8.	ಧಾರವಾಡ	415	2500ZZ8798	81,72,000	27,24,000	53,13,000	27,24,000	25,89,000	25,89,000
9.	ಗದಗ್	462	2600ZZ0001	1,05,17,000	35,06,000	84,32,000	43,24,000	41,08,000	35,06,000
10.	ಕೊಡಗು	411	1200ZZ0001	0	0	21,15,000	19,29,000	1,86,000	0

11.	ಕೋಲಾರ	404	0700ZZ8002	77,34,000	25,78,000	45,60,000	59,50,000	(–)13,90,000	0
12.	ರಾಯಚೂರು	420	3600ZZ0001	1,45,61,000	48,54,000	1,00,00,000	87,62,000	12,38,000	12,38,000
13.	ಶಿವಮೊಗ್ಗ	405	1400ZZ0002	1,63,24,000	54,41,000	1,06,12,000	54,41,000	51,71,000	51,71,000
14.	ಉತ್ತರಕನ್ನಡ	416	3000ZZ0080	17,10,000	5,70,000	66,16,000	52,77,000	13,39,000	5,70,000
	ಒಟ್ಟು			14,38,52,000	4,79,51,000	11,31,71,000	7,39,58,000	3,92,13,000	3,29,27,000

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 657

(ಪಿ.ಎ. ಮೇಘಣ್ಣವರ)

ನಿರ್ದೇಶಕರು (ಸ್ವಉಕಾ) ಹಾಗೂ

ಪ.ನಿ. ಸರ್ಕಾರದ ಜಂಟಿ ಕಾರ್ಯದರ್ಶಿಗಳು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡದ ಸುತ್ತಲೂ ಅಲಂಕೃತ ಭದ್ರತಾ ಬೇಲಿಯನ್ನು ನಿರ್ಮಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 181 ಡಿಬಿಎಂ 2001, ದಿನಾಂಕ : 25–6–2002.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 1016–ವೆಚ್ಚ–ವಿ/2002, ದಿನಾಂಕ : 30–5–2002.
3. ಕಾರ್ಯಪಾಲಕ ಅಭಿಯಂತರರ ಕಾರ್ಯಾದೇಶ ಸಂಖ್ಯೆ : ಕಾಅ:ಕವಿ:1ಟಿಎಸ್–1 : ಟೆಂಡರ್ : ಎಜಿಸಂ : 407:02–03:3025–29, ದಿನಾಂಕ : 29–11–2002.
4. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಕಾ/2938/03, ದಿನಾಂಕ : 12–8–2003.
5. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 1444 ವೆಚ್ಚ–12/09, ದಿನಾಂಕ : 17–12–2009.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ : (1)ರಲ್ಲಿನ ದಿನಾಂಕ : 25–6–2002ರ ಆದೇಶದನ್ವಯ, ವಿಧಾನಸೌಧ ಕಟ್ಟಡದ ಭದ್ರತೆ ಮತ್ತು ಸುರಕ್ಷತೆಗಾಗಿ ವಿಧಾನಸೌಧದ ಸುತ್ತಲೂ ಅಂದರೆ ರಾಜಭವನದ ಪಶ್ಚಿಮ ದ್ವಾರದಿಂದ ದೇವರಾಜ ಅರಸ್ ರಸ್ತೆ ಮಾರ್ಗವಾಗಿ ವಿಧಾನಸೌಧದ ಪೂರ್ವದ ಜವಾಹರಲಾಲ್ ನೆಹರೂ ಮತ್ತು ಅಂಬೇಡ್ಕರ್ ಪ್ರತಿಮೆಗಳ ಪಕ್ಕದ ಪಶ್ಚಿಮ ಭಾಗದ ಇಳಿಜಾರಿನ ಅಂಚಿನ ಉದ್ದಕ್ಕೂ ಸೇರಿ ರಾಜಭವನದ ಸುತ್ತ ಗೋಡೆಗೆ ಅಂಟಿಕೊಂಡಂತೆ ಎಂ.ಎಸ್. ಫೋರ್ಜ್‌ಡ್ ಕಬ್ಬಿಣದ ಅಲಂಕೃತ ಗ್ರಿಲ್ ಬೇಲಿಯನ್ನು ಹಾಗೂ ವಿಧಾನಸೌಧದ ಪಶ್ಚಿಮ ಭಾಗದಲ್ಲಿ ದೇವರಾಜ ಅರಸ್ ಪ್ರತಿಮೆಯ ಬಳಿ ಒಂದು ಹಾಗೂ ಪೂರ್ವದ ಭಾಗದಲ್ಲಿ ಅಂದರೆ ಉಚ್ಚ ನ್ಯಾಯಾಲಯದಿಂದ ವಿಧಾನಸೌಧಕ್ಕೆ ಬರುವ ರಸ್ತೆಯ ಬಳಿ ಬೇಲಿಯನ್ನು ಅಂಟಿಕೊಂಡಂತೆ ಒಂದು ಅಂದರೆ ಎರಡು ಭದ್ರತಾ ಗಾರ್ಡ್ ಕೋಣೆಗಳನ್ನು ಎಲ್ಲ ಅವಶ್ಯಕ ಸೌಲಭ್ಯಗಳೊಂದಿಗೆ ನಿರ್ಮಿಸಲು ಲೋಕೋಪಯೋಗಿ ಇಲಾಖೆಯು ತಯಾರಿಸಿರುವ ರೂ. 200.00 ಲಕ್ಷಗಳ (ರೂಪಾಯಿ ಇನ್ನೂರು ಲಕ್ಷಗಳು ಮಾತ್ರ) ಅಂದಾಜು ಪಟ್ಟಿ ಮತ್ತು ನಕ್ಷೆಗೆ ಮೇಲೆ ಕ್ರಮ ಸಂಖ್ಯೆ : (2)ರಲ್ಲಿ ಓದಲಾದ ಆರ್ಥಿಕ ಇಲಾಖೆಯ ಟಿಪ್ಪಣಿಯನ್ವಯ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು ಹಾಗೂ ಈ ಕಾಮಗಾರಿಯನ್ನು ನಿಯಮಾನುಸಾರ ತೆಗೆದುಕೊಂಡು ಆರು ತಿಂಗಳೊಳಗೆ ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆಗೆ ಸೂಚಿಸಲಾಗಿತ್ತು. ಈ ಕಾಮಗಾರಿಯನ್ನು 2002–03ನೇ ಸಾಲಿನ ದರಪಟ್ಟಿಯಂತೆ ರೂ. 160.00 ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿ ಮೊದಲನೆ ದರ್ಜೆ ಗುತ್ತಿಗೆದಾರರಿಗೆ ರೂ.

1,76,16,271–00ಗಳ ಮೊತ್ತದ ಟೆಂಡರಿಗೆ ಶೇ. 12ರಷ್ಟು ಹೆಚ್ಚಳಕ್ಕೆ ಅನ್ವಯಿಸಿ ಒಟ್ಟಾರೆ 1025 ಮೀಟರ್ ಉಕ್ಕಿನ ಬೇಲಿಯನ್ನು ನಿರ್ಮಿಸಲು ಮೇಲೆ ಓದಲಾದ ಕ್ರಮ ಸಂಖ್ಯೆ : (3)ರಲ್ಲಿನ ಕಾರ್ಯಾದೇಶ ನೀಡಲಾಗಿದೆ.

ಗುತ್ತಿಗೆ ಕರಾರಿನಂತೆ 1025 ಮೀಟರ್ ಉಕ್ಕಿನ ಬೇಲಿಯನ್ನು ನಿರ್ಮಿಸಬೇಕಾಗಿದ್ದು, ಅದರಂತೆ ಕಾಮಗಾರಿಯು ಪ್ರಗತಿಯಲ್ಲಿರುವಾಗ 740 ಮೀಟರ್ ಉದ್ದದ ಉಕ್ಕಿನ ಬೇಲಿಯನ್ನು ನಿರ್ವಹಿಸಿದ್ದ ಸಮಯದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿರವರು, ಮೇಲೆ ಓದಲಾದ ಕ್ರಮ ಸಂಖ್ಯೆ : (4)ರ ಟಿಪ್ಪಣಿಯಲ್ಲಿ ವಿಧಾನಸೌಧ ಹಾಗೂ ವಿಕಾಸಸೌಧ, ಈ ಎರಡೂ ಕಟ್ಟಡಗಳನ್ನು ಸೇರಿಸಿ ಭದ್ರತಾ ಬೇಲಿಯನ್ನು ಅಳವಡಿಸುವಂತೆ ಸೂಚಿಸಿರುವುದರ ಹಿನ್ನೆಲೆಯಲ್ಲಿ, ಎರಡೂ ಕಟ್ಟಡಗಳನ್ನು (ವಿಧಾನಸೌಧ ಮತ್ತು ವಿಕಾಸಸೌಧ) ಪಂಕ್ತೀಕರಣಗೊಳಿಸಿ ಮುಖ್ಯ ವಾಸ್ತು ಶಿಲ್ಪಿಯವರು ನೀಡಿರುವ ಹೊಸ ನಕ್ಷೆಯ ಪ್ರಕಾರ ಕಾಮಗಾರಿಯನ್ನು ಮುಂದುವರೆಸಲು ವಿಕಾಸಸೌಧದ ಪಶ್ಚಿಮ ದ್ವಾರದಲ್ಲಿ ಸ್ಥಳ ನಿಗದಿಪಡಿಸುವ ಸಲುವಾಗಿ ಕಾಮಗಾರಿಯನ್ನು ತಡೆಹಿಡಿದು ದಿನಾಂಕ 14–12–2006ರಂದು ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ ವಿಕಾಸಸೌಧದ ಪಶ್ಚಿಮ ಮುಖ್ಯ ದ್ವಾರದ ಸ್ಥಳವನ್ನು ನಿಗದಿಪಡಿಸಿ, ಅದರಂತೆ ವಿಕಾಸಸೌಧದ ದ್ವಾರದ ಹಾಗೂ ಮುಂದುವರಿದ ಬೇಲಿಯ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿರುತ್ತದೆ (ಒಟ್ಟಾರೆ 1,700 ಮೀಟರ್‌ಗಳು) ವಿಕಾಸಸೌಧದ ಸುತ್ತಮುತ್ತಲ ನೆಲಮಟ್ಟವು ಏರುಪೇರಾಗಿರುವುದರಿಂದ ಹಾಗೂ ವಿಕಾಸಸೌಧ ಮತ್ತು ಲೋಕಾಯುಕ್ತ ಕಚೇರಿ ಮಧ್ಯದಲ್ಲಿ ನೆಲಮಟ್ಟವು ಅತಿಯಾದ ಇಳಿಜಾರಿನಿಂದ ಕೂಡಿದುದರಿಂದ ಅಡಿಪಾಯ ಮತ್ತು ತಳಮಟ್ಟವನ್ನು ನೆಲಮಟ್ಟಕ್ಕೆ ತಕ್ಕಂತೆ ನಿರ್ಮಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತಳಪಾಯದ ಹಾಗೂ ಅಲಂಕೃತ ಗ್ರಿಲ್ ಬೇಲಿಗೆ ಸಂಬಂಧಿಸಿದ ವಿವರಣೆಗಳ ಪರಿಮಾಣವು ಟೆಂಡರ್‌ನಲ್ಲಿರುವ ಪರಿಮಾಣಕ್ಕಿಂತ ಹೆಚ್ಚಾದುದರಿಂದ, ಈ ಹೆಚ್ಚುವರಿ ಪರಿಮಾಣಕ್ಕಾಗಿ ರೂ. 1,50,69,884.00ಗೆ ವರ್ಕ್‌ಸ್ಲಿಪ್ ಅನ್ನು ತಯಾರಿಸಿ ಸಲ್ಲಿಸಲಾಗಿರುತ್ತದೆ. ಹಾಗೆಯೇ ಕಾಮಗಾರಿಯನ್ನು ದಿನಾಂಕ 29–11–2002ರಲ್ಲಿ ಪ್ರಾರಂಭಿಸಲಾಗಿ ಪ್ರಾರಂಭದ ದಿನದಿಂದಲೂ ದಿನಾಂಕ 14–12–2006ರವರೆಗೆ ಒಂದಲ್ಲ ಒಂದು ಅಡಚಣೆಗಳು ಮತ್ತು ವಿಕಾಸಸೌಧದ ಕಾಮಗಾರಿಯು ಪ್ರಗತಿಯಲ್ಲಿ ಇದ್ದುದರಿಂದ ಬೇಲಿಯ ಕಾಮಗಾರಿಯನ್ನು ಪ್ರಾರಂಭಿಸುವುದು ವಿಳಂಬವಾದ ಪ್ರಯುಕ್ತ ಕಾಮಗಾರಿಯನ್ನು ಪೂರ್ಣಗೊಳಿಸುವ ಕಾಲ ವಿಳಂಬವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ದಿನಾಂಕ : 08–10–2003 ಹಾಗೂ ದಿನಾಂಕ : 30–06–2007ರಲ್ಲಿ ಕಾಮಗಾರಿಯ ಕಾಲಾವಧಿ ವಿಸ್ತರಣೆಗಳನ್ನು ಸಹ ಮುಖ್ಯ ಅಭಿಯಂತರರು, ಸಂ ಮತ್ತು ಕ (ದ)ರವರು ಪತ್ರ ಸಂ:ಸಂಕದ:ಕನಿಶಾ:ಎಇ/1/07–08 ದಿನಾಂಕ : 28–07–07ರಲ್ಲಿ ಅನುಮೋದಿಸಿರುತ್ತಾರೆ. ಕಾಮಗಾರಿಯ ಮುಕ್ತಾಯದ ಹಂತದಲ್ಲಿ ಕೈಗೆತ್ತಿಕೊಂಡ ಕಾಮಗಾರಿಯ ಪರಿಮಾಣಗಳಿಗೆ ಪಿ.ಡಬ್ಲ್ಯೂ 15.28 ಪ್ರಕಾರವಾಗಿ ಗುತ್ತಿಗೆದಾರರು ಸಲ್ಲಿಸಿರುವ ದರಪಟ್ಟಿಯನ್ನು ಪರಿಗಣಿಸಲಾಗಿರುತ್ತದೆ. ವಿಧಾನಸೌಧ ಹಾಗೂ ವಿಕಾಸಸೌಧದ ಸುತ್ತಲು ಕಬ್ಬಿಣದ ಬೇಲಿ ಹಾಕುವ ಕೆಲಸವು ದಿನಾಂಕ 30–06–2007ಕ್ಕೆ ಪೂರ್ಣಗೊಂಡಿರುತ್ತದೆ.

ವಿಧಾನಸೌಧದ ಸುತ್ತಲೂ ಸುಮಾರು 1025 ಮೀಟರ್ ಉಕ್ಕಿನ ಅಲಂಕೃತ ಭದ್ರತಾ ಬೇಲಿ ನಿರ್ಮಾಣಕ್ಕೆ ರೂ. 200 ಲಕ್ಷಗಳ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆಯನ್ನು ಪಡೆಯಲಾಗಿದೆ. ಈ ಮಧ್ಯೆ ಮುಖ್ಯ ಕಾರ್ಯದರ್ಶಿರವರ ಸೂಚನೆಯ ಮೇರೆಗೆ ವಿಧಾನಸೌಧವನ್ನು ಒಳಗೊಂಡಂತೆ ವಿಕಾಸಸೌಧವನ್ನು ಸೇರಿಸಿಕೊಂಡಂತೆ ಒಟ್ಟು 1700 ಮೀಟರ್ ಉದ್ದದ ಉಕ್ಕಿನ ಅಲಂಕೃತ ಭದ್ರತಾ ಬೇಲಿಯನ್ನು ನಿರ್ಮಿಸಲು ಕ್ರಮ ಕೈಗೊಂಡು, ವಿಧಾನಸೌಧ ಹಾಗೂ ವಿಕಾಸಸೌಧದ ಸುತ್ತಲೂ ಕಬ್ಬಿಣದ ಬೇಲಿ ಹಾಕುವ ಕೆಲಸವನ್ನು ದಿನಾಂಕ : 30–06–2007ಕ್ಕೆ ಪೂರ್ಣಗೊಳಿಸಲಾಗಿರುತ್ತದೆ. ವಿಧಾನಸೌಧ ಹಾಗೂ ವಿಕಾಸಸೌಧದ ಸುತ್ತಲೂ ಕಬ್ಬಿಣದ ಅಲಂಕೃತ ಬೇಲಿಯ ನಿರ್ಮಾಣ ಕಾಮಗಾರಿಗಾಗಿ ಒಟ್ಟು ರೂ. 4,21,80,928.00ಗಳು ವೆಚ್ಚವಾಗಿದ್ದು, ಈ ಹಿಂದೆ ವಿಧಾನಸೌಧದ ಸುತ್ತಲೂ ಉಕ್ಕಿನ ಬೇಲಿ ನಿರ್ಮಿಸಲು ಮಂಜೂರಾದ ಅಂದಾಜು ಪಟ್ಟಿಯ ಮೊತ್ತ ರೂ. 200 ಲಕ್ಷಗಳಿಗೆ ಹೋಲಿಕೆ ಮಾಡಿದಾಗ ಈ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತವು ಶೇಕಡ 110.90ರಷ್ಟು ಹೆಚ್ಚುವರಿಯಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 181 ಡಿಬಿಎಂ 2001 ದಿನಾಂಕ 25–06–2002ರ ಅನ್ವಯ ವಿಧಾನಸೌಧದ ಸುತ್ತಲೂ ಉಕ್ಕಿನ ಬೇಲಿ ನಿರ್ಮಾಣವನ್ನು ರೂ. 200 ಲಕ್ಷಗಳ ವೆಚ್ಚದಲ್ಲಿ ನಿರ್ಮಿಸಲು ಆಡಳಿತಾತ್ಮಿಕ ಅನುಮೋದನೆಯನ್ನು ನೀಡಲಾಗಿದೆ. ಆದರೆ ಪ್ರಸ್ತುತ ವಿಕಾಸಸೌಧವನ್ನು ಸೇರಿಸಿಕೊಂಡು ರೂ. 4,21,80,928.00ಗಳ ವೆಚ್ಚದಲ್ಲಿ ಒಟ್ಟು 1,700 ಮೀಟರ್ ಉದ್ದದ ಉಕ್ಕಿನ ಅಲಂಕೃತ ಭದ್ರತಾ ಬೇಲಿಯನ್ನು ನಿರ್ಮಿಸಲಾಗಿದ್ದು, ಆ ಅಲಂಕೃತ ಗ್ರಿಲ್‌ನ ಕಾಮಗಾರಿಯ ಒಟ್ಟು ವೆಚ್ಚ ರೂ. 4,21,80,928.00ಗಳ ಪರಿಷ್ಕೃತ ಅಂದಾಜು ಮೊತ್ತಕ್ಕೆ ಮೇಲೆ ಕ್ರಮ ಸಂಖ್ಯೆ : (5)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಆರ್ಥಿಕ ಇಲಾಖೆಯು ಸಹಮತಿಯನ್ನು ನೀಡಿರುತ್ತದೆ. ಅದರಂತೆ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 259 ಡಿಬಿಎಂ 2005, ಬೆಂಗಳೂರು, ದಿನಾಂಕ : 3–3–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ವಿಧಾನಸೌಧ ಮತ್ತು ವಿಕಾಸಸೌಧ ಕಟ್ಟಡಗಳಿಗೆ ಭದ್ರತಾ ದೃಷ್ಟಿಯಿಂದ ಅಳವಡಿಸಿರುವ ಅಲಂಕಾರಿಕ ಭದ್ರತಾ ಗ್ರಿಲ್ ಕಾಮಗಾರಿಯ ಒಟ್ಟು ವೆಚ್ಚ ರೂ. 4,21,80,928.00/– (ರೂಪಾಯಿ ನಾಲ್ಕು ಕೋಟಿ ಇಪ್ಪತ್ತೊಂದು ಲಕ್ಷದ ಎಂಬತ್ತು ಸಾವಿರದ ಒಂಭೈನೂರ ಇಪ್ಪತ್ತೆಂಟು ಮಾತ್ರ) (ವರ್ಕ್‌ಸ್ಲಿಪ್ ಮೊತ್ತ ರೂ. 1,50,69,844/– ಸೇರಿ) ಗಳ ಮೊತ್ತದ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ 4059–ಲೋಇ–80–021–0–01–ಸಚಿವಾಲಯ ಸಾಮಾನ್ಯ ಸೇವೆಗಳು ಇದರಡಿಯಲ್ಲಿ ಭರಿಸತಕ್ಕದ್ದು.

ಈ ಅದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಆಇ 1444 ವೆಚ್ಚ–12/09, ದಿನಾಂಕ : 17–12–2009ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 658

(ಕೆ.ಎಸ್. ಮಂಜುನಾಥ್)

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಕಾರ್ಯಕಾರಿ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಾ. ಕೆ. ಮಮತಾ, ಹಿರಿಯ ತಜ್ಞರು ರವರ ಸೇವೆಯನ್ನು ಸರ್ಕಾರಿ ಸ್ವಾಯತ್ತ ಸಂಸ್ಥೆಯಾದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸೇವೆಯಲ್ಲಿ ವಿಲೀನಗೊಳಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ : ಆಕುಕ 395 ಎಂಎಂಸಿ 2007, ದಿನಾಂಕ : 06–01–2010.

2. ಪತ್ರ ಸಂಖ್ಯೆ : ಬೆಂವೈವಿ/ಸಿ(1)90/09–10, ದಿನಾಂಕ : 29–01–2010.

ಪ್ರಸ್ತಾವನೆ :

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಬೀದರ್ ಮತ್ತು ಶಿವಮೊಗ್ಗ ವೈದ್ಯಕೀಯ ವಿಜ್ಞಾನ ಸಂಸ್ಥೆಗಳು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ, 1960ರಡಿ ನೋಂದಾಯಿತ ಸ್ವಾಯತ್ತ ಸಂಸ್ಥೆಗಳಾಗಿರುತ್ತವೆ. ಆಯಾ ಜಿಲ್ಲಾ ಕೇಂದ್ರಗಳಲ್ಲಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಆಸ್ಪತ್ರೆಗಳನ್ನು ಅವು ಹೊಂದಿದ್ದ, ಮೂಲಭೂತ ಸೌಕರ್ಯ, ಕಟ್ಟಡ, ಉಪಕರಣ, ಸಿಬ್ಬಂದಿ ಮತ್ತು ಆಯವ್ಯಯದೊಂದಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಶಿಸ್ತು ನಿಯಂತ್ರಣಕ್ಕೆ ತರಲಾಯಿತು. ಈ ಜಿಲ್ಲಾ ಆಸ್ಪತ್ರೆಗಳನ್ನು ಆಯಾ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರು/ಡೀನ್/ಪ್ರಾಂಶುಪಾಲರ ಶೈಕ್ಷಣಿಕ, ಆಡಳಿತಾತ್ಮಕ ಮತ್ತು ಶಿಸ್ತು ನಿಯಂತ್ರಣದ ಬೋಧನಾ ಆಸ್ಪತ್ರೆಗಳೆಂದು ಕರೆಯಲಾಯಿತು. ಅವುಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ ವೈದ್ಯರುಗಳು ಅವರು ಹೊಂದಿದ್ದ ಸ್ನಾತಕ/ಸ್ನಾತಕೋತ್ತರ ಪದವಿಗಳಿಗೆ ಅನುಸಾರವಾಗಿ ಆಯಾಯ ವಿಭಾಗಗಳಲ್ಲಿ ಬೋಧಕ ಸಿಬ್ಬಂದಿಯಾಗಿ ಭಾರತೀಯ ವೈದ್ಯಕೀಯ ಪರಿಷತ್ತಿಗೆ ವಾರ್ಷಿಕ ತಪಾಸಣೆಗಾಗಿ ತೋರಿಸಲಾಯಿತು. ಪ್ರಯುಕ್ತ ಇವರು ಬೋಧಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಹೊಂದಿಕೊಂಡಿರುವ ಬೋಧನಾ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಹಿರಿಯ ತಜ್ಞರಾದ ಡಾ : ವಿ.ಎಸ್. ಶಂಕರೇಗೌಡರವರನ್ನು ಬೆಂಗಳೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಸೇವೆಯಲ್ಲಿ ಮೇಲೆ (1) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಕೆಲವೊಂದು ಷರತ್ತುಗಳಿಗೊಳಪಡಿಸಿ ವಿಲೀನಗೊಳಿಸಲಾಗಿತ್ತು.

ನಿರ್ದೇಶಕರು, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ರವರು ಮೇಲೆ (2)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಸದರಿ ವೈದ್ಯರು 30 ವರ್ಷಗಳ ಸೇವೆಯನ್ನು ಮಾಡಿದ್ದು ಹಾಲಿ ಯಾವುದೇ ಹುದ್ದೆಯನ್ನು ನೀಡದೇ ಇರುವ ಪ್ರಯುಕ್ತ ಸದರಿ ವೈದ್ಯರು ತಮ್ಮ ವೃಂದ ಬದಲಾವಣೆಯನ್ನು ರದ್ದುಪಡಿಸಿ, ಈ ಮೊದಲೇ ಕಾರ್ಯ ನಿರ್ವಹಿಸುತ್ತಿದ್ದ ಓ.ಪಿ.ಡಿ. ಸರ್ಜನ್ ಹುದ್ದೆಗೆ (ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ) ಮರು ನೇಮಕ ಮಾಡಲು ಕೋರಿರುತ್ತಾರೆಂದು ತಿಳಿಸುತ್ತಾ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕುಷವಾಗಿ ಪರಿಶೀಲಿಸಿದ ನಂತರ, ಡಾ. ವಿ.ಎಸ್. ಶಂಕರೇಗೌಡ, ಹಿರಿಯ ತಜ್ಞರುರವರ ಸೇವೆಯನ್ನು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ

ವಿಲೀನಗೊಳಿಸಲಾಗಿರುವುದನ್ನು ಹಿಂದಕ್ಕೆ ಪಡೆಯಲು ಹಾಗೂ ಬೋಧಕ ಸಿಬ್ಬಂದಿಯ ಕೊರತೆಯನ್ನು ನೀಗಲು ಭಾರತೀಯ ವೈದ್ಯಕೀಯ ಪರಿಷತ್ತಿನ ನಿಯಂತ್ರಣಗಳ ಪ್ರಕಾರ, ವೈದ್ಯಕೀಯ ವಿಜ್ಞಾನ ಸಂಸ್ಥೆಗಳಿಗೆ ಹೊಂದಿಕೊಂಡಿರುವ ಬೋಧನಾ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಯ ಡಾ. ಮಮತ, ಹಿರಿಯ ತಜ್ಞರುರವರ ಸೇವೆಯನ್ನು ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ ಸೇವೆಯಲ್ಲಿ ವಿಲೀನಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಅದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ 9 ಎಂಎಂಇ 2010, ಬೆಂಗಳೂರು, ದಿನಾಂಕ : 02ನೇ ಮಾರ್ಚ 2010

ಸರ್ಕಾರಿ ಆದೇಶ ಸಂಖ್ಯೆ : ಆಕುಕ 395 ಎಂಎಂಇ 2007, ದಿನಾಂಕ : 06–01–2010ರಲ್ಲಿ ಡಾ. ವಿ.ಎಸ್. ಶಂಕರೇಗೌಡ, ಹಿರಿಯ ತಜ್ಞರುರವರ ಸೇವೆಯನ್ನು ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ವಿಲೀನಗೊಳಿಸಲಾಗಿರುವುದನ್ನು ಈ ಕೂಡಲೇ ಜಾರಿಗೆ ಬರುವಂತೆ ಹಿಂದಕ್ಕೆ ಪಡೆಯಲಾಗಿದೆ ಹಾಗೂ ಹಿರಿಯ ತಜ್ಞರ ಹುದ್ದೆಯಲ್ಲೇ ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆಯಲ್ಲಿ ಮುಂದುವರಿಸಲಾಗಿದೆ.

ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಗೆ ಹೊಂದಿಕೊಂಡಿರುವ ಬೋಧನಾ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಡಾ. ಮಮತಾ, ಹಿರಿಯ ತಜ್ಞರು ಇವರ ಸೇವೆಯನ್ನು ಈ ಕೂಡಲೇ ಜಾರಿಗೆ ಬರುವಂತೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಈ ಕೆಳಗಿನ ಷರತ್ತಿಗಳಿಗೊಳಪಟ್ಟು ವಿಲೀನಗೊಳಿಸಲಾಗಿದೆ.

ವೈದ್ಯರ ಹೆಸರು	ಪದನಾಮ	ವಿದ್ಯಾರ್ಹತೆ	ಜನ್ಮ ದಿನಾಂಕ	ಸೇವೆಗೆ ಸೇರಿದ ದಿನಾಂಕ	ವಿಲೀನಗೊಳಿಸಿದ ಸಂಸ್ಥೆಯ ಹೆಸರು
ಡಾ. ಮಮತಾ	ಹಿರಿಯ ತಜ್ಞರು	ಎಂಎಸ್ (ಒಬಿಜಿ)	08–03–1963	09–06–1997	ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಮೈಸೂರು

ಷರತ್ತುಗಳು

(1) ತಜ್ಞ ವೈದ್ಯರು ಭಾರತೀಯ ವೈದ್ಯಕೀಯ ಪರಿಷತ್ತಿನ ಬೋಧಕ ಸಿಬ್ಬಂದಿಗೆ ವಿದ್ಯಾರ್ಹತೆ ನಿಯಂತ್ರಣಗಳ ಪ್ರಕಾರ, ಸ್ನಾತಕೋತ್ತರ ಪದವಿಯನ್ನು ಹೊಂದಿ ಅರ್ಹರಾಗಿರತಕ್ಕದ್ದು.

(2) ತಜ್ಞ ವೈದ್ಯರು ಪರಿವೀಕ್ಷಣಾ ಅವಧಿ /ಸ್ಥಾನಪನ್ನ ಅವಧಿಯನ್ನು ತೃಪ್ತಿಕರವಾಗಿ ಪೂರೈಸಿರತಕ್ಕದ್ದು.

(3) ಇವರ ವಿರುದ್ಧ ಇಲಾಖಾ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿ ಇರತಕ್ಕದ್ದಲ್ಲ.

(4) ತಜ್ಞ ವೈದ್ಯರು ಸ್ವಾಯತ್ತ ಸಂಸ್ಥೆಗಳ ಸೇವೆಯಲ್ಲಿ ವಿಲೀನಗೊಂಡ ನಂತರ ಮುಂದೆ ಅವರು ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ವಾಪಸ್ ಬರಲು ಆಸ್ಪದ ಇರತಕ್ಕದ್ದಲ್ಲ.

(5) ಸರ್ಕಾರಿ ಇಲಾಖೆಯಿಂದ ಸ್ವಾಯತ್ತ ಸಂಸ್ಥೆಗೆ ವಿಲೀನಗೊಳ್ಳಲು ಸಂಬಂಧಿಸಿದ ನೌಕರರುಗಳು ಒಪ್ಪಿಗೆಯನ್ನು ಬರವಣಿಗೆ ಮೂಲಕ ಸಲ್ಲಿಸಿರತಕ್ಕದ್ದು.

(6) ಸದರಿ ನೌಕರರು ಸರ್ಕಾರದಲ್ಲಿ ಸಲ್ಲಿಸಿದ ಸೇವೆಗೆ ಸಂಬಂಧಿಸಿದಂತೆ ಪ್ರೊರೇಟಾ (Prorata) ಪಿಂಚಣಿ ಬಗ್ಗೆ ಆದೇಶವನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು) ಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಸಿಆಸುಇ 524 ಸೇನಿಎ 2008, ದಿನಾಂಕ : 22–12–2008 ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್.659 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಮೂತ್ರ ಜನಕಾಂಗ ಸುರಕ್ಷಾ ಯೋಜನೆಯ ಅನುಷ್ಠಾನದ ಬಗ್ಗೆ.

ಓದಲಾಗಿದೆ : 1. ಪತ್ರ ಸಂಖ್ಯೆ : ನೆಯುಸಂ/ಆಡಳಿತ/63/2008-09, ದಿನಾಂಕ : 03-09-2009.

2. ಪತ್ರ ಸಂಖ್ಯೆ : ನಿಯುಸಂ/ಆಡಳಿತ/63/2009-10, ದಿನಾಂಕ : 18-11-2009

ಪ್ರಸ್ತಾವನೆ :

ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇದು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದು, ಈ ಸಂಸ್ಥೆಯು ನೆಫ್ರೋಲಜಿ ಹಾಗೂ ಯುರಾಲಜಿಗೆ ಸಂಬಂಧಿಸಿದ ಖಾಯಿಲೆಗಳಿಗೆ ಚಿಕಿತ್ಸೆ ನೀಡುವುದರ ಜೊತೆಗೆ ಸಂಶೋಧನೆ ಮತ್ತು ತರಬೇತಿ ಕಾರ್ಯಕ್ರಮಗಳನ್ನು ನೀಡುತ್ತಿದೆ. ಇದು ಸುಮಾರು 150 ಹಾಸಿಗೆಗಳ ಸೌಲಭ್ಯವನ್ನು ಹೊಂದಿರುತ್ತದೆ.

ನಿರ್ದೇಶಕರು, ನೆಫ್ರೋ-ಯುರಾಲಜಿ ಸಂಸ್ಥೆರವರು ಮೇಲೆ (1) ಮತ್ತು (2)ರಲ್ಲಿ ಓದಲಾದ ತಮ್ಮ ಪತ್ರಗಳಲ್ಲಿ ಸಂಸ್ಥೆಯಲ್ಲಿ ಹೊರರೋಗಿ ಮತ್ತು ಒಳರೋಗಿಗಳ ವಿಭಾಗದಲ್ಲಿ, ಅದರಲ್ಲೂ ಡಯಾಲಿಸಿಸ್ ಚಿಕಿತ್ಸೆಗೋಸ್ಕರ ದಾಖಲಾಗುವ ರೋಗಿಗಳ ಸಂಖ್ಯೆ : ದಿನೇ ದಿನೇ ಹೆಚ್ಚಾಗುತ್ತಿದ್ದು, ಬಡತನ ರೇಖೆಗಿಂತ ಕೆಳಗಿರುವ ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆಗಾಗಿ ರೂ. 250.00 ಗಳನ್ನು ಹಾಗು ಇತರರಿಗೆ ರೂ. 500.00 ಗಳನ್ನು ನಿಗಧಿಪಡಿಸಿ ಚಿಕಿತ್ಸೆ ನೀಡಲಾಗುತ್ತಿದೆಯೆಂದು, ಇದರ ಜೊತೆಗೆ ಮೂತ್ರ ಜನಕಾಂಗ ಜೋಡಣೆಗೆ ರೂ. 1,50,000/- ಗಳನ್ನು ನಿಗಧಿಪಡಿಸಲಾಗಿದೆಯೆಂದು, ಸದರಿ ಚಿಕಿತ್ಸಾ ವೆಚ್ಚವನ್ನು ಮಾನ್ಯ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಭರಿಸಲಾಗುತ್ತಿದ್ದು, ಮೂತ್ರ ಜನಕಾಂಗ ಸುರಕ್ಷಾ ಯೋಜನೆ ಎಂಬ ಹೊಸ ಯೋಜನೆಯನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದೆಯೆಂದು ತಿಳಿಸುತ್ತಾ, ಈ ಯೋಜನೆಯಲ್ಲಿ ಮುಖ್ಯ ಮಂತ್ರಿಗಳು, ಡಯಾಲಿಸಿಸ್ ಅವಶ್ಯವಿರುವ ಬಡ ರೋಗಿಗಳನ್ನು ಒಂದು ವರ್ಷದಲ್ಲಿ 50 ರಿಂದ 100 ರೋಗಿಗಳನ್ನು ಗುರುತಿಸಿ ಚಿಕಿತ್ಸೆಗೆ ನಿರ್ದೇಶಿಸಬಹುದೆಂದು, 100 ರೋಗಿಗಳಿಗೆ ತಗಲುವ ಅಂದಾಜು ವೆಚ್ಚ ರೂ. 1.00 ಕೋಟಿ ಹಾಗೂ 50 ರೋಗಿಗಳಿಗೆ ಮೂತ್ರ ಜನಕಾಂಗ ಅಂಗಾಂಗ ಜೋಡಣೆಗೆ ತಗಲುವ ಅಂದಾಜು ವೆಚ್ಚ ರೂ. 75.00 ಲಕ್ಷಗಳನ್ನು ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ಮುಂಗಡ ಮಂಜೂರು ಮಾಡಬಹುದೆಂದು ಮತ್ತು ಮುಖ್ಯಮಂತ್ರಿಗಳು ಅಗಿಂದಾಗ್ಗೆ ರೋಗಿಗಳನ್ನು ಗುರುತಿಸಿ ನಿರ್ದೇಶಿಸಿದಲ್ಲಿ ರೋಗಿಗಳಿಗೆ ಸಂಸ್ಥೆಯಲ್ಲಿ ಚಿಕಿತ್ಸೆ ನೀಡಲಾಗುವುದೆಂದು ತಿಳಿಸುತ್ತಾ, ಈ ಯೋಜನೆ ಕಾರ್ಯಗತಗೊಳಿಸಲು ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಹಣ ಬಿಡುಗಡೆ ಮಾಡುವಂತೆ ಕೋರುತ್ತಾ, ಈ ಯೋಜನೆ ಜಾರಿಗೆ ತರಲು 2009-10 ನೇ ಸಾಲಿನಲ್ಲಿ ಅನುದಾನ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ, ನಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿ ಮುಖ್ಯಮಂತ್ರಿಯವರ ಪರಿಹಾರ ನಿಧಿಯ ಸಹಾಯಾನುದಾನದೊಂದಿಗೆ ವಾರ್ಷಿಕ 100 ಬಡ ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆಯನ್ನು ಮತ್ತು 50 ಬಡ ರೋಗಿಗಳಿಗೆ ಮೂತ್ರ ಜನಕಾಂಗ ಜೋಡಣೆಯನ್ನು ಮೂತ್ರ ಜನಕಾಂಗ ಸುರಕ್ಷಾ ಎಂಬ ಯೋಜನೆಯಡಿ ಅನುಷ್ಠಾನಗೊಳಿಸಲು ಸರ್ಕಾರವು ತೀರ್ಮಾನಿಸಿ, ಈ ಆದೇಶವನ್ನು ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ ಆಕುಕ 144 ಎಂಎಸ್‌ಎಫ್ 2009, ಬೆಂಗಳೂರು, ದಿನಾಂಕ : 01ನೇ ಮಾರ್ಚಿ 2010

ನೆಫ್ರೋ-ಯುರಾಲಜಿ ಸಂಸ್ಥೆ, ಬೆಂಗಳೂರು ಇಲ್ಲಿ ಮುಖ್ಯಮಂತ್ರಿಯವರ ಪರಿಹಾರ ನಿಧಿಯ ಸಹಾಯಾನುದಾನದೊಂದಿಗೆ ವಾರ್ಷಿಕ 100 (ಒಂದು ನೂರು) ಅರ್ಹ ಬಡ ರೋಗಿಗಳಿಗೆ ಡಯಾಲಿಸಿಸ್ ಚಿಕಿತ್ಸೆಯನ್ನು ಮತ್ತು 50 (ಐವತ್ತು) ಅರ್ಹ ಬಡ ರೋಗಿಗಳಿಗೆ ಮೂತ್ರ ಜನಕಾಂಗ ಜೋಡಣೆಯನ್ನು ಮೂತ್ರ ಜನಕಾಂಗ ಸುರಕ್ಷಾ ಎಂಬ ಯೋಜನೆಯಡಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಅದೇಶದವರೆಗೆ ಈ ಕೆಳಗಿನ ಷರತ್ತಿಗಳಿಗೊಳಪಟ್ಟು ಆನುಷ್ಠಾನಗೊಳಿಸಲು ಆದೇಶಿಸಿದೆ.

1. ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಭರಿಸಲ್ಪಡುವ ಸಹಾಯಾನುದಾನದಿಂದ ಕಿಡ್ನಿ ಸುರಕ್ಷಾ ಯೋಜನೆಯಡಿ ಅರ್ಹ ಬಡ ರೋಗಿಗಳಿಗೆ ವಾರ್ಷಿಕ 100 (ಒಂದು ನೂರು) ಡಯಾಲಿಸಿಸ್ ಚಿಕಿತ್ಸೆಯನ್ನು ಮತ್ತು 50 (ಐವತ್ತು) ಮೂತ್ರ ಜನಕಾಂಗ ಜೋಡಣೆಯನ್ನು ಮಾತ್ರ ಕೈಗೊಳ್ಳತಕ್ಕದ್ದು.

2. ಪ್ರತಿ ಡಯಾಲಿಸಿಸ್ ಪ್ರಕರಣಕ್ಕೆ ರೂ. 1.00 ಲಕ್ಷಗಳನ್ನು (ಒಂದು ನೂರು ಲಕ್ಷ ರೂಪಾಯಿಗಳು ಮಾತ್ರ) ಮತ್ತು ಪ್ರತಿ ಮೂತ್ರ ಜನಕಾಂಗ ಜೋಡಣೆಗೆ ರೂ. 1.50 ಲಕ್ಷಗಳನ್ನು (ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ) ವಿನಿಯೋಗಿಸತಕ್ಕದ್ದು.

3. ಪ್ರತಿ ಡಯಾಲಿಸಿಸ್ ಪ್ರಕರಣಕ್ಕೆ ರೂ. 1.00 ಲಕ್ಷಕ್ಕಿಂತ ಮತ್ತು ಪ್ರತಿ ಮೂತ್ರ ಜನಕಾಂಗ ಜೋಡಣೆಗೆ ರೂ. 1.50 ಲಕ್ಷಕ್ಕಿಂತ ಮೇಲ್ಪಟ್ಟ ಚಿಕಿತ್ಸಾ ವೆಚ್ಚವನ್ನು ನೆಫ್ರೋ-ಯುರಾಲಜಿ ಸಂಸ್ಥೆಯೇ ತನ್ನ ಸಂಪನ್ಮೂಲಗಳಿಂದ ಭರಿಸಿಕೊಳ್ಳತಕ್ಕದ್ದು.

4. ಪ್ರತಿ ಡಯಾಲಿಸಿಸ್ ಪ್ರಕರಣಕ್ಕೆ ರೂ. 1.00 ಲಕ್ಷಗಳಂತೆ 100 (ಒಂದು ನೂರು) ಪ್ರಕರಣಗಳಿಗೆ ತಗಲುವ ರೂ. 1.00 ಕೋಟಿಗಳು ಮತ್ತು ಪ್ರತಿ ಮೂತ್ರ ಜನಕಾಂಗ ಜೋಡಣೆಗೆ ರೂ. 1.50 ಲಕ್ಷಗಳಂತೆ 50 (ಐವತ್ತು) ಪ್ರಕರಣಗಳಿಗೆ ತಗಲುವ ರೂ. 75.00 ಲಕ್ಷಗಳ ವೆಚ್ಚವನ್ನು ಸರ್ಕಾರದ ಅನುದಾನದ ರೂಪವಾಗಿ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಭರಿಸತಕ್ಕದ್ದು.

5. ಡಯಾಲಿಸಿಸ್ ಚಿಕಿತ್ಸೆಗಾಗಿ ಮತ್ತು ಮೂತ್ರ ಜನಕಾಂಗ ಜೋಡಣೆಗೆ ದಾಖಲಾಗುವ ಬಡ ರೋಗಿಗಳು ಕಿಡ್ನಿ ಸುರಕ್ಷಾ ಯೋಜನೆಯಡಿ ಫಲಾನುಭವಿಗಳಾಗಲು ಅರ್ಹರೇ ? ಎಂಬುದನ್ನು ಖಚಿತಪಡಿಸಿಕೊಳ್ಳಲು ಈ ಕೆಳಕಂಡ ದಾಖಲಾತಿಗಳನ್ನು ಸಂಸ್ಥೆಯು ಕಡ್ಡಾಯವಾಗಿ ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಒದಗಿಸತಕ್ಕದ್ದು.

(i) ಚಿಕಿತ್ಸೆಗಾಗಿ ದಾಖಲಾಗುವ ರೋಗಿಯ ಮೂರು ಪಾಸ್ ಪೋರ್ಟ್ ಸೈಜಿನ ಭಾವಚಿತ್ರಗಳು.

(ii) ಚಿಕಿತ್ಸೆಗಾಗಿ ದಾಖಲಾಗುವ ರೋಗಿಯು ಬಡತನ ರೇಖೆಗಿಂತ ಕೆಳಮಟ್ಟದವರೆಂದು (BPL) ಸರ್ಕಾರವು ನೀಡಿರುವ ಮೂಲ ಕಾರ್ಡ್ ಅಥವಾ ಸಂಬಂಧಪಟ್ಟ ತಹಶೀಲ್ದಾರ್‌ರವರು ನೀಡಿರುವ ವರಮಾನ ಪ್ರಮಾಣ ಪತ್ರ.

(iii) ಚಿಕಿತ್ಸೆಗಾಗಿ ದಾಖಲಾಗುವ ರೋಗಿಗೆ ಚುನಾವಣಾ ಆಯೋಗದಿಂದ ವಿತರಿಸಿರುವ ಗುರುತಿನ ಚೀಟಿ.

(iv) ನೆಫ್ರೋ–ಯುರಾಲಜಿ ಸಂಸ್ಥೆಯಿಂದ ರೋಗಿಯ ವೈದ್ಯಕೀಯ ಸೌಲಭ್ಯಕ್ಕೆ ತಗಲುವ ಅಂದಾಜು ವೆಚ್ಚದ ಪಟ್ಟಿ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ಶ್ರೀರಾಮರೆಡ್ಡಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ಪಿ.ಆರ್.660

ತಿದ್ದುಪಡಿ

ಸಂಖ್ಯೆ : ಆಕುಕ 143 ಎಂಪಿಎಸ್ 2009, ಬೆಂಗಳೂರು, ದಿನಾಂಕ : 24–02–2010

ಸರ್ಕಾರದ ಅದೇಶ ಸಂಖ್ಯೆ : ಆಕುಕ 143 ಎಂಪಿಎಸ್ 2009, ದಿನಾಂಕ : 20–02–2010ರಲ್ಲಿ ವಿಷಯ ಭಾಗದಲ್ಲಿನ ನರ್ಸಿಂಗ್ ಪದಕ್ಕೆ ಬದಲಾಗಿ ಎಂ.ಎಸ್ಸಿ., ಇನ್ ರೇಡಿಯೇಷನ್ ಫಜಿಕ್ಸ್ ಎಂದೂ ಮತ್ತು ಪ್ರಸ್ತಾವನೆ ಹಾಗೂ ಆದೇಶದ ಭಾಗಗಳಲ್ಲಿನ ಎಂ.ಎಸ್ಸಿ., ನರ್ಸಿಂಗ್ ಇನ್ ರೇಡಿಯೇಷನ್ ಫಿಜಿಕ್ಸ್ ಎಂಬ ಪದಗಳನ್ನು ಎಂ.ಎಸ್ಸಿ.ಇನ್ ರೇಡಿಯೇಷನ್ ಫಿಜಿಕ್ಸ್ ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ವಿ. ಶ್ರೀರಾಮರೆಡ್ಡಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

ಪಿ.ಆರ್.661

ಅಧಿಸೂಚನೆ

ಸಂಖ್ಯೆ : ಆಕುಕ 491 ಪಿಐಎಂ 2008, ಬೆಂಗಳೂರು, ದಿನಾಂಕ : 01–03–2010

ಅಧಿಸೂಚನೆ ಸಂಖ್ಯೆ : ಆಕುಕ 491 ಪಿಐಎಂ 2008 ದಿ : 13–01–2009 ರಲ್ಲಿನ ಕೆ.ಟಿ.ಪಿ.ಪಿ. ಆಕ್ಟ್ 1999ರ ನಿಯಮ 2 (ಡಿ) ರನ್ವಯ ಅಪರ ನಿರ್ದೇಶಕರು, ರಾಜ್ಯ ಡ್ರಗ್ ಲಾಜಿಸ್ಟಿಕ್ ಸೊಸೈಟಿ, ಬೆಂಗಳೂರು ಇವರನ್ನು ಅಯುಷ್ ಇಲಾಖೆಗೆ ಸಂಬಂಧಿಸಿದಂತೆ ಸಂಗ್ರಹಣಾ ಸಂಸ್ಥೆ (Procurement Entity) ಎಂದು ಘೋಷಿಸಿರುವುದನ್ನು ಸ್ಥಗಿತಗೊಳಿಸಿ, ಕರ್ನಾಟಕ ಡ್ರಗ್ ಲಾಜಿಸ್ಟಿಕ್ ಮತ್ತು ವೇರ್ ಹೌಸಿಂಗ್ ಸೊಸೈಟಿ ಬದಲಾಗಿ 2009–10ನೇ ಸಾಲಿಗೆ ಮಾತ್ರ ಸದರಿ ಇಲಾಖೆಯ ಔಷಧಿ ಖರೀದಿಯ ಅನುದಾನದಲ್ಲಿ ಶೇಕಡಾ 40 ರಷ್ಟು ಮೊತ್ತದ ಆಯುರ್ವೇದ ಮತ್ತು ಯುನಾನಿ ಔಷಧಿಗಳನ್ನು ಕೆ.ಟಿ.ಪಿ.ಪಿ. ಆಕ್ಟ್ 1999ರ ನಿಯಮ 4(ಜಿ) ಪ್ರಕಾರ ವಿನಾಯಿತಿ ಪಡೆದಿರುವ ಕೇಂದ್ರ ಸ್ವಾಮ್ಯದ IMPCL ಕಂಪನಿಯಿಂದ, ಖರೀದಿಸಲು ಅನುಮತಿಸಿದೆ.

ನಿರ್ದೇಶಕರು, ಆಯುಷ್ ಇಲಾಖೆ, ಜಿಲ್ಲಾ ಆಯುಷ್ ಅಧಿಕಾರಿಗಳು ಮತ್ತು ಆಯುಷ್ ಕಾಲೇಜುಗಳ ಪ್ರಾಚಾರ್ಯರನ್ನು ಕೆ.ಟಿ.ಪಿ.ಪಿ.ಆಕ್ಟ್ 1999ರ ನಿಯಮ 2(ಡಿ) ರನ್ವಯ ಈ ಉದ್ದೇಶಕ್ಕಾಗಿ 2009-10ನೇ ಸಾಲಿಗೆ "Procurement Entity" ಎಂದು ಘೋಷಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎನ್.ಮಹಾಲಕ್ಷ್ಮಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಪಿ.ಆರ್.662

ತಿದ್ದುಪಡಿ

ಸಂಖ್ಯೆ : ವಇ 07 ಹೆಚ್ಎಎಸ್ 2010, ಬೆಂಗಳೂರು, ದಿನಾಂಕ : 03ನೇ ಫೆಬ್ರವರಿ 2010

ವಿಷಯ : ಬಳ್ಳಾರಿ ಜಿಲ್ಲೆ, ಹೊಸಪೇಟೆ ಕ್ಷೇತ್ರದ ಆಶ್ರಯ ಸಮಿತಿಗೆ ಅಧಿಕಾರೇತರ ಸದಸ್ಯರ ನೇಮಕಾತಿ ಬಗ್ಗೆ.

ಸರ್ಕಾರದ ಆದೇಶ ಸಂಖ್ಯೆ: ವಇ 29 ಹೆಚ್ಎಎಸ್ 2008, ದಿನಾಂಕ : 24ನೇ ನವೆಂಬರ್ 2010ರ ಆದೇಶದ ಅಭ್ಯರ್ಥಿಯ ಹೆಸರಿನ ಕ್ರಮ ಸಂಖ್ಯೆ (1) ರಲ್ಲಿ "ಶ್ರೀಮತಿ ರೇಖಾಮಣಿ ಬಿನ್ ಬಸವರಾಜ, 11ನೇ ವಾರ್ಡ್, ನೆಹರು ಕಾಲೋನಿ, ಹೊಸಪೇಟೆ," ಎಂದು ನಮೂದಾಗಿರುವುದನ್ನು "ಶ್ರೀಮತಿ ರೇಖಾರಾಣಿ ಬಿನ್ ಎ.ಎಂ. ಬಸವರಾಜ, 31ನೇ ವಾರ್ಡ್, 2ನೇ ಮೇನ್, ನೆಹರು ಕಾಲೋನಿ, ಹೊಸಪೇಟೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕೆ.ಆರ್. ವಲ್ಲೂರ
ಪೀಠಾಧಿಕಾರಿ-2, ವಸತಿ ಇಲಾಖೆ.

ಪಿ.ಆರ್.663

ಸಹಕಾರ ಸಚಿವಾಲಯ

ವಿಷಯ : ಶ್ರೀ ಶಂಕರ ಸೇವಾ ಸಮಿತಿ ರಾಜಾಜಿನಗರ, ಬೆಂಗಳೂರು ಈ ಸಮಿತಿಗೆ ನೇಮಿಸಲಾದ ಆಡಳಿತಾಧಿಕಾರಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರಿ ಆದೇಶ ಸಂಖ್ಯೆ : ಸಇ 116 ಸಸಂನೋ 2009, ದಿನಾಂಕ 23-10-2009

2) ಆಡಳಿತಾಧಿಕಾರಿ ಶ್ರೀ ಶಂಕರ ಸೇವಾ ಸಮಿತಿ ರಾಜಾಜಿನಗರ, ಬೆಂಗಳೂರು ಹಾಗೂ ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಪತ್ರ ಸಂಖ್ಯೆ ಜೆಆರ್‌ಬಿ/ಆಶಾ/02/2009-10, ದಿನಾಂಕ 3-2-2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ 23-10-2009ರ ಆದೇಶದಲ್ಲಿ ಶ್ರೀ ಶಂಕರ ಸೇವಾ ಸಮಿತಿ ರಾಜಾಜಿನಗರ, ಬೆಂಗಳೂರು ಈ ಸಂಸ್ಥೆಯ ಆಡಳಿತ ಮಂಡಳಿಯ ಅವಧಿಯು ವರ್ಷಾಂತ್ಯಕ್ಕೆ ಮುಕ್ತಾಯವಾಗಲಿರುವುದರಿಂದ ಹಾಗೂ ಪ್ರಸ್ತುತ ಸಂಘದ ಸದಸ್ಯತ್ವದ ಬಗ್ಗೆ ಗೊಂದಲವಿರುವುದರಿಂದ ಮತ್ತು ಸಂಸ್ಥೆಯ ಹಿತದೃಷ್ಟಿಯಿಂದ ಈ ಸಂಸ್ಥೆಗೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ವೀರೇಶ್, ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಚಾಮರಾಜಪೇಟೆ, ಬೆಂಗಳೂರು ಇವರನ್ನು ಆಡಳಿತಾಧಿಕಾರಿಯನ್ನಾಗಿ ಮೂರು (3) ತಿಂಗಳ ಅವಧಿಗೆ ಅಥವಾ ಸದರಿ ಸಂಸ್ಥೆಗೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ದಿನಾಂಕ 3-2-2010ರ ಪತ್ರದಲ್ಲಿ ದಿನಾಂಕ 23-10-2009ರ ಸರ್ಕಾರಿ ಆದೇಶವನ್ನು ಉಲ್ಲೇಖಿಸುತ್ತಾ ಸದರಿ ಆದೇಶದನ್ವಯ ಆಡಳಿತಾಧಿಕಾರಿಗಳ ಪ್ರಭಾರವನ್ನು ವಹಿಸಿಕೊಂಡಿದ್ದು, ಈ ಬಗ್ಗೆ ಸಂಘದ ಲೆಕ್ಕಪುಸ್ತಕ ಮತು ಇತರೆ ಪ್ರಭಾರಗಳನ್ನು ಸಂಘದ ಅಧ್ಯಕ್ಷರು/ಕಾರ್ಯದರ್ಶಿಗಳು ಲಭ್ಯವಾಗದ ಕಾರಣ ಪಡೆಯಲಾಗಲಿಲ್ಲ, ಶ್ರೀ ಶಂಕರ ಸೇವಾ ಸಮಿತಿಯ ಅಂದಿನ ಆಡಳಿತ ಮಂಡಳಿಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಿನಾಂಕ 23-10-2009ರ ಸರ್ಕಾರಿ ಆದೇಶದ ವಿರುದ್ಧ ರಿಟ್ ಅರ್ಜಿ ಸಲ್ಲಿಸಿ ತಡೆಯಾಜ್ಞೆಯನ್ನು ತಂದಿದ್ದು ಈ ತಡೆಯಾಜ್ಞೆಯನ್ನು ತೆರವುಗೊಳಿಸುವ ಬಗ್ಗೆ ಈಗಾಗಲೇ ಸರ್ಕಾರಿ ವಕೀಲರನ್ನು ಕೋರಲಾಗಿದೆ ಎಂದು ತಿಳಿಸಿರುತ್ತಾರೆ. ಸರ್ಕಾರಿ ವಕೀಲರು ಈ ಬಗ್ಗೆ ನ್ಯಾಯಾಲಯಕ್ಕೆ

ಅಕ್ಷೇಪಣೆ ಸಲ್ಲಿಸಿದ್ದು ಪ್ರಕರಣವು ವಿಚಾರಣೆಯಲ್ಲಿರುವುದಾಗಿ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿ ಅವಧಿಯು ದಿನಾಂಕ 23-1-2010ಕ್ಕೆ ಮುಕ್ತಾಯವಾಗಿರುವುದರಿಂದ ಮುಂದಿನ ಕ್ರಮದ ಬಗ್ಗೆ ಸರ್ಕಾರದ ಮಾರ್ಗದರ್ಶನ ಕೋರಿರುತ್ತಾರೆ.

ಸರ್ಕಾರವು ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 116 ಸಸಂನೋ 2009, ಬೆಂಗಳೂರು, ದಿನಾಂಕ: 23ನೇ ಫೆಬ್ರವರಿ 2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಶಂಕರ ಸೇವಾ ಸಮಿತಿ (ರಿ) ರಾಜಾಜಿನಗರ, ಬೆಂಗಳೂರು ಈ ಸಂಸ್ಥೆಗೆ ನೇಮಿಸಲಾದ ಆಡಳಿತಾಧಿಕಾರಿ ಅವಧಿಯನ್ನು ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27(ಎ) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ 23-01-2010 ರಿಂದ ಮತ್ತೆ ಆರು (6) ತಿಂಗಳ ಅವಧಿಗೆ, ವಿಸ್ತರಿಸಿ ಆದೇಶಿಸಿದೆ. ಸದರಿ ಅವಧಿಯಲ್ಲಿ ಸದರಿ ಸಂಸ್ಥೆಗೆ ಚುನಾವಣೆ ನಡೆಸಿ ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಆಡಳಿತಾಧಿಕಾರಿಗಳು ಸದರಿ ಅವಧಿಯಲ್ಲಿ ಸಂಘದಲ್ಲಿ ಹಾಲಿ ನೋಂದಾಯಿತರಾಗಿರುವ ಸದಸ್ಯರುಗಳಿಂದ ಚುನಾವಣೆ ನಡೆಸಿ ಹೊಸ ಆಡಳಿತ ಮಂಡಳಿಗೆ ಅಧಿಕಾರ ಹಸ್ತಾಂತರಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ನಂಜುಂಡಪ್ಪ)

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 692 ಸಹಕಾರ ಇಲಾಖೆ

ಸಚಿವಾಲಯ ಗ್ರಂಥಾಲಯ

ವಿಷಯ : ಕರ್ನಾಟಕ ಸರ್ಕಾರದ ಸಚಿವಾಲಯದ ಗ್ರಂಥಾಲಯಕ್ಕೆ 2010-11ನೇ ಸಾಲಿಗೆ ನಿಯತಕಾಲಿಕೆ/ದಿನಪತ್ರಿಕೆಗಳನ್ನು ತರಿಸಿಕೊಳ್ಳುವ ಬಗ್ಗೆ.

ಓದಲಾಗಿದೆ : ಟೆಂಡರ್ ಪ್ರಕಟಣೆ ಸಂಖ್ಯೆ : ಸಿಆಸುಇ 01, ಸಗ್ರನಿ 2010, ದಿನಾಂಕ 11-1-2010

ಪ್ರಸ್ತಾವನೆ :

ಓದಲಾಗಿರುವ ಟೆಂಡರ್ ಪ್ರಕಟಣೆಯನ್ನು ದಿನಾಂಕ 17-1-2010ರ ವಿಜಯ ಕರ್ನಾಟಕ ಹಾಗೂ ದಿನಾಂಕ 18-1-2010ರ Deccan Herald ದಿನಪತ್ರಿಕೆಗಳಲ್ಲಿ ಪ್ರಕಟಿಸಿ, ಅನುಭವಸ್ಥ ಸರಬರಾಜುದಾರರಿಂದ ಸಚಿವಾಲಯ ಗ್ರಂಥಾಲಯಕ್ಕೆ 2010-2011ನೇ ಸಾಲಿಗೆ ನಿಯತಕಾಲಿಕೆ/ದಿನಪತ್ರಿಕೆಗಳನ್ನು ಸರಬರಾಜು ಮಾಡಲು ದರ ಪಟ್ಟಿಗಳನ್ನು ಆಹ್ವಾನಿಸಲಾಗಿತ್ತು. ಈ ಟೆಂಡರ್ ಪ್ರಕಟಣೆಗೆ ನಾಲ್ಕು ಗುತ್ತಿಗೆದಾರರಾದ 1) ಲೋಹಿತ್ ನ್ಯೂಸ್ ಏಜೆನ್ಸಿ, ಮುನೇಶ್ವರ ಬ್ಲಾಕ್, ಬೆಂಗಳೂರು, 2) ಲಿಖಿತಾ ಎಂಟರ್‌ಪ್ರೈಸಸ್, ಶಾಂತಿನಗರ, ಬೆಂಗಳೂರು, 3) ಶಶಾಂಕ ನ್ಯೂಸ್ ಏಜೆನ್ಸಿ, ಆವಲಹಳ್ಳಿ, ಬೆಂಗಳೂರು ಮತ್ತು 4) ಲತಾ ಎಂಟರ್ ಪ್ರೈಸಸ್, ಅಬ್ಬಾಯಪ್ಪ ಲೇಔಟ್, ಬೆಂಗಳೂರು. ಇವರುಗಳು ಸರ್ಕಾರಕ್ಕೆ ಟೆಂಡರನ್ನು ಸಲ್ಲಿಸಿರುತ್ತಾರೆ. ಇವರುಗಳ ಪೈಕಿ M/s Latha Enterprises, Malleshwara Nilaya, 4th Main Cross, N.S. Palya, Abbayappa Layout, Bangalore-76. ಇವರು ಸರ್ಕಾರಕ್ಕೆ ಅತಿ ಹೆಚ್ಚಿನ ರಿಯಾಯ್ತಿ ದರವನ್ನು (1.1%) ಮತ್ತು ರೂಪಾಯಿಗಳು ಐವತ್ತು ಸಾವಿರ ಮೊತ್ತದ ಹಣವನ್ನು ಬ್ಯಾಂಕ್ ಗ್ಯಾರಂಟಿ ರೂಪದಲ್ಲಿ ನೀಡಲು ಒಪ್ಪಿರುತ್ತಾರೆ. ಆದ್ದರಿಂದ ಇವರನ್ನು ಯಶಸ್ವಿ ಟೆಂಡರ್ದಾರರೆಂದು ಸರ್ಕಾರ ಪರಿಗಣಿಸಿದೆ ಮತ್ತು ದಿನಾಂಕ 1-4-2010 ರಿಂದ 31-3-2011ರ ಅವಧಿಗೆ ಸಚಿವಾಲಯ ಗ್ರಂಥಾಲಯಕ್ಕೆ ಈ ಆದೇಶಕ್ಕೆ ಲಗತ್ತಿಸಲಾದ ತಃಖ್ತೆಯಲ್ಲಿ ನಮೂದಿಸಲಾದ ನಿಯತಕಾಲಿಕೆ/ದಿನಪತ್ರಿಕೆಗಳನ್ನು ಸರಬರಾಜು ಮಾಡಲು ಅನುಮತಿಯನ್ನು ನೀಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 1 ಸಗ್ರನಿ 2010, ಬೆಂಗಳೂರು, ದಿನಾಂಕ: 4ನೇ ಮಾರ್ಚ್ 2010

ಸಚಿವಾಲಯ ಗ್ರಂಥಾಲಯಕ್ಕೆ ದಿನಾಂಕ 1-4-2010 ರಿಂದ 31-3-2011ರ ಅವಧಿಗೆ ನಿಯತಕಾಲಿಕೆ/ದಿನಪತ್ರಿಕೆಗಳ ಸರಬರಾಜುದಾರರದ M/s Latha Enterprises, Malleshwara Nilaya, 4th Main Cross, N.S. Palya, Abbayappa Layout, Bangalore-76. ಇವರಿಗೆ ಈ ಕೆಳಕಂಡ ಷರತ್ತುಗಳೊಂದಿಗೆ ಮುಂಗಡವಾಗಿ ಹಣಪಾವತಿ ಮಾಡಿ ಇದಕ್ಕೆ ಲಗತ್ತಿಸಿರುವ ತಃಖ್ತೆಯಲ್ಲಿ ನಮೂಸಿದಂತೆ ನಿಯತಕಾಲಿಕೆ/ದಿನಪತ್ರಿಕೆಗಳನ್ನು ತರಿಸಿಕೊಳ್ಳಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ನಿಯತಕಾಲಿಕೆ/ದಿನಪತ್ರಿಕೆಗಳ ಖರೀದಿಗಾಗಿ ತಗಲುವ ವೆಚ್ಚವನ್ನು ಸಚಿವಾಲಯದ ಲೆಕ್ಕ ಶೀರ್ಷಿಕೆ "2052-00-090-0-01-051 ಸಾಮಾನ್ಯ ವೆಚ್ಚಗಳು"ರ ಅಡಿಯಲ್ಲಿ ಭರಿಸತಕ್ಕದ್ದು.

ಷರತ್ತುಗಳು :

1. ಸರಬರಾಜುದಾರರು ಪ್ರತಿ ಮೂರು ತಿಂಗಳಿಗೊಮ್ಮೆ ಮುಂಗಡ ಹಣವನ್ನು ಕ್ಲೈಮ್ ಮಾಡುವುದು.

2. ಸರಬರಾಜುದಾರರು ನಿಯತಕಾಲಿಕೆ/ದಿನಪತ್ರಿಕೆಗಳ ಮುಖ ಬೆಲೆಯ ಶೇಕಡ 1.1% ರಿಯಾಯ್ತಿಯನ್ನು ಸರ್ಕಾರಕ್ಕೆ ಬಿಟ್ಟುಕೊಡುವುದು.
3. ಈ ಆದೇಶ ಹೊರಡಿಸಿದ ದಿನಾಂಕದಿಂದ ಒಂದು ತಿಂಗಳೊಳಗಾಗಿ ರೂ. 50,000/- (ರೂಪಾಯಿಗಳು ಐವತ್ತು ಸಾವಿರ ಮಾತ್ರ)ಗಳ ಮೊತ್ತದ ಬ್ಯಾಂಕ್ ಗ್ಯಾರಂಟಿಯನ್ನು ಸರ್ಕಾರಕ್ಕೆ ನೀಡುವುದು.
4. ನಿಯತಕಾಲಿಕೆಗಳನ್ನು ಮಾರುಕಟ್ಟೆಯಲ್ಲಿ ಬಿಡುಗಡೆಯಾದ ದಿನವೇ ಸರಬರಾಜು ಮಾಡತಕ್ಕದ್ದು. ಇಲ್ಲವಾದಲ್ಲಿ ಗ್ರಂಥಾಲಯದಿಂದಲೇ ಅವುಗಳನ್ನು ಮಾರುಕಟ್ಟೆಯಿಂದ ಖರೀದಿಸಲಾಗುವುದು ಹಾಗೂ ಅದಕ್ಕೆ ತಗಲುವ ವೆಚ್ಚವನ್ನು ಗುತ್ತಿಗೆದಾರರು ನೀಡಬೇಕಾಗಿರುತ್ತದೆ.
5. ನಿಯತಕಾಲಿಕೆ/ದಿನಪತ್ರಿಕೆಗಳನ್ನು ಸಕಾಲದಲ್ಲಿ ಸರಬರಾಜು ಮಾಡಲು ವಿಫಲವಾದಲ್ಲಿ ಒಂದು ನೋಟೀಸನ್ನು ನೀಡಿದ ನಂತರ ಗುತ್ತಿಗೆಯನ್ನು ರದ್ದು ಮಾಡಲಾಗುವುದು ಹಾಗೂ ನಷ್ಟವಾದ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿಯಿಂದ ವಸೂಲು ಮಾಡಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10-7-96ರಲ್ಲಿ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಅನಂತ್ ಎನ್ ಕಾಸ್ಕರ್)

ಮುಖ್ಯ ಗ್ರಂಥಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ (ಪ್ರಭಾರ)

ಪಿ.ಆರ್. 693 ಸಚಿವಾಲಯ ಗ್ರಂಥಾಲಯ

ಸಚಿವಾಲಯ ಗ್ರಂಥಾಲಯಕ್ಕೆ ದಿನಾಂಕ 1-4-2010 ರಿಂದ 31-3-2011ರವರೆಗೆ
ಸರಬರಾಜು ಮಾಡಬೇಕಾಗಿರುವ ನಿಯತಕಾಲಿಕೆಗಳ ವಿವರ :
ಸರ್ಕಾರಿ ಆದೇಶ ಸಂಖ್ಯೆ : ಸಿಆಸುಇ 1 ಸಗ್ರನಿ 2010, ದಿನಾಂಕ 4-3-2010

ತಃಖ್ತೆ

ಕ್ರ. ಸಂ.	ನಿಯತಕಾಲಿಕೆಗಳ ಹೆಸರು	ಪ್ರತಿಗಳ ಸಂಖ್ಯೆ
1	Alive	4
2	ಬಾಲಮಂಗಳ	4
3	ಬಾಲಮಿತ್ರ	4
4	ಭಾನುವಾರ	4
5	Business India	2
6	Business World	2
7	Intelligent Computing CHIP	2
8	Capital Market	2
9	ಚಂಪಕ	2
10	Champak (Eng)	4
11	ಚಂದಮಾಮ	4
12	Chandamama (Eng)	4
13	Cine Blitz	4
14	Civil Services Chronicle	4
15	Data Quest	2
16	Digit	4
17	Disney Adventures	4
18	ದಿಕ್ಸೂಚಿ	4
19	Employment News	4
20	Femina	4

21	Filmfare	4
22	Frontline	6
23	General Knowledge Today	4
24	ಗೃಹಶೋಭ	8
25	Health & Nutrition	4
26	ಹಾಯ್ ಬೆಂಗಳೂರು	6
27	India Today	6
28	Inside Outside	2
29	ಕರ್ಮವೀರ	8
30	ಕಸ್ತೂರಿ	6
31	ಲಂಕೇಶ್ ಪತ್ರಿಕೆ	8
32	ಲಂಕೇಶ್ ಪತ್ರಿಕೆ (ಗೌರಿ)	4
33	ಮಂಗಳ	4
34	ಮಲ್ಲಿಗೆ	4
35	ಮಯೂರ	8
36	Outlook	6
37	ಪ್ರಿಯಾಂಕ	2
38	Readers Digest	4
39	ರೂಪತಾರ	6
40	Savvy	4
41	Screen	4
42	Society	4
43	Sports Star	6
44	Star Dust	4
45	Star Teller	2
46	ಸುಧಾ	8
47	ಸ್ಪರ್ಧಾ ಚೈತ್ರ	4
48	ಸ್ಪರ್ಧಾ ಸ್ಫೂರ್ತಿ	4
49	ತರಂಗ	8
50	The Week	6
51	Tinkle	4
52	ತುಷಾರ	6
53	Wisdom	4
54	Woman's era	6
55	Ananda Vikatan (Timal)	1
56	Swaathi (Telugu)	1

ಸಚಿವಾಲಯ ಗ್ರಂಥಾಲಯಕ್ಕೆ ದಿನಾಂಕ 1–4–2010 ರಿಂದ 31–3–2011ರವರೆಗೆ ಸರಬರಾಜು ಮಾಡಬೇಕಾಗಿರುವ ದಿನಪತ್ರಿಕೆಗಳ ವಿವರ :

ಕ್ರ. ಸಂ.	ದಿನಪತ್ರಿಕೆ ಹೆಸರು	ಪ್ರತಿಗಳ ಸಂಖ್ಯೆ
1	ಉದಯವಾಣಿ	6
2	ಕನ್ನಡ ಪ್ರಭ	8
3	ಟೈಮ್ಸ್ ಆಫ್ ಇಂಡಿಯಾ	6
4	ಪ್ರಜಾವಾಣಿ	8
5	ವಿಜಯ ಕರ್ನಾಟಕ	8
6	ಸಂಜೆ ವಾಣಿ	6

7	ಸಂಯುಕ್ತ ಕರ್ನಾಟಕ	8
8	ಹೊಸ ದಿಗಂತ	4
9	Bangalore Mirror	4
10	Business Line	4
11	Business Standard	4
12	Deccan Chronicle	4
13	Deccan Herald	8
14	DNA	4
15	Economic Times	4
16	Financial Express	4
17	Mint	4
18	New Indian Express	6
19	Times of India	8
20	The Hindu	6

INFORMATION TECHNOLOGY, BIOTECHNOLOGY AND SCIENCE & TECHNOLOGY SECRETARIAT

Sub :- Setting up of Rural Business Process Outsourcing (BPO) units – Issue of Guidelines.

Read :- 1) G. O. No. ITD 39 MDA 2008, dated 19-1-2009
2) G.O. No. ITD 39 MDA 2008 (1), dated 4-2-2009
3) Corrigendum for the G. O. No. ITD 39 MDA 2008, dated 4-2-2009

Preamble:

In the Government Order read above, Government were pleased to announce the Rural BPO Scheme in Taluka/Hobli headquarters having a population of less than one lakh along with details of incentivisation of Rural BPO units.

In the Government Order read at (2) above, Government were pleased to issue the guidelines for implementation of Rural BPO Project and prescribed the application format for submission of proposals for establishment Rural BPO Centres from the entrepreneurs.

Now, the Government has felt that in order to implement the scheme effectively, it has been necessitated to issue revised guidelines in super-session of the earlier guidelines issued in Government Order dated 4-2-2009. Hence the Order.

Government Order No. ITD 39 MDA 2008 [1], Bangalore, dated : 11-03-2010

In super-session of the Government Order read at [2] above, Government are pleased to issue the revised guidelines for implementation of the rural BPO Projects as follows:-

1. Capital Investment Subsidy and financial support will be released in 3 stages as follows :

Guideline for Rural BPO Project :

a) Towards Infrastructure; 50% of Capital Investment Subsidy i.e. Rs. 10 lakhs after installation of the equipment / capital goods.
b) Towards Training: 50% on submission of proof of employment to 100 persons. 50% on completion of training.
c) Towards Internet connectivity/rentals/telephone connectivity; 50% on the activation of Internet/Telephone connectivity.
d) Balance amount of Capital Investment Subsidy shall be released after commencement of operation and inspection by the Chairman or officer authorized by Chairman of the Screening Committee and submission of proof of business carried out.

2. Evaluation matrix (marks):

Sl. No.	Criterion	Max Marks
1	SC/ST/Physically Handicapped	5
2	Local Entrepreneur	5
3	Located in the Backward/Most Backward Talukas mentioned in Dr. Nanjundappa Report on Regional Imbalances.	5
4	Technically Qualified (BE/Diploma/MBA/MBBS/BDS	5
5	Woman Entrepreneur	5
6	Financial Capability/Investment	5
7	Technical Evaluation	10
8	Proof of business commitment from Companies for the proposed Rural BPO	10
	Total ... 50 Marks	

3. KBITS will be the Nodal Agency for implementation of the Scheme
4. The Unit shall start its operations with minimum 100 employees within 3 months from the date of signing of agreement, failing which the order will be cancelled.
5. The following conditions shall be adhered to towards implementation of the project:-
    1. A new firm/company should be opened within one month by the entrepreneur after sanction of the Rural BPO unit to carryout the activities under the scheme. Units will not be permitted to implement the scheme under existing business nomenclature.
    2. Once the Screening Committee approves a Rural BPO unit, no change of place for setting up the unit would be considered. A unit can apply for one place only.
    3. Once the sanction is given by Government for a Rural BPO unit, agreement shall be signed within 15 days from the date of issue of sanction letter for the new firm/company.
    4. For the first batch of 100 employees, necessary training by the sanctioned unit shall be completed within four months from the date of signing of agreement.
    5. The first salary of the 100 employees shall be paid by the unit before the end of 5th month from the date of signing of agreement.
    6. As per the Government Order, State support would be only for two years or up to such extended period until the limit of sanction of financial support towards building/rentals, internet etc., is exhausted, not exceeding a total period of three years.
    7. Government shall extend financial support under the scheme only for a maximum period of three years from the date of agreement.
    8. Financial support of the State Government shall be subject to the condition that a minimum of 100 persons are employed by the unit for a continuous period of three years of operation from inception, on a monthly basis.
    9. There will be no financial support to a sanctioned unit beyond 100 employees. In other words, if the unit employs more than 100 persons, the financial support extended by Government shall be limited to only 100 employees.
    10. Each unit shall install biometric systems for recording the attendance of employees working in the unit, before commencement of operations without fail.
    11. Before releasing payment to a sanctioned unit, the Director IT and BT shall cause inspection by a team of minimum of two officers. A check list shall be provided to the team of officers for conducting inspection. Further random check of the BPO units should be done by the Director, IT and BT from time to time.

12. Director IT and BT shall nominate a senior officer of KBITS to scrutinize, sanction and release payment to the Rural BPO unit subject to condition that sanction and release papers shall be signed jointly by the senior officer [nominated by Director IT and BT] with the Accounts Officer of KBITS/DIT, after proper verification with regard to all financial documents.

By Order and in the name of the Governor of Karnataka

(**M. V. Krishnamurthy)**

Under Secretary to Government,

Department of Information Technology,

P.R. 694 Biotechnology and Science & Technology

ತೋಟಗಾರಿಕೆ ಸಚಿವಾಲಯ

ವಿಷಯ : 2007–08ನೇ ಸಾಲಿನಲ್ಲಿ **"ಅಂತರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ"** (ಲೆಕ್ಕ ಶೀರ್ಷಿಕೆ 2401–00–800–2–35) ಹೊಸ ಯೋಜನೆಗೆ ಮಂಜೂರಾತಿ ನೀಡುವ ಬಗ್ಗೆ.

ಓದಲಾಗಿದೆ : 1) ತೋಟಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ : ತೋಇ/ಯೋ/ಸತೋಅ–1/15/2007–08, ದಿನಾಂಕ 28–04–2007.

2) ಸರ್ಕಾರದ ಆದೇಶದ ಸಂಖ್ಯೆ : ಕೃತೋಇ 80 ತೋಯೋಕಾ 2007, ದಿನಾಂಕ 20–08–2007

ಪ್ರಸ್ತಾವನೆ :

ಮೇಲೆ ಓದಲಾದ (1)ರ ತೋಟಗಾರಿಕೆ ನಿರ್ದೇಶಕರ ಪ್ರಸ್ತಾವನೆಯಲ್ಲಿ 2007–08ನೇ ಸಾಲಿನ ಆಯವ್ಯಯದಲ್ಲಿ "ಅಂತರಾಷ್ಟ್ರೀಯ ಕೃಷಿ ವ್ಯಾಪಾರ ಮೇಳ" ಎಂಬ ಹೊಸ ಯೋಜನೆಯನ್ನು ಸರ್ಕಾರವು ಘೋಷಿಸಿ ಬೆಂಗಳೂರಿನ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಇರುವ ಪೂಜೇನಹಳ್ಳಿ ತೋಟಗಾರಿಕೆ ಕ್ಷೇತ್ರವನ್ನು ಶಾಶ್ವತ ವಾಣಿಜ್ಯ ತಾಣವನ್ನಾಗಿ ಅಭಿವೃದ್ಧಿ ಪಡಿಸಲು ರೂ. 500.00 ಲಕ್ಷಗಳ ಅನುದಾನವನ್ನು ಒದಗಿಸಿದ್ದು ಈ ಕಾರ್ಯಕ್ರಮವನ್ನು ಜಾರಿಗೊಳಿಸಿ ಸೂಕ್ತ ಆದೇಶವನ್ನು ಹೊರಡಿಸುವಂತೆ ನಿರ್ದೇಶಕರು ಪ್ರಸ್ತಾಪಿಸಿರುತ್ತಾರೆ. ಅದರಂತೆ ಓದಲಾದ (2)ರ ಆದೇಶದಲ್ಲಿ ಈ ಹೊಸ ಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ಇದರ ಕಾರ್ಯಚಟುವಟಿಕೆಗಳನ್ನು ಸುಸೂತ್ರವಾಗಿ ಜಾರಿಗೊಳಿಸಲು ಅನುವಾಗುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ಉನ್ನತ ಅಧಿಕಾರಯುತ ಸಮಿತಿಯನ್ನು ರಚಿಸಲಾಗಿತ್ತು.

ಪ್ರಸ್ತುತ ಈ ಯೊಜನೆಯ ದೈನಂದಿನ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸಲು ಸದರಿ ಉನ್ನತಾಧಿಕಾರಯುತ ಸಮಿತಿಯನ್ನು ಪುನರ್ ರಚಿಸಿ ಮಾನ್ಯ ತೋಟಗಾರಿಕೆ ಸಚಿವರನ್ನು ಅಧ್ಯಕ್ಷರನ್ನಾಗಿ ನೇಮಿಸಲು ತೀರ್ಮಾನಿಸಲಾಗಿದೆ. ಅದರಂತೆ ಈ ಕೆಳಕಂಡಂತೆ ಅದೇಶವನ್ನು ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ತೋಇ 06 ತೋಇವಿ 2010, ಬೆಂಗಳೂರು, ದಿನಾಂಕ: 5ನೇ ಮಾರ್ಚ್ 2010

ಪ್ರಸ್ತಾವನೆಯಲ್ಲಿ ತಿಳಿಸಿರುವ ವಿವರಣೆಗಳ ಹಿನ್ನಲೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ : ಕೃತೊಇ 80 ತೋಯೋಕಾ 2007 ದಿನಾಂಕ 20–08–2007ರಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ರಚಿಸಲಾಗಿದ್ದ ಅಂತರಾಷ್ಟ್ರೀಯ ಕೃಷಿ ವ್ಯಾಪಾರ ಕೇಂದ್ರದ ಉನ್ನತಾಧಿಕಾರಯುತ ಸಮಿತಿಯನ್ನು ಮಾರ್ಪಡಿಸಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಈ ಕೆಳಕಂಡಂತೆ ಪುನರ್ ರಚಿಸಿ ಆದೇಶಿಸಲಾಗಿದೆ.

1	ಮಾನ್ಯ ತೋಟಗಾರಿಕೆ ಸಚಿವರು	ಅಧ್ಯಕ್ಷರು
2	ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	ಉಪಾಧ್ಯಕ್ಷರು
3	ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿ, ತೋಟಗಾರಿಕೆ ಇಲಾಖೆ	ಸದಸ್ಯರು
4	ಪ್ರಧಾನ ಕಾರ್ಯದರ್ಶಿ, ಆಹಾರ ಸಂಸ್ಕರಣೆ ಮತ್ತು ಕೊಯ್ಲುನಂತರ ನಿರ್ವಹಣೆ	ಸದಸ್ಯರು
5	ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು
6	ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಸದಸ್ಯರು
7	ಪ್ರಧಾನ ಕಾರ್ಯದರ್ಶಿ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ	ಸದಸ್ಯರು

8	ಪ್ರಧಾನ ಕಾರ್ಯದರ್ಶಿ, ಪರಿಸರ ಮತ್ತು ಅರಣ್ಯ ಇಲಾಖೆ	ಸದಸ್ಯರು
9	ವಿಶೇಷಾಧಿಕಾರಿ/ಉಪಕುಲಪತಿಗಳು, ತೋಟಗಾರಿಕೆ ವಿಶ್ವವಿದ್ಯಾಲಯ	ಸದಸ್ಯರು
10	ಕಾರ್ಯದರ್ಶಿ, ಮಾಹಿತಿ ತಂತ್ರಜ್ಞಾನ ಮತ್ತು ಜೀವತಂತ್ರಜ್ಞಾನ ಇಲಾಖೆ	ಸದಸ್ಯರು
11	ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು	ಸದಸ್ಯರು
12/13	ಕೃಷಿ ಉತ್ಪಾದಕರ ಇಬ್ಬರು ಪ್ರತಿನಿಧಿಗಳು (ಕೃ.ಷಿ. ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ)	ಸದಸ್ಯರು
14/15	ಕೃಷಿ ಆಧಾರಿತ ಉದ್ಯಮದ ಇಬ್ಬರು ಪ್ರತಿನಿಧಿಗಳು (ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ ಮತ್ತು ರೇಷ್ಮೆ)	ಸದಸ್ಯರು
16	ತೋಟಗಾರಿಕೆ ನಿರ್ದೇಶಕರು	ಸದಸ್ಯ ಕಾರ್ಯದರ್ಶಿ

ಉಳಿದಂತೆ ಈ ಕುರಿತು ದಿನಾಂಕ 20–08–2007ರಲ್ಲಿ ಹೊರಡಿಸಿರುವ ಸರ್ಕಾರದ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

(ಎಸ್. ರಾಜು)

ಸರ್ಕಾರದ ಅಧೀನ ಕಾರ್ಯದರ್ಶಿ

ತೋಟಗಾರಿಕೆ ಇಲಾಖೆ

ಪಿ.ಆರ್. 695

HORTICULTURE SECRETARIAT

Sub :- Release of State share for National Horticulture Mission (NHM) programme.

Read :- 1) Government Order No. AHD 65 HPP 2009 dated 01-10-2009.

2) Government Order No. AHD 65 HPP 2009 dated 20-01-2010

3) Letter of Director of Horticulture No. KSHMA/ED/CWI/30/2009-10 dated 03-03-2010

Preamble:

1. An amount of Rs. 2500.00 lakhs has been earmarked in the budget during 2009-10 under the State Sector Scheme namely, “State share for National Horticulture Mission”, head of Account 2401-00-800-2-30-059 (plan) towards the State share required for the said Mission programme. Out of this, Rs. 1000.00 lakhs has been released vide Government Order read at (1) above.

2. An amount of Rs. 638.89 lakhs was released to the Director of Horticulture towards the State share vide Government Order read at (2) above.

3. However, the Director of Horticulture in his letter read at (3) above has informed that under the head of Account 2401-00-800-2-30-059 (plan) an amount of Rs. 499.00 lakhs only is available as per the endorsement issued by theTreasury on the bill preferred by him and hence has requested the Government to issue a revised release Order releasing Rs. 499.00 lakhs towards the State Share of National Horticulture Mission Programme.

4. The proposal of the Director of Horticulture has been examined and hence this Order.

Government Order No. HCD 42 HPP 2010, Bangalore, dated : 09-03-2010

1. Government is pleased to release to the Director of Horticulture an amount of Rs. 499.00 lakhs (Rupees Four Hundred and Ninety Nine Lakhs only) under the Head of Account 2401-00-800-2-30-059 (Plan) towards the State share for implementation of National Horticulture Mission Programme during 2009-10

2. Earlier Order No. AHD 65 HPP 2009 dated 20-01-2010 releasing Rs. 638.89 lakhs has been withdrawn and funds shall not be drawn from Treasury on the said Order under any circumstance.

This Order is issues with the concurrence of Internal Financial Advisor vide Note No.ಕೃತೋಇ (ಆಂಆಸ) ಸಂಖ್ಯೆ : 91, dated 05-03-2010.

By Order and in the name of the Governor of Karnataka

(**S. Raju**)

PR. No. 696

Under Secretary to Government,

Horticulture Department

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ನಿಂಬಾಳ ಕೆರೆ ಸಲುವಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ಪ್ರಕಾರ ವಿಶೇಷ ಭೂಸ್ವಾಧೀನಾಧಿಕಾರಿಗಳು. ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಗುಲ್ಬರ್ಗಾ ರವರ ದಿನಾಂಕ : 07–07–2009ರ ಐತೀರ್ಪಿನಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ದಿನಾಂಕ : 19–09–09 ರ ಪತ್ರದ ಸಂಖ್ಯೆ : ಮುಇಂ/ಸನೀ(ಉ) ವ/ ಬಿಜಾ/ಬಿಜೆಪಿ/2009–10/5537.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ದಿನಾಂಕ : 19–09–09ರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ನಿಂಬಾಳ ಕೆರೆ ಸಲುವಾಗಿ ಸ್ವಾಧೀನಪಡಿಸಿಕೊಳ್ಳಲಾದ ನಿಂಬಾಳ ಗ್ರಾಮದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ರನ್ವಯ ಗುಲ್ಬರ್ಗಾದ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿಶೇಷ ಭೂಸ್ವಾಧೀನಾಧಿಕಾರಿಗಳು ನೀಡಿರುವ ಐತೀರ್ಪಿನಂತೆ ಹೆಚ್ಚಿನ ಪರಿಹಾರ ಧನ ಪಾವತಿಸಲು ರೂ. 8,34,054–00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಸದರಿ ಕೆರೆಯ ಮೂಲ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 03–03–77.
- ಮೂಲ ಪರಿಹಾರ ಧನದ ಐತೀರ್ಪಿನ ದಿನಾಂಕ : 15–03–78
- ಭೂಸ್ವಾಧೀನ ಕಾಯ್ದೆ ಕಲಂ 28(ಎ) ರಡಿ ಗುಲ್ಬರ್ಗಾದ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿಶೇಷ ಭೂಸ್ವಾಧೀನಾಧಿಕಾರಿಗಳ ಐತೀರ್ಪಿನ ದಿನಾಂಕ : 07–07–09.

ಮೂಲ ಐತೀರ್ಪಿನಂತೆ ಪರಿಹಾರ ಧನ ಪಡೆದ ಭೂಮಾಲೀಕರಲ್ಲಿ ಕೆಲವರು ಭೂಸ್ವಾಧೀನ ಕಾಯ್ದೆ ಕಲಂ 18 (1) ರಡಿ ದಾಖಲಿಸಿದ ಎಲ್‌ಎಸಿ. ಪ್ರಕರಣದಲ್ಲಿ (ಎಲ್‌ಎಸಿ (9/06) ಗುಲ್ಬರ್ಗಾದ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯವು ಹೆಚ್ಚಿನ ಪರಿಹಾರ ಧನ ನೀಡಲು ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ಮೇಲೆ ಕಂದಾಯ ಇಲಾಖೆಯ ಪತ್ರ ಸಂಖ್ಯೆ : ಆರ್‌ಡಿ 766 ಎಲ್‌ಸಿಜಿ 2009, ದಿನಾಂಕ : 30–04–2009ರಲ್ಲಿ ಮೇಲ್ಮನವಿ ಸಲ್ಲಿಸದಿರಲು ತೀರ್ಮಾನಿಸಿದೆ.

ಎಲ್‌ಎಸಿ ಪ್ರಕರಣದ ತೀರ್ಪನ್ನು ಉಲ್ಲೇಖಿಸಿ ಮೂಲ ಭೂಸ್ವಾಧೀನ ಪ್ರಕ್ರಿಯೆಯ 4(1)ರ ಅಧಿಸೂಚನೆ ಹಾಗೂ ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಲ್ಲಿ ಸೇರಿದ್ದ ನಿಂಬಾಳ ಗ್ರಾಮದ ಸರ್ವೆ ನಂಬರ್‌ಗಳ ಭೂಮಾಲೀಕರು ಅವರ ಜಮೀನುಗಳಿಗೂ ಹೆಚ್ಚಿನ ಪರಿಹಾರ ಧನವನ್ನು ನೀಡುವಂತೆ ಅರ್ಜಿ ಸಲ್ಲಿಸಿದ್ದರ ಮೇರೆಗೆ ಈ ಬಗ್ಗೆ ವಿಚಾರಣೆ ನಡೆಸಿ ಭೂಸ್ವಾಧೀನ ಕಾಯ್ದೆ ಕಲಂ 28 (ಎ)ರಡಿ ಗುಲ್ಬರ್ಗಾದ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿಶೇಷ ಭೂಸ್ವಾಧೀನಾಧಿಕಾರಿಗಳು ಹೆಚ್ಚಿನ ಪರಿಹಾರ ಧನಕ್ಕೆ ದಿನಾಂಕ : 07–07–09 ರಂದು ಐತೀರ್ಪು ನೀಡಿರುತ್ತಾರೆ. ಭೂಸ್ವಾಧೀನಾಧಿಕಾರಿಗಳು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಜಮೀನುಗಳ ಹಾಗೂ ಪರಿಹಾರ ಧನದ ವಿವರ ಕೆಳಕಂಡಂತಿದೆ.

ಕ್ರ.ಸಂ.	ನಿಂಬಾಳ ಗ್ರಾಮದ ಸರ್ವೆನಂ.	ಕ್ಷೇತ್ರ	ಮೊತ್ತ (ರೂ.ಗಳಲ್ಲಿ)
1	55ಇ	1–10	80507
2	79	5–00	320519
3	55/7	0–30	48506
4	78	6–00	384522
	ಒಟ್ಟು		834054

ವಿಷಯವನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 143 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 20ನೇ ಫೆಬ್ರವರಿ 2010

ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ನಿಂಬಾಳ ಕೆರೆಯ ಸಲುವಾಗಿ ಸ್ವಾಧೀನಪಡಿಸಿಕೊಳ್ಳಲಾದ ನಿಂಬಾಳ ಗ್ರಾಮದ ಪ್ರಸ್ತಾವನೆಯಲ್ಲಿ ನಮೂದಿಸಿದ ಜಮೀನುಗಳಿಗೆ ಭೂಸ್ವಾಧೀನ ಕಾಯ್ದೆ ಕಲಂ 28(ಎ) ರನ್ವಯ ಗುಲ್ಬರ್ಗಾದ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳ ವಿಶೇಷ ಭೂಸ್ವಾಧೀನಾಧಿಕಾರಿಗಳು ನೀಡಿರುವ ಐತೀರ್ಪಿನಂತೆ ಹೆಚ್ಚಿನ ಪರಿಹಾರ ಧನ ಮೊತ್ತ ರೂ. 8,34,054–00(ಎಂಟು ಲಕ್ಷದ ಮೂವತ್ತ್ನಾಲ್ಕು ಸಾವಿರದ ಐವತ್ತ್ನಾಲ್ಕು ರೂ.ಗಳು ಮಾತ್ರ)ಗಳನ್ನು ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4702–00–900–1–00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು ಇತ್ತರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ : 16–05–2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.531

ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಸಾಲೇಬೀರನಳ್ಳಿ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 25–09–2009ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂ ಸ್ವಾಪ್ರ/ 2009-10–5710.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಸಾಲೇಬೀರನಳ್ಳಿ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ. 71,728–00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

– ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 19–05–1988.
– ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 14–11–1990.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಸೇಡಂನ ಸಿವಿಲ್ ನ್ಯಾಯಾಲಯದಲ್ಲಿ (ಹಿರಿಯ ಶ್ರೇಣಿ) ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್ಎಸಿ ಪ್ರಕರಣ ಸಂ.	ಸಾಲೇಬೀರನಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	426/02	13/2/ಸಿ	0–34	71,728–00

• ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸದಿರಲು ನಿರ್ಧಾರ ಕೈಗೊಂಡು ಪ್ರಕರಣಕ್ಕೆ ಮುಖ್ಯ ಅಭಿಯಂತರರ ಪ್ರಸ್ತಾವನೆಯಂತೆ ಹಣ ಪಾವತಿಸಲು ತೀರ್ಮಾನಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 150 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 20ನೇ ಫೆಬ್ರವರಿ 2010

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕು, ಸಾಲೇಬೀರನಳ್ಳಿ ಗ್ರಾಮದ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಾಲೇಬೀರನಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ನ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಹಾಕಿದ ಪರಿಹಾರ ಧನ ಮೊತ್ತ ರೂ. 71,728–00 ಗಳನ್ನು (ಎಪ್ಪತ್ತೊಂದು ಸಾವಿರದ ಏಳು ನೂರ ಇಪ್ಪತ್ತೆಂಟು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.532

ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೀದರ್ ಜಿಲ್ಲೆ ಮತ್ತು ತಾಲ್ಲೂಕಿನ ಜನವಾಡಾ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 14–07–2009ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂ ಸ್ವಾಪ್ರ/ 2009–10–4096.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರದಲ್ಲಿ ಬೀದರ್ ಜಿಲ್ಲೆ, ಮತ್ತು ತಾಲ್ಲೂಕು, ಜನವಾಡಾ ಸಣ್ಣ ನೀರಾವರಿ ಕೆರೆ ಕಾಲುವೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಮಮದಾಪುರ

ಗ್ರಾಮದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 22–07–1971.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 14–09–79.
- ಸ್ವಾಧೀನಕ್ಕೊಳಪಟ್ಟ ಜಮೀನಿನ ಕಬ್ಜೆ ಪಡೆದ ದಿನಾಂಕ : 15–09–73.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಬೀದರ್‌ನ ಹೆಚ್ಚುವರಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಪ್ರತಿ ಎಕರೆಗೆ ನಿಗದಿಪಡಿಸಿದ್ದ ರೂ.1000/– ಗಳಿಂದ ರೂ. 5700/– ಗಳಿಗೆ ಪರಿಹಾರ ಧನ ಹೆಚ್ಚಿಸಿ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತದೆ :

ಕ್ರ.ಸಂ.	ಎಲ್‌ಎಸಿ ಸಂ.	ಮಮದಾಪುರ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	26/03	24,25	17–21	5,93,176–00
		ಒಟ್ಟು		5,93,176–00

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸುವ ಅಗತ್ಯವಿಲ್ಲವೆಂದು ನಿರ್ಣಯಿಸಿ ಈ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 115 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 22ನೇ ಫೆಬ್ರವರಿ 2010

ಬೀದರ್ ಜಿಲ್ಲೆ, ಮತ್ತು ತಾಲ್ಲೂಕಿನ ಜನವಾಡ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಮಮದಾಪುರ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣದಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕ ಹಾಕಿದ ಪರಿಹಾರ ಧನ ಮೊತ್ತ ರೂ. 5,93,176–00 ಗಳನ್ನು (ಐದು ಲಕ್ಷದ ತೊಂಭತ್ತ್ಮೂರು ಸಾವಿರದ ಒಂದುನೂರ ಎಪ್ಪತ್ತಾರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸುಧಾಕರ ಶೆಟ್ಟಿ

ಪಿ.ಆರ್.533

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲೂಕಿನ ವಜ್ಜಲ ಗ್ರಾಮವನ್ನು ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಭೂಸ್ವಾಧೀನಾಧಿಕಾರಿಗಳಲ್ಲಿ ಮುಂಗಡ ಹಣ ಠೇವಣಿ ಮಾಡುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ದಿನಾಂಕ : 20–01–2010ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವವಿ/ಭೂ ಸ್ವಾಪ್ರ/ 2009-10–394.

ಪ್ರಸ್ತಾವನೆ :

ಮೇಲೆ ಓದಲಾದ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರು ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲೂಕಿನ ವಜ್ಜಲ ಗ್ರಾಮವನ್ನು ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು 35,56,630–00 ರೂ.ಗಳನ್ನು ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಕಂದಾಯ ಇಲಾಖೆಯ ಸುತ್ತೋಲೆ ಸಂಖ್ಯೆ : ಕಂಇ 42 ಭೂಸ್ವಾಹಾ 2000, ದಿನಾಂಕ : 08–10–2001 ರಲ್ಲಿ ಸೂಚಿಸಿರುವಂತೆ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಸಂಭವನೀಯ ವೆಚ್ಚದ ಶೇ. 50 ರಷ್ಟನ್ನು ಮುಂಗಡ ಹಣವಾಗಿ ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಬೇಕಾಗಿರುತ್ತದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 43 ವಿಸವಿ 2004, ಬೆಂಗಳೂರು, ದಿನಾಂಕ : 20ನೇ ಫೆಬ್ರವರಿ 2010

ಪ್ರಸ್ತಾವನೆಯನ್ನು ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲೂಕಿನ ವಜ್ಜಲ ಗ್ರಾಮವನ್ನು ಸ್ಥಳಾಂತರಿಸಿ ಪುನರ್ವಸತಿ ಕೇಂದ್ರ ನಿರ್ಮಾಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ರೂ. 35,56,630–00ಗಳನ್ನು (ಮೂವತ್ತೈದು ಲಕ್ಷದ ಐವತ್ತಾರು ಸಾವಿರದ ಆರನೂರ ಮೂವತ್ತು ರೂ.ಗಳು ಮಾತ್ರ) ಗಳನ್ನು ಉಪವಿಭಾಗಾಧಿಕಾರಿಗಳು, ಬಾಗಲಕೋಟ ಉಪವಿಭಾಗ, ಬಾಗಲಕೋಟೆ ಇವರಲ್ಲಿ ಮುಂಗಡವಾಗಿ ಠೇವಣಿ ಮಾಡಲು ಸರ್ಕಾರವು ಅನುಮೋದನೆ ನೀಡಿದೆ.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ : ಲೋಇ 61 ಆಕೋ 2–2010 ದಿನಾಂಕ : 02–02–2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಸುಧಾಕರ ಶೆಟ್ಟಿ

ಪಿ.ಆರ್.534

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕು ಸರಸಂಬಾ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 3–09–2009ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2009–10/5220.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ಸರಸಂಬಾ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸರಸಂಬಾ ಗ್ರಾಮದ ಜಮೀನುಗಳಿಗೆ ಗುಲ್ಬರ್ಗಾದ ಹೆಚ್ಚುವರಿ ಸಿವಿಲ್ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ

ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿವೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 22–05–1997
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 02–01–1999.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗಾದ ಹೆಚ್ಚುವರಿ ಸಿವಿಲ್ ನ್ಯಾಯಾಲಯದ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಎಲ್.ಎ.ಸಿ. ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಮಾನ್ಯ ನ್ಯಾಯಾಲಯವು ಪ್ರತಿ ಎಕರೆಗೆ ರೂ. 35,400/– ಗಳ ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸದರಿ ತೀರ್ಪಿನ ವಿರುದ್ಧ ಭೂಸ್ವಾಧೀನಾಧಿಕಾರಿಗಳು ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ (ಎಲ್.ಎ.ಸಿ.ಎ.)ಗಳನ್ನು ದಾಖಲಿಸಿದ್ದು, ನ್ಯಾಯಾಲಯವು ಸಾಮಾನ್ಯ ತೀರ್ಪಿನಲ್ಲಿ ಪ್ರತಿ ಎಕರೆಗೆ ರೂ. 49,120/–ಗಳಿಗೆ ಪರಿಹಾರ ಧನವನ್ನು ಹೆಚ್ಚಿಸಿ ಭೂಮಾಲೀಕರಿಗೆ ಪಾವತಿಸುವಂತೆ ಆದೇಶ ನೀಡಿದೆ.

ಜಿಲ್ಲಾ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಲಾ 246 ಎಲ್‌ಸಿಜಿ 2009, ದಿನಾಂಕ : 12–01–2009ರಲ್ಲಿ ಅಭಿಪ್ರಾಯ ನೀಡಿದೆ. ಪ್ರಕರಣಗಳ ವಿವರ ಕೆಳಕಂಡಂತಿದೆ :

ಕ್ರ. ಸಂ.	ಎಲ್‌ಎಸಿ ಸಂಖ್ಯೆ	ಎಲ್‌ಎಸಿಎ ಪ್ರಕರಣ ಸಂ.	ಸರಸಂಬಾ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	581/01	319/03	155/1,8	0–12	39188
2	582/01	320/03	155/3	0–03	9947
3	583/01	321/03	164/2	4–34	500546
4	584/01	322/03	156/2	0–08	26192
5	585/01	323/03	156/4,1	0–06	19694
6	586/01	324/03	155/2,10	1–16	182144
7	587/01	325/03	165/2	0–36	117164
8	588/01	326/03	165/1	0–06	19694
				ಒಟ್ಟು	914569

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 142 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 20ನೇ ಫೆಬ್ರವರಿ 2010

ಗುಲ್ಬರ್ಗಾ ಜಿಲ್ಲೆ, ಆಳಂದ ತಾಲ್ಲೂಕಿನ ಸರಸಂಬಾ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಸರಸಂಬಾ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಜಿಲ್ಲಾ ನ್ಯಾಯಾಲಯವು ಎಲ್.ಎ.ಸಿ.ಎ ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕ ಹಾಕಿದ ಬಾಕಿ ಪರಿಹಾರ ಧನ ಮೊತ್ತ ರೂ. 9,14,569–00ಗಳನ್ನು (ಒಂಭತ್ತು ಲಕ್ಷದ ಹದಿನಾಲ್ಕು ಸಾವಿರದ ಐನೂರ ಅರವತ್ತೊಂಭತ್ತು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ 4702–00–800–1–00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂ: ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ : 16–05–2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.535

ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾಂ ಜಿಲ್ಲೆ, ರಾಮದುರ್ಗ ತಾಲ್ಲೂಕು ಗೊಡಚಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ದಿನಾಂಕ : 10–07–09ರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ ಬಿಜಾ/ಭೂಸ್ವಾಪ್ರ/2009–10/4066.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರದಲ್ಲಿ ಬೆಳಗಾಂ ಜಿಲ್ಲೆ, ರಾಮದುರ್ಗ ತಾಲ್ಲೂಕು ಗೊಡಚಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಗೊಡಚಿ ಗ್ರಾಮದ ಜಮೀನುಗಳಿಗೆ ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರ ಧನ ಪಾವತಿಸಲು ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ.

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 05–07–2001
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 24–09–03

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧಿನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಅಥಣಿ ಸಿವಿಲ್ (ಹಿರಿಯ ಶ್ರೇಣಿ) ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯು ಪತ್ರ ಸಂಖ್ಯೆ : ಆರ್‌ಡಿ 658 ಎಲ್‌ಸಿಬಿ 2009, ದಿನಾಂಕ : 23–05–2009ರಲ್ಲಿ ಅಭಿಪ್ರಾಯ ನೀಡಿದೆ. ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿರುವ ಪ್ರಕರಣಗಳ ವಿವರ ಕೆಳಕಂಡಂತಿದೆ :

ಕ್ರ.ಸಂ.	ಎಲ್‌ಎಸಿ ಸಂಖ್ಯೆ	ಗೊಡಚಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	33/07	163/1	3–36	2720925
		164	1–04	
2	34/07	165	1–04	598993
			ಒಟ್ಟು	3319918

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಅದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 113 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 23ನೇ ಫೆಬ್ರವರಿ 2010

ಬೆಳಗಾಂ ಜಿಲ್ಲೆ, ರಾಮದುರ್ಗ ತಾಲ್ಲೂಕು ಗೊಡಚಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಗೊಡಚಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ಎಲ್.ಎ.ಸಿ. ಪ್ರಕರಣಗಳಲ್ಲಿ ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 33,19,918-00 ಗಳನ್ನು (ಮುವತ್ಮೂರು ಲಕ್ಷದ ಹತ್ತೊಂಭತ್ತು ಸಾವಿರದ ಒಂಭೈನೂರ ಹದಿನೆಂಟು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009-10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702-00-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು ಇತ್ಯರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಅದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008 ದಿನಾಂಕ : 16-05-2008 ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.571

ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕೂಕನಪಳ್ಳಿ ಗ್ರಾಮದ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ಸಿವಿಲ್ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರ ದಿನಾಂಕ : 03-09-2009ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂ ಸ್ವಾಪ್ರ/ 2009-10/5219.

ಪ್ರಸ್ತಾವನೆ :

ಮೇಲೆ ಓದಲಾದ ಬಿಜಾಪುರ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರದಲ್ಲಿ ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕೂಕನಪಳ್ಳಿ ಗ್ರಾಮದ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯವು ನೀಡಿದ ತೀರ್ಪಿನ ಅನುಸಾರ ಹೆಚ್ಚಿನ ಪರಿಹಾರಧನ ಪಾವತಿಸಲು ರೂ. 9,59,106-00ಗಳ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

- ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 09-06-2005.
- ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 05-06-2007.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳ ಸಿವಿಲ್ ನ್ಯಾಯಾಲಯದಲ್ಲಿ

(ಹಿರಿಯ ಶ್ರೇಣಿ) ಭೂಸ್ವಾಧೀನ ಪ್ರಕರಣ ದಾಖಲಿಸಿದ್ದು, ಈ ಪ್ರಕರಣದಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಪ್ರಕರಣದ ವಿವರ ಕೆಳಕಂಡಂತಿದೆ.

ಕ್ರ.ಸಂ.	ಎಲ್‌ಎಸಿ ಪ್ರಕರಣ ಸಂ.	ಕೂಕನಪಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	2/08	92/03	0–05	39,726–00
2	3/08	62/2 62/2ಎ	1–14	424137–00
3	4/08	60/ಬಿ	0–26	204472–00
4	5/08	64/1ಎ	0–37	290771–00
ಒಟ್ಟು				959106–00

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಸಿವಿಲ್ ನ್ಯಾಯಾಲಯದ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸದಿರಲು ಕಂದಾಯ ಇಲಾಖೆಯ ಕಾನೂನು ಕೋಶವು ಪತ್ರ ಸಂಖ್ಯೆ : ಆರ್‌ಡಿ 408 ಎಲ್‌ಎಸ್‌ಜಿ 2009 ದಿನಾಂಕ : 18–05–2009ರಲ್ಲಿ ಅಭಿಪ್ರಾಯ ನೀಡಿದೆ. ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 153 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 23ನೇ ಫೆಬ್ರವರಿ 2010

ಕೊಪ್ಪಳ ಜಿಲ್ಲೆ, ಕೊಪ್ಪಳ ತಾಲ್ಲೂಕು, ಕೂಕನಪಳ್ಳಿ ಗ್ರಾಮದ ಜಿನುಗು ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಸಾಲೇಬೀರನಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 9,59,106–00 ಗಳನ್ನು (ಒಂಬತ್ತು ಲಕ್ಷದ ಐವತ್ತೊಂಬತ್ತು ಸಾವಿರದ ಒಂದು ನೂರ ಆರು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ತರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಅದೇಶವನ್ನು ಅರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.572

ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗ ಜಿಲ್ಲೆ, ಅಫಜಲಪುರ ತಾಲ್ಲೂಕು ಬಿದನೂರು ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ/ಇವರ ದಿನಾಂಕ : 13–10–2009ರ ಪತ್ರ ಸಂಖ್ಯೆ : ಮುಇಂ/ಸನೀಉವ/ಬಿಜಾ/ಭೂಸ್ವಾಪ್ರ/2009–10/6020.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಗುಲ್ಬರ್ಗ ಜಿಲ್ಲೆ, ಅಫಜಲಪುರ ತಾಲ್ಲೂಕು, ಬಿದನೂರು ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

– ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 31–03–1977.
– ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 31–07–1980.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧಿನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಗುಲ್ಬರ್ಗ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಪರಿಹಾರ ಪಾವತಿ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಎಲ್‌ಎಸಿ ಪ್ರಕರಣ ಸಂ.	ಗೊಬ್ಬೂರ (ಕೆ) ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	572/96	329/4	4–11	62993–00
2	573/96	325/3,320,327/1	6–08	91224–00
		ಒಟ್ಟು		154217–00

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 158 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 25ನೇ ಫೆಬ್ರವರಿ 2010

ಗುಲ್ಬರ್ಗ ಜಿಲ್ಲೆ, ಅಫಜಲಪುರ ತಾಲ್ಲೂಕು, ಬಿದನೂರು ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಗೊಬ್ಬೂರ (ಕೆ) ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 1,54,217–00 (ಒಂದು ಲಕ್ಷದ ಐವತ್ತನಾಲ್ಕು ಸಾವಿರದ ಎರಡು ನೂರ ಹದಿನೇಳು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ತರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಅದೇಶವನ್ನು ಅರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್.573

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗ ಜಿಲ್ಲೆ, ಯಾದಗೀರ್ ತಾಲ್ಲೂಕು ದುಪ್ಪಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ/ಇವರ ದಿನಾಂಕ : 17–01–2009ರ ಪತ್ರ ಸಂಖ್ಯೆ : ಮುಇಂ/ಸನೀ(ಉ)ವ/ಬಿಜಾ/ಭೂಸ್ವಾಪ್ರ/2008–09/329

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಗುಲ್ಬರ್ಗ ಜಿಲ್ಲೆ, ಯಾದಗೀರ್ ತಾಲ್ಲೂಕು, ದುಪ್ಪಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ದುಪ್ಪಳ್ಳಿ ಗ್ರಾಮದ ಜಮೀನಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

– ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 15–09–1994.
– ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 27–06–1997.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧೀಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಯಾದಗೀರ್ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣವನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ.

ಪರಿಹಾರ ಪಾವತಿ ಪ್ರಕರಣದ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಎಲ್‌ಎಸಿ ಪ್ರಕರಣ ಸಂ.	ದುಪ್ಪಳ್ಳಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಮೊತ್ತ ರೂ.ಗಳಲ್ಲಿ
1	19/99	288	0–10	16,625–00

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 24 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 25ನೇ ಫೆಬ್ರವರಿ 2010

ಗುಲ್ಬರ್ಗ ಜಿಲ್ಲೆ, ಯಾದಗೀರ್ ತಾಲ್ಲೂಕು, ದುಪ್ಪಳ್ಳಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ದುಪ್ಪಳ್ಳಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್ ಜಮೀನಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 16625–00 (ಹದಿನಾರು ಸಾವಿರದ ಆರು ನೂರ ಇಪ್ಪತ್ತೈದು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ತರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಅದೇಶವನ್ನು ಅರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಪಿ.ಆರ್.574

ಜಲಸಂಪನ್ಮೂಲ ಸಚಿವಾಲಯ

ವಿಷಯ : ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ, ಇವರ ದಿನಾಂಕ : 30–05–2009ರ ಪತ್ರ ಸಂಖ್ಯೆ : ಮುಇಂ/ಸನೀ/ಉವ/ಬಿಜಾ/ಭೂಸ್ವಾಪ್ರ/2009–10/3129.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರದಲ್ಲಿ ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾದ ಬೆಂಚಮಟ್ಟಿ ಗ್ರಾಮದ ಜಮೀನುಗಳಿಗೆ ನ್ಯಾಯಾಲಯದ ಆದೇಶದಂತೆ ಹೆಚ್ಚಿನ ಪರಿಹಾರಧನ ಪಾವತಿಸುವ ಕುರಿತು ಅನುದಾನ ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದ ಜಮೀನುಗಳ ಭೂಸ್ವಾಧೀನದ ಪ್ರಕ್ರಿಯೆಯ ವಿವರಗಳು ಈ ಕೆಳಕಂಡಂತಿದೆ :

– ಕರ್ನಾಟಕ ಭೂಸ್ವಾಧೀನ ಕಾಯ್ದೆಯ ಕಲಂ 4(1)ರಡಿ ಅಧಿಸೂಚನೆ ಹೊರಡಿಸಿದ ದಿನಾಂಕ : 03–10–1996.
– ಕರ್ನಾಟಕ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ಭೂಸ್ವಾಧೀನಾಧಿಕಾರಿಗಳು ಪರಿಹಾರ ಧನದ ಐತೀರ್ಪು ಘೋಷಿಸಿದ ದಿನಾಂಕ : 31–10–1998.

– ಸದರಿ ಭೂಮಿಯನ್ನು ಕಬ್ಜೆಗೆ ತೆಗೆದುಕೊಂಡ ದಿನಾಂಕ : 06–11–1996.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಭೂಮಾಲೀಕರು ಭೂಸ್ವಾಧೀನಾಧಿಕಾರಿಗಳ ಪರಿಹಾರ ಧನದ ಐತೀರ್ಪಿನಂತೆ ಹಣ ಪಡೆದು, ಹೆಚ್ಚಿನ ಪರಿಹಾರ ಧನಕ್ಕಾಗಿ ಭೂಸ್ವಾಧೀನ ಕಾಯ್ದೆ ಕಲಂ 18(1)ರಡಿ ಕೊಪ್ಪಳ ಸಿವಿಲ್ ನ್ಯಾಯಾಲಯದಲ್ಲಿ ಭೂಸ್ವಾಧೀನ ಪ್ರಕರಣಗಳನ್ನು ದಾಖಲಿಸಿದ್ದು, ಈ ಪ್ರಕರಣಗಳಲ್ಲಿ ಸಿವಿಲ್ ನ್ಯಾಯಾಲಯವು ಹೆಚ್ಚಿನ ಪರಿಹಾರ ಧನಕ್ಕೆ ತೀರ್ಪು ನೀಡಿದೆ. ಸಿವಿಲ್ ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆಯು ದಿನಾಂಕ : 04–08–2006 ರಂದು ಪತ್ರ ಸಂಖ್ಯೆ : ಲಾ 1068 ಎಲ್.ಎಸ್.ಪಿ 2006ರಲ್ಲಿ ಅಭಿಪ್ರಾಯ ನೀಡಿರುತ್ತದೆ.

ಪರಿಹಾರ ಪಾವತಿ ಪ್ರಕರಣಗಳ ವಿವರಗಳು ಈ ಕೆಳಕಂಡಂತಿವೆ.

ಕ್ರ.ಸಂ.	ಎಲ್‌ಎಸಿ ಪ್ರಕರಣ ಸಂ.	ಬೆಂಚಮಟ್ಟಿ ಗ್ರಾಮದ ಸ.ನಂ.	ವಿಸ್ತೀರ್ಣ ಎ–ಗುಂ.	ಪರಿಹಾರ ಧನ (ರೂ.ಗಳಲ್ಲಿ)
1	407/00	11/5ಅ	0–18	7,26,134–00
2		11/6	2–14	

- ಪರಿಹಾರ ಧನದ ಮೊತ್ತದಲ್ಲಿ ನ್ಯಾಯಾಲಯದ ವೆಚ್ಚ ಸಹ ಸೇರಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 87 ಭೂಸ್ವಾಪ್ರ 2009, ಬೆಂಗಳೂರು, ದಿನಾಂಕ : 26ನೇ ಫೆಬ್ರವರಿ 2010

ಕೊಪ್ಪಳ ಜಿಲ್ಲೆ, ಕುಷ್ಟಗಿ ತಾಲ್ಲೂಕು ನಿಡಶೇಷಿ ಸಣ್ಣ ನೀರಾವರಿ ಕೆರೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡ ಬೆಂಚಮಟ್ಟಿ ಗ್ರಾಮಕ್ಕೆ ಸೇರಿದ ಮೇಲ್ಕಂಡ ಸರ್ವೆ ನಂಬರ್‌ಗಳ ಜಮೀನುಗಳಿಗೆ ಸಿವಿಲ್ ನ್ಯಾಯಾಲಯವು ನೀಡಿರುವ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯಲ್ಲಿಯ ಸೂಚನೆಗಳಂತೆ ಲೆಕ್ಕಾಹಾಕಿದ ಪರಿಹಾರ ಧನ ಮೊತ್ತ ರೂ. 7,26,134–00 (ಏಳು ಲಕ್ಷದ ಇಪ್ಪತ್ತಾರು ಸಾವಿರದ ನೂರ ಮೂವತ್ತಾನಾಲ್ಕು ರೂ.ಗಳು ಮಾತ್ರ) ಪಾವತಿಸಲು ಸರ್ಕಾರವು ಅನುಮೋದನೆ ನೀಡಿದೆ. ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ 4702–00–800–1–00–ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು–ಇತ್ತರ್ಥ 132 ಬಂಡವಾಳ ವೆಚ್ಚಗಳು ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ಅದೇಶವನ್ನು ಅರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16–05–2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.575

ಕೆ.ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ).

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ: ಇಲಾಖಾ ವಿಚಾರಣೆಗಳಲ್ಲಿ ವಿಳಂಬವನ್ನು ತಪ್ಪಿಸಲು ಮಾರ್ಗೋಪಾಯಗಳನ್ನು ಸೂಚಿಸುವ ಬಗ್ಗೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 6 ಸೇಇವಿ 2010 ಬೆಂಗಳೂರು, ದಿನಾಂಕ 8–2–2010.

ಪ್ರಸ್ತಾವನೆ:

ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರನ್ವಯ ಸರ್ಕಾರಿ ನೌಕರರ ವಿರುದ್ಧ ಹೂಡಲಾದ ಇಲಾಖಾ ವಿಚಾರಣೆಗಳು ಪೂರ್ಣಗೊಳ್ಳಲು ಹೆಚ್ಚು ಸಮಯ ಆಗುತ್ತಿದೆ. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಹೊರಡಿಸಿದ ಮಾರ್ಗಸೂಚಿಗಳ ಪ್ರಕಾರ ಇಲಾಖಾ ವಿಚಾರಣೆಗಳು 9 ತಿಂಗಳ ಅವಧಿಯಲ್ಲಿ ಪೂರ್ಣಗೊಳ್ಳಬೇಕು. ಆದರೆ, ಕಾರಣಾಂತರಗಳಿಂದ ಅನೇಕ ವರ್ಷಗಳಾದರೂ ಕೆಲವು ಇಲಾಖಾ ವಿಚಾರಣೆಗಳು ಮುಕ್ತಾಯವಾಗುವುದಿಲ್ಲ. ಈ ವಿಳಂಬವನ್ನು ನಿವಾರಿಸಲು ಮಾರ್ಗೋಪಾಯಗಳನ್ನು ಸೂಚಿಸಲು ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಬೇಕೆಂದು ತೀರ್ಮಾನಿಸಲಾಗಿದೆ. ಈ ವಿಚಾರದಲ್ಲಿ ಅನುಭವ ಮತ್ತು ಮಾಹಿತಿ ಇರುವ ಅಧಿಕಾರಿಗಳನ್ನು ಈ ಸಮಿತಿಯ ಸದಸ್ಯರನ್ನಾಗಿ ನೇಮಿಸಲು ತೀರ್ಮಾನಿಸಲಾಗಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ.

1.	ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ	–	ಅಧ್ಯಕ್ಷರು
2.	ನಿಬಂಧಕರು, ಕರ್ನಾಟಕ ಲೋಕಾಯುಕ್ತ ಅಥವಾ ಅವರಿಂದ ನಾಮನಿರ್ದೇಶಿತ ಅಧಿಕಾರಿ	–	ಸದಸ್ಯರು
3.	ಶ್ರೀ ಕೆ. ಹಿರಿಯಣ್ಣ, ನಿವೃತ್ತ ಸರ್ಕಾರದ ಸಹ ಕಾರ್ಯದರ್ಶಿ ಮತ್ತು ವಕೀಲರು	–	ಸದಸ್ಯರು
4.	ಶ್ರೀ ಎನ್. ಸುಬ್ಬರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು	–	ಸದಸ್ಯರು
5.	ಶ್ರೀ ರಿಚರ್ಡ್ ಲೋಬೋ, ಜಂಟಿ ಕಾರ್ಯದರ್ಶಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ	–	ಸದಸ್ಯರು
6.	ಅಪರ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು)	–	ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 940

ಪಿ. ಮಾರ್ಕಂಡೇಯ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಸೇವಾ ನಿಯಮಗಳು–2).

ಕಾರ್ಮಿಕ ಸಚಿವಾಲಯ

ವಿಷಯ : ಕನಿಷ್ಠ ವೇತನ ಕಾಯ್ದೆ 1948ರ ಕಲಂ 5(1)(ಎ) ಅಡಿ ತಜ್ಞರ ಸಮಿತಿ ರಚಿಸುವ ಬಗ್ಗೆ :-

ಓದಲಾಗಿದೆ : ಸನ್ಮಾನ್ಯ ಮುಖ್ಯಮಂತ್ರಿಗಳು ಸಿ.ಐ.ಟಿ.ಯು ಪದಾಧಿಕಾರಿಗಳೊಂದಿಗೆ ನಡೆಸಿದ ದಿನಾಂಕ 03-12-2009ರ ಸಭೆಯ ನಡವಳಿ.

ಪ್ರಸ್ತಾವನೆ :

ಮೇಲೆ ಉಲ್ಲೇಖಿತ ಸಭೆಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕನಿಷ್ಠ ವೇತನ ಕಾಯ್ದೆ 1948ರ ಕಲಂ 5 (1)(ಎ)ರ ಅಡಿ ತಜ್ಞರ ಸಮಿತಿಯನ್ನು ರಚಿಸುವುದಾಗಿ ತಿಳಿಸಿರುತ್ತಾರೆ. ಆ ಪ್ರಕಾರ ಕನಿಷ್ಠ ವೇತನ ಕಾಯ್ದೆ 1948ರ ಕಲಂ 5(1)(ಬಿ)ರ ಅಡಿಯಲ್ಲಿ ಎಲ್ಲಾ ಉದ್ಯೋಗಗಳಿಗೆ ಸಂಬಂಧಿಸಿದಂತೆ ನಿಗದಿಪಡಿಸಿರುವ ಕನಿಷ್ಠ ವೇತನವನ್ನು ಮುಂದುವರೆಸುವ ಅಥವಾ ಪರಿಷ್ಕರಿಸುವ ಬಗ್ಗೆ ಹಾಗೂ ದೆಹಲಿ ಮಾದರಿಯಂತೆ ಎಲ್ಲಾ ಉದ್ಯೋಗಗಳಿಗೆ ಏಕೈಕ ಅಧಿಸೂಚನೆಯ ಪ್ರಕಾರ ಕನಿಷ್ಠ ವೇತನವನ್ನು ನಿಗದಿಪಡಿಸುವುದೇ ಎನ್ನುವ ಬಗ್ಗೆ ಚರ್ಚಿಸಿ ಸರ್ಕಾರಕ್ಕೆ ಸಲಹೆ ನೀಡಲು ಸರ್ಕಾರವು ತಜ್ಞರ ಸಮಿತಿಯನ್ನು ರಚಿಸಲು ಉದ್ದೇಶಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಈ ಕೆಳಗಿನಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಾಇ 160 ಎಲ್‌ಡಬ್ಲ್ಯೂ ಎ 2009, ಬೆಂಗಳೂರು, ದಿನಾಂಕ 19ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ ಕನಿಷ್ಠ ವೇತನ ಕಾಯ್ದೆ 1948ರ ಸೆಕ್ಷನ್ 5(1)(ಎ)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡ ಸದಸ್ಯರುಗಳನ್ನೊಳಗೊಂಡಂತೆ 'ತಜ್ಞರ ಸಮಿತಿಯನ್ನು' ರಚಿಸಲಾಗಿದೆ.

ಕ್ರ.ಸಂ.	ಹೆಸರು	ಪದನಾಮ
1	ಸರ್ಕಾರದ ಕಾರ್ಯದರ್ಶಿ, ಕಾರ್ಮಿಕ ಇಲಾಖೆ, ವಿಕಾಸಸೌಧ, ಬೆಂಗಳೂರು	ಅಧ್ಯಕ್ಷರು
2	ಅಧ್ಯಕ್ಷರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕೆಗಳ ಮಹಾ ಮಂಡಳಿ, ಕೆ.ಜಿ. ರಸ್ತೆ, ಬೆಂಗಳೂರು	ಸದಸ್ಯರು
3	ಅಧ್ಯಕ್ಷರು, ಬೆಂಗಳೂರು ವಾಣಿಜ್ಯ ಮತ್ತು ಕೈಗಾರಿಕೆಗಳ ಮಹಾ ಮಂಡಳಿ, ಬೆಂಗಳೂರು	ಸದಸ್ಯರು
4	ಅಧ್ಯಕ್ಷರು, ಕಾನ್‌ಫೆಡರೇಷನ್ ಆಫ್ ಇಂಡಿಯನ್ ಇಂಡಸ್ಟ್ರಿ, ಬೆಂಗಳೂರು	ಸದಸ್ಯರು
5	ಅಧ್ಯಕ್ಷರು, (ಕಾಸ್ಸಿಯಾ), ಕರ್ನಾಟಕ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ನಂ. 106, 17ನೇ ಕ್ರಾಸ್, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು.	ಸದಸ್ಯರು
6	ಪ್ರಧಾನ ಕಾರ್ಯದರ್ಶಿ, ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್, ನಂ. 11, 2ನೇ ಮಹಡಿ, ವಿ.ಜಿ. ಗೋಪಾಲ್ ಬಿಲ್ಡಿಂಗ್, ಲಾಲ್‌ಬಾಗ್ ಫೋರ್ಟ್ ರೋಡ್, ಮಿನರ್ವ ಸರ್ಕಲ್ ಹತ್ತಿರ, ಬೆಂಗಳೂರು.	ಸದಸ್ಯರು
7	ಅಧ್ಯಕ್ಷರು, ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್, ನಂ. 26/7, 2ನೇ ಮೇನ್, 11ನೇ ಕ್ರಾಸ್, ವೈಯಾಲಿ ಕಾವಲ್, ಬೆಂಗಳೂರು-3.	ಸದಸ್ಯರು
8	ಅಧ್ಯಕ್ಷರು, ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್, ನಂ. 6 ಸಿರೂರು ಪಾರ್ಕ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು-20.	ಸದಸ್ಯರು
9	ಅಧ್ಯಕ್ಷರು, ಭಾರತೀಯ ಮಜ್‌ದೂರ್ ಸಂಘ, ಸುಭೇದಾರ್ ಛತ್ರಂ ರಸ್ತೆ, ಬೆಂಗಳೂರು-9	ಸದಸ್ಯರು
10	ಅಧ್ಯಕ್ಷರು, ಹಿಂದ್ ಮಜ್‌ದೂರ್ ಸಭಾ, ಬೆಂಗಳೂರು	ಸದಸ್ಯರು
11	ಅಧ್ಯಕ್ಷರು, ಹಿಂದ್ ಮಜ್‌ದೂರ್ ಕಿಸಾನ್ ಪಂಚಾಯಿತಿ, ಬೆಂಗಳೂರು	ಸದಸ್ಯರು
12	ಶ್ರೀ ಬಿ. ಸಿ. ಪ್ರಭಾಕರ್, ಅಧ್ಯಕ್ಷರು, ಕರ್ನಾಟಕ ಎಂಪ್ಲಾಯರ್ಸ್ ಅಸೋಸಿಯೇಷನ್, ನಂ. 74, ಶಂಕರ್ ಅರ್ಕೆಡ್, ವಾಣಿ ವಿಲಾಸ ರಸ್ತೆ, ಬಸವನಗುಡಿ, ಬೆಂಗಳೂರು.	ಸದಸ್ಯರು
13	ಅಧ್ಯಕ್ಷರು, ಕ್ಲಾಥ್ ಮ್ಯಾನುಫ್ಯಾಕ್ಚರಿಂಗ್ ಅಸೋಸಿಯೇಷನ್ ಆಫ್ ಇಂಡಿಯಾ, ಗೀತಾ ಮ್ಯಾನ್ಷನ್, 6ನೇ ಮಹಡಿ, 40/1 ಕೆಂಪೇಗೌಡ ರಸ್ತೆ, ಬೆಂಗಳೂರು	ಸದಸ್ಯರು
14	Prof. Rajashekhar, Institute for Socio & Economic Change, Nagarbhavi, Bangalore-22	ಸದಸ್ಯರು
15	ನಿರ್ದೇಶಕರು, ನ್ಯಾಷನಲ್ ಲೇಬರ್ ಇನ್‌ಸ್ಟಿಟ್ಯೂಟ್ (NLSI)	ಸದಸ್ಯರು
16	ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ, ಬೆಂಗಳೂರು	ಸದಸ್ಯರು
17	ಆಡಳಿತ ವರ್ಗ, ಮಂಗಳೂರು ಗಣೇಶ ಬೀಡಿ ವರ್ಕ್ಸ್, ಬೆಂಗಳೂರು	ಸದಸ್ಯರು

18	ಅಧ್ಯಕ್ಷರು ಅಥವಾ ಕಾರ್ಯದರ್ಶಿ, ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್, ಸ್ಪೆನ್ಸರ್ ರಸ್ತೆ, ಪಿ.ಬಿ. ನಂ. 18, ಚಿಕ್ಕಮಗಳೂರು-577 101.	ಸದಸ್ಯರು
19	ಅಧ್ಯಕ್ಷರು, ಹೆಚ್.ಎಂ.ಕೆ.ಪಿ. (ಕರ್ನಾಟಕ) (HMKP) ನಂ. 5, ಮಿರ್ಟಲ್ ಲೈನ್, ಬೆಂಗಳೂರು-25	ಸದಸ್ಯರು
20	CREDAI, No. 607, 6th Floor, Barton Centre, No. 84, M. G. Road, Bangalore-560 001, (Building Contractors Association)	ಸದಸ್ಯರು
21	ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬೆಂಗಳೂರು-29	ಸದಸ್ಯ ಕಾರ್ಯದರ್ಶಿ

ಸಮಿತಿಯು 3 ತಿಂಗಳಲ್ಲಿ ತನ್ನ ವರದಿಯನ್ನು ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಯು. ಎನ್. ನಾಗೇಂದ್ರ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾರ್ಮಿಕ ಇಲಾಖೆ

ಪಿಆರ್-519

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಎಂ. ನಾಗಭೂಷಣ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ, ಗುಬ್ಬಿ, ತುಮಕೂರು ಜಿಲ್ಲೆ ಇವರ ಅನಧಿಕೃತ ಗೈರುಹಾಜರಿ ಸಂಬಂಧ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸುವ ಬಗ್ಗೆ ಆದೇಶ :-

ಓದಲಾಗಿದೆ :
1) ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು ಬೆಂಗಳೂರು ರವರ ಕಾರಣ ಕೇಳುವ ನೋಟೀಸ್ ಸಂಖ್ಯೆ : ಡಿಪಿಜಿ / (1) /ತು/ಅನಗೈ/19/04-05, ದಿನಾಂಕ 21-06-2005.
2) ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ : ಡಿಪಿಜಿ/(1)/ತು/ಅನಗೈ/19/04-05, ದಿನಾಂಕ 24-04-2006.
3) ವಿಚಾರಣಾ ವರದಿ, ದಿನಾಂಕ 12-01-2009
4) ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು ರವರ ತಿಳುವಳಿಕೆ ಪತ್ರ ಸಂಖ್ಯೆ : ಡಿಪಿಜಿ/(1)/ತು/ಅನಗೈ/19/04-05, ದಿನಾಂಕ 07-02-2009
5) ಡಾ॥ ಎಂ. ನಾಗಭೂಷಣ್ ರವರ ರಕ್ಷಣಾ ಹೇಳಿಕೆ, ದಿನಾಂಕ 11-05-2009
6) ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು ರವರ ಪತ್ರ ಸಂಖ್ಯೆ : ಡಿಪಿಜಿ/(1)/ತು/ಅನಗೈ/19/04-05, ದಿನಾಂಕ 16-07-2009

ಪ್ರಸ್ತಾವನೆ :

ಡಾ॥ ಎಂ. ನಾಗಭೂಷಣ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ, ಗುಬ್ಬಿ, ತುಮಕೂರು ಜಿಲ್ಲೆ ಇವರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ 01-05-2004 ರಿಂದ ಇಲ್ಲಿಯವರೆಗೆ ಕರ್ತವ್ಯಕ್ಕೆ ಹಾಜರಾಗದೆ ಅನಧಿಕೃತ ಗೈರುಹಾಜರಾಗಿರುವ ಆರೋಪಕ್ಕೆ ಸಂಬಂಧಿಸಿದಂತೆ ಸದರಿ ವೈದ್ಯರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಸಲುವಾಗಿ ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ರವರು ಮೇಲೆ (1)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಜಾರಿ ಮಾಡಿ, ಅವರಿಂದ ರಕ್ಷಣಾ ಹೇಳಿಕೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಸದರಿ ನೋಟೀಸಿಗೆ ಆರೋಪಿತ ಅಧಿಕಾರಿಯವರು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದು, ಸದರಿ ಹೇಳಿಕೆಯಲ್ಲಿ ಒಪ್ಪುವಂತಹ ಯಾವುದೇ ಅಂಶಗಳು ಇಲ್ಲದಿದ್ದ ಕಾರಣ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯುವ ಸಲುವಾಗಿ ಮೇಲೆ (2) ರಲ್ಲಿ ಓದಲಾದ ಆದೇಶ ದಿನಾಂಕ 24-04-2006ರಲ್ಲಿ ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು ರವರು ಈ ಸಂಬಂಧ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳನ್ನು ನೇಮಿಸಿ, ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶಿಸಿದ್ದರು.

ಮೇಲೆ (3)ರ ಪತ್ರದಲ್ಲಿ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಆಯುಕ್ತರಿಗೆ ದಿನಾಂಕ 12-01-2009 ರಂದು ಸಲ್ಲಿಸಿದ್ದಾರೆ. ಸದರಿ ವಿಚಾರಣಾ ವರದಿಯಲ್ಲಿ, ಆರೋಪಿತ ಅಧಿಕಾರಿಗೆ ಇಲಾಖಾ ವಿಚಾರಣೆಗೆ ಹಾಜರಾಗಲು ವಿಚಾರಣಾಧಿಕಾರಿಗಳು ನೋಟೀಸನ್ನು ಜಾರಿಗೊಳಿಸಿದ್ದರೂ ಸಹ ಸದರಿ ಅಧಿಕಾರಿಗಳು ವಿಚಾರಣೆಗೆ ಹಾಜರಾಗದೆ ಇದ್ದುದರಿಂದ, ವಿಚಾರಣೆಯನ್ನು ಏಕಪಕ್ಷೀಯವಾಗಿ ನಡೆಸಿ, ಸಾಕ್ಷಿದಾರರ ಸಾಕ್ಷ್ಯ, ಮಂಡನಾಧಿಕಾರಿಗಳ ವಾದ ಮಂಡನೆಯೊಂದಿಗೆ ವಿಚಾರಣೆಯನ್ನು ನಡೆಸಿ, ಇವರ ಮೇಲಿನ ಅನಧಿಕೃತ ಗೈರುಹಾಜರಿ ಆರೋಪವು ನಿಸ್ಸಂಶಯವಾಗಿ ರುಜುವಾತಾಗಿದೆ ಎಂಬ ವರದಿಯನ್ನು ನೀಡಿರುತ್ತಾರೆ.

ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರು ವಿಚಾರಣಾ ವರದಿಯನ್ನು ಏಕೆ ಅಂಗೀಕರಿಸಬಾರದೆಂಬ ಬಗ್ಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ ಆರೋಪಿತ ಅಧಿಕಾರಿಗೆ ತಿಳುವಳಿಕೆ ಪತ್ರದ ಮೂಲಕ ಜಾರಿಗೊಳಿಸಲಾಗಿತ್ತು. ಸದರಿ ತಿಳುವಳಿಕೆ ಪತ್ರಕ್ಕೆ ಸಂಬಂಧಿಸಿದಂತೆ ಆರೋಪಿತ ಅಧಿಕಾರಿಯು ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ತಮ್ಮ ಹೇಳಿಕೆ ಸಲ್ಲಿಸಿದ್ದಾರೆ. ತಮ್ಮ ಹೇಳಿಕೆಯಲ್ಲಿ ಅನಾರೋಗ್ಯದ ನಿಮಿತ್ತ 3 ತಿಂಗಳ ವೈದ್ಯಕೀಯ ರಜೆಯನ್ನು ಮಂಜೂರು ಮಾಡುವಂತೆ ದಿನಾಂಕ 30-04-2004 ರಂದು ರಜೆ ಅರ್ಜಿ ಸಲ್ಲಿಸಿ, ಅನುಮತಿಯನ್ನು ನಿರೀಕ್ಷಿಸಿ, ರಜೆಯಲ್ಲಿ ತೆರಳಿರುತ್ತೇನೆ. ಅನಾರೋಗ್ಯದ ಕಾರಣದಿಂದ ಹಾಗೂ ಕೌಟುಂಬಿಕ ಕಾರಣಗಳಿಂದ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ರಜೆ ಕೋರಿ ಅರ್ಜಿ ಸಲ್ಲಿಸಿ, ರಜೆ ಮೇಲೆ ತೆರಳಿರುವುದರಿಂದ ಪೂರ್ವಾನುಮತಿ ಪಡೆಯಲಿಲ್ಲವೆಂಬ ಆರೋಪವನ್ನು ಈಗಲೂ ನಿರಾಕರಿಸುತ್ತೇನೆ. ತಾವು ಆರೋಪ ಪಟ್ಟಿಯಲ್ಲಿ ತಿಳಿಸಿರುವಂತೆ ಕರ್ತವ್ಯಕ್ಕೆ ಮರಳುವಂತೆ ದಿನಾಂಕ 03-07-2004 ಮತ್ತು 31-08-2004 ರಂದು ನೀಡಿದ ಯಾವುದೇ ನೋಟೀಸ್‌ಗಳು ನನ್ನ ಮನೆ ವಿಳಾಸ ಬದಲಾವಣೆಯಾದ ಹಿನ್ನೆಲೆಯಲ್ಲಿ ತಲುಪಿರುವುದಿಲ್ಲ. ಆ ಸಮಯದಲ್ಲಿ ಮನೆ ವಿಳಾಸ ಬದಲಾಗಿರುವುದಕ್ಕೆ ಆಧಾರವಾಗಿ ದಾಖಲೆಗಳನ್ನು ಒದಗಿಸಿರುತ್ತೇನೆ. ಮುಂದುವರೆದು ತಮ್ಮ ಕೌಟುಂಬಿಕ ಕಾರಣಗಳಿಂದ ಹಾಗೂ ವೈಯಕ್ತಿಕ ಕಾರಣದಿಂದ ಈ ಹುದ್ದೆಗೆ ನನ್ನ ಸ್ವ-ಇಚ್ಛೆಯಿಂದ ರಾಜೀನಾಮೆ ನೀಡುತ್ತಿದ್ದು ಅಂಗೀಕರಿಸುವಂತೆ ದಿನಾಂಕ 05-09-09 ರಲ್ಲಿಯೇ ತಮಗೆ ಮನವಿಯನ್ನು ಸಲ್ಲಿಸಿರುತ್ತೇನೆ. ನಾನು ಈ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದಲೂ ಸಹ ಯಾವುದೇ ವೇತನ ಮತ್ತು ಸೌಲಭ್ಯವನ್ನು ಪಡೆದಿರುವುದಿಲ್ಲ. ಆದರೆ ವೇತನ ಬಾಕಿ ಪಾವತಿಸುವಂತೆಯೂ ಕೇಳುತ್ತಿಲ್ಲ. ಆದ್ದರಿಂದ ನನ್ನ ಮನವಿಯನ್ನು ಮಾನವೀಯತೆಯಿಂದ ಪರಿಗಣಿಸಿ ಶಿಸ್ತುಕ್ರಮ ಕೈಬಿಡುವಂತೆ ಹಾಗೂ ನನ್ನ ರಾಜೀನಾಮೆಯನ್ನು ಅಂಗೀಕರಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ವಿನಂತಿಸಿಕೊಂಡಿದ್ದಾರೆ.

ಮೇಲೆ (6) ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು ರವರು ವಿಚಾರಣಾಧಿಕಾರಿಯವರ ವಿಚಾರಣಾ ವರದಿ, ಹಾಗೂ ಆರೋಪಿತ ಅಧಿಕಾರಿಯು ನೀಡಿರುವ ರಕ್ಷಣಾ ಹೇಳಿಕೆ ಇವುಗಳನ್ನು ಪರಿಶೀಲಿಸಿ, ಸದರಿ ಅಧಿಕಾರಿಯು ಕೌಟುಂಬಿಕ ಕಾರಣಗಳಿಂದ ಹಾಗೂ ವೈಯಕ್ತಿಕ ಕಾರಣದಿಂದ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗಲಿಲ್ಲವೆಂದು ತಿಳಿಸಿದ್ದು, ರಾಜೀನಾಮೆ ಅಂಗೀಕಾರಕ್ಕೆ ಕೋರಿರುತ್ತಾರೆ. ಆದರೆ ವೈದ್ಯರ ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗಿರುವುದರಿಂದ ಆರೋಪಿತ ವೈದ್ಯರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ), ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿಗಳ ನಿಯಮ-8 (viii)ರ ಅಡಿಯಲ್ಲಿ ಸರ್ಕಾರಿ ಸೇವೆಯಿಂದ ವಜಾಗೊಳಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಆಯುಕ್ತರು ಸಲ್ಲಿಸಿರುತ್ತಾರೆ.

ಸರ್ಕಾರವು ಆರೋಪಿತರಿಗೆ ಜಾರಿ ಮಾಡಲಾದ ದೋಷಾರೋಪಣಾ ಪಟ್ಟಿ ವಿಚಾರಣಾಧಿಕಾರಿಯವರ ವಿಚಾರಣಾ ವರದಿ, ಸಾಕ್ಷಿಗಳ ಹೇಳಿಕೆ ದಾಖಲಾತಿಗಳು ಹಾಗೂ ಆರೋಪಿತರ ರಕ್ಷಣಾ ಹೇಳಿಕೆ ಹಾಗೂ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಆರೋಪಿತ ಅಧಿಕಾರಿಯು ತಮ್ಮ ರಕ್ಷಣಾ ಹೇಳಿಕೆಯಲ್ಲಿ ರಾಜೀನಾಮೆಯನ್ನು ಅಂಗೀಕರಿಸುವಂತೆ ಕೋರಲಾಗಿದ್ದು, ಇದನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಇವರ ವಿರುದ್ಧ ಈಗಾಗಲೇ ಇಲಾಖಾ ವಿಚಾರಣೆ ಕೈಗೊಂಡಿದ್ದು, ಇಲಾಖಾ ವಿಚಾರಣೆಯು ನಡೆಯುವ ಸಂದರ್ಭದಲ್ಲಿ ಇವರ ರಾಜೀನಾಮೆಯನ್ನು ಅಂಗೀಕರಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಅಧಿಕಾರಿಯ ಸೇವಾ ವಿವರವನ್ನು ಪರಿಶೀಲಿಸಲಾಗಿ, ಸದರಿಯವರು ದಿನಾಂಕ 08-03-2004 ರಂದು ಸರ್ಕಾರಿ ಸೇವೆಗೆ ಸೇರಿದ್ದು, ಕೇವಲ 53 ದಿನಗಳು ಮಾತ್ರ ಸರ್ಕಾರಿ ಸೇವೆ ಸಲ್ಲಿಸಿರುವುದು ಕಂಡುಬರುತ್ತದೆ. ಸದರಿ ಅಧಿಕಾರಿಯು ಖಾಯಂ ಪೂರ್ವಾವಧಿ ಘೋಷಣೆಯಾಗಿರುವುದಿಲ್ಲ ಹಾಗೂ ಖಾಯಂ ಪೂರ್ವಾವಧಿಯಲ್ಲಿಯೇ ಈ ರೀತಿ ಅನಧಿಕೃತ ಗೈರುಹಾಜರಾಗಿದ್ದು ಸರ್ಕಾರಿ ನೌಕರರಿಗೆ ತಕ್ಕದಲ್ಲದ ರೀತಿಯಲ್ಲಿ ವರ್ತಿಸಿರುವುದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೆಷನರಿ) ನಿಯಮಾವಳಿಗಳು 1977ರ ನಿಯಮ-6 ರಡಿಯಲ್ಲಿ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಆಕುಕ 219 ಎಂಎಸ್‌ಎ 2009, ಬೆಂಗಳೂರು, ದಿನಾಂಕ 12ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ, ಸರ್ಕಾರವು ಡಾ॥ ಎಂ. ನಾಗಭೂಷಣ್, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ಪ್ರಾ.ಆ.ಕೇಂದ್ರ, ಗುಬ್ಬಿ, ತುಮಕೂರು ಜಿಲ್ಲೆ ಇವರು ಸರ್ಕಾರಿ ಸೇವೆಗೆ ದಿನಾಂಕ 03-04-2003 ರಿಂದ ಅನಧಿಕೃತ ಗೈರುಹಾಜರಾಗಿರುವುದರಿಂದ ಇವರು ಖಾಯಂ ಪೂರ್ವಾಸೇವಾವಧಿಯಲ್ಲಿಯೇ ಸರ್ಕಾರಿ ನೌಕರರಿಗೆ ತಕ್ಕದಲ್ಲದ ರೀತಿಯಲ್ಲಿ ವರ್ತಿಸಿ, ಕರ್ತವ್ಯಚ್ಯುತಿ ಎಸಗಿರುವುದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ (ಪ್ರೊಬೆಷನರಿ) ನಿಯಮಾವಳಿಗಳು 1977ರ, ನಿಯಮ-6 ರಡಿಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಿಮೋಚನೆಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ಪದ್ಮಾವತಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಪಿಆರ್-520

HEALTH AND FAMILY WELFARE SECRETARIAT

Sub :- Establishing District Registration Authorities in all districts of the State under Karnataka Private medical Establishments Act, 2007.

Read :-
1. Notification No. SAMVYASHAE 60 SHASANA 2005, dated 16-08-2007
2. Notification No. HFW 94 CGE 2008, dated 10-11-2009
3. Letter No. COM/JDM/MDP/19/2009-10, dated 26-12-2009 of the Commissioner, Health & Family Welfare Services, Bangalore.

Preamble:

Section 4 of the Karnataka Private medical Establisments Act, 2007 as Notified on 16-08-2007 read at (1) above, provides for constitution of Registration Authority in each district for the purpose of registering the private medical establishments. The said provision reads as follows :-

"Registration Authority : There shal be a Registration Authority in each district consisting of the following members, namely :-

(a) The Deputy Commissioner of the district … Chairman
(b) District Health & Family Welfare Officer … Member
(c) President/Secretary … Member"
Indian Medical Association of the concerned district

In Government Notification read at (2) above, all the provisions of the said Act have been brought into force with effect from 10-11-2009. As such the Commissioner for Health & Family Welfare Services vide letter read at (3) above has proposed that Registration Authorities in all the districts of the State be constituted as provided in the Karnataka Private Medical Establishments Act, 2007.

Government have examined the said proposal. Hence the following Order. .

Government Order No. HFW 08 CGE 2010, Bangalore, dated : 28-01-2010

In the circumstances explained in the preamble, Government are pleased to constitute District Registration Authority in each of the district in the State, for the purposes of carrying out the provisions enunciated under Karnataka Private Medical Establishments Act, 2007 and the Rules framed thereunder, as follows :

(a) The Deputy Commissioner of the district … Chairman
(b) District Health & Family Welfare Officer … Member
(c) President/Secretary … Member
Indian Medical Association of the concerned district

By Order and in the name of the Governor of Karnataka

(**K. S. Sarojamma)**

Under Secretary to Government,

Health and Family Welfare Department

P.R. 521

ಸಹಕಾರ ಸಚಿವಾಲಯ

ವಿಷಯ : ಶ್ರೀ ಭಾಗ್ಯಲಕ್ಷ್ಮೀ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಖಾನಾಪುರ, ಬೆಳಗಾಂ ಜಿಲ್ಲೆ, ಇದರ 2008–09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ಮುಂದೂಡಲು ಮಂಜೂರಾತಿ ನೀಡುವ ಬಗ್ಗೆ :–

ಓದಲಾಗಿದೆ :
1) ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಪತ್ರ ಸಂಖ್ಯೆ : ಡಿಎಸ್‌ಕೆ/ಇಎಸ್‌ಟಿಎಸ್/91/2002–03, ದಿನಾಂಕ 20–10–2009.
2) ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಪತ್ರ ಸಂಖ್ಯೆ : ಅ.ನಿ/15/ಕೈಸಸಂ/2009–10, ದಿನಾಂಕ 19–12–2009.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ : 1ರ ದಿನಾಂಕ 20–10–2009ರ ಪತ್ರದಲ್ಲಿ ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು, ಕೋರಿರುವಂತೆ

ಕಾರ್ಖಾನೆಯಲ್ಲಿ ಒಟ್ಟು 41 ಕೋಟಿ ಮೌಲ್ಯದ ಆಸ್ತಿ ಇದ್ದು, ಹೊಣೆಗಾರಿಕೆ 121 ಕೋಟಿ ಇರುತ್ತದೆ. ಈ ದಿಸೆಯಿಂದಾಗಿ ಆಡಳಿತ ಮಂಡಳಿ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30(1) ರಡಿಯಲ್ಲಿ ರದ್ದಾಗಿ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ. ಕಾರ್ಖಾನೆ ಒಟ್ಟು ಸದಸ್ಯರ ಸಂಖ್ಯೆ 60000 ಇದ್ದು ಸರ್ವ ಸದಸ್ಯರ ಸಭೆಗೆ ಅವರನ್ನು ಆಹ್ವಾನಿಸಲು ಕೇವಲ ಆಹ್ವಾನ ಪತ್ರಿಕೆ ಮುದ್ರಿಸಿ ದೃಢೀಕೃತ ಅಂಚೆಯಲ್ಲಿ ಜಾರಿಗೊಳಿಸಲು ರೂ. 24,60,000/– ಖರ್ಚು ತಗಲಿರುತ್ತದೆ. ಹಾಲಿ ಕಾರ್ಖಾನೆಯ ಆರ್ಥಿಕ ಪರಿಸ್ಥಿತಿಯಲ್ಲಿ ಈ ಮೊತ್ತವನ್ನು ಸರಿದೂಗಿಸಲು ಯಾವುದೇ ಆರ್ಥಿಕ ಮೂಲಗಳು ಕಾರ್ಖಾನೆಗೆ ಇಲ್ಲ. ಇತ್ತೀಚೆಗೆ ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಲು ಎಲ್‌ಆರ್‌ಓಟಿ ಆಧಾರದ ಮೇಲೆ ಮೆ॥ ಡೆಲ್ಟಾ ಶುಗರ್ಸ್ ಲಿ., ವಿಜಯವಾಡ ಸಂಸ್ಥೆಗೆ ರೂ. 15,225/– ಲಕ್ಷಕ್ಕೆ ಗುತ್ತಿಗೆ ನೀಡಲು ಒಪ್ಪಲಾಗಿದೆ. ಇವರೊಂದಿಗೆ ಗುತ್ತಿಗೆ ಒಪ್ಪಂದ ಮಾಡಿಕೊಳ್ಳುವ ಕ್ರಮ ಪ್ರಗತಿಯಲ್ಲಿದೆ. ಈ ಕಾರಣಗಳಿಗಾಗಿ ಸರ್ವ ಸದಸ್ಯರ ಸಭೆ ಜರುಗಿಸಲು ಆರ್ಥಿಕ ಮುಗ್ಗಟ್ಟಿರುವ ಪ್ರಯುಕ್ತ ಒಂದು ವರ್ಷ ಮುಂದೂಡಬೇಕಾಗಿ ಕೋರಿರುವ ಕಾರಣ ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಖಾನಾಪುರ, ಬೆಳಗಾಂ ಜಿಲ್ಲೆ ಇದರ 2008–09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121ರ ಅಡಿಯಲ್ಲಿ ಸರ್ಕಾರದ ಅನುಮತಿ ನೀಡಬಹುದೆಂದು ಕಬ್ಬು ಅಭಿವೃದ್ಧಿ ಆಯುಕ್ತರು ಅಭಿಪ್ರಾಯಪಟ್ಟಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ : 2ರ ದಿನಾಂಕ 19–12–2009ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಶ್ರೀ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆ ನಿ., ಖಾನಾಪುರ, ಬೆಳಗಾಂ ಜಿಲ್ಲೆ ಇದರ 2008–09ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿನಾಂಕ 31–12–2009 ರೊಳಗಾಗಿ ಜರುಗಿಸಲು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 121ರಡಿಯಲ್ಲಿ ಅನುಮತಿ ನೀಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಮೇಲಿನ ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 19 ಸಸಕಾ 2009, ಬೆಂಗಳೂರು, ದಿನಾಂಕ 22ನೇ ಜನವರಿ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 121ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಖಾನಾಪುರ, ಬೆಳಗಾಂ ಜಿಲ್ಲೆ ಇದರ 2008–09ನೇ ಸಾಲಿನ ವಾರ್ಷಿಕ ಮಹಾ ಸಭೆಯನ್ನು ದಿನಾಂಕ 31–01–2010ರೊಳಗೆ ನಡೆಸಲು ಕಾಲಾವಕಾಶವನ್ನು ವಿಸ್ತರಿಸಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪಬಂಧಗಳನ್ನು ಮಾರ್ಪಡಿಸಿ ಅನುಮತಿ ನೀಡಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಕಲಂ 27(1)ರ ಉಪಬಂಧಕ್ಕೆ ಮಾಡಿದ ಈ ಮಾರ್ಪಾಡು ದಿನಾಂಕ 31–01–2010ರವರೆಗೆ ಜಾರಿಯಲ್ಲಿರತಕ್ಕದ್ದು. ಈ ಅವಧಿ ಮುಗಿದ ನಂತರ ಈ ಆದೇಶದ ಮಾರ್ಪಾಡಿಗೆ ಮೊದಲು ಜಾರಿಯಲ್ಲಿದ್ದಂತೆ ಸದರಿ 27(1)ರ ಕಲಂನ ಉಪಬಂಧಗಳು ಪುನಃ ಜಾರಿಗೆ ಬರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

(ನಂಜುಂಡಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿಆರ್–522

PERSONNEL AND ADMINISTRATIVE REFORMS SECRETARIAT

Sub :- All India Service (Study Leave) Regulations, 1960-study leave sanctioned to Sri T. R. Raghunandan, IAS (KN-83) cancellation of-reg.

Read :- 1. Government Order No. DPAR 132 SIS 2009, dated 28-7-2009
2. Letter dated 22-1-2010 from Sri T. R. Raghunandan, IAS (KN-83)

Preamble:

In the Government Order dated 28-7-2009 read at (1) above. Sri T. R. Raghunandan, IAS (KN-83) has been sanctioned study leave from 1-8-2009 to 31-12-2010 to take up Ph.D. Programme on the subject "Public finance Aspects of Panchayat Raj with a special focus on the own revenues of Panchayats" at IGNOU, in terms of regulation 3(1) (iii) and regulation 4 of All India Service (Study Leave) Regulations, 1960.

. Sri T. R. Raghunandan, in his letter dated 22-1-2010 read at (2) above, has soght voluntary retirement from the Indian Administrative Service u/r 16(2) of the All India Services (DCRB) Rules, 1958. The request of the officer seeking voluntary retirement has been examined in Government in detail. According to the clause (iv) of Government of India decision in letter No. 25011/2/80-AIS-II dated 16-10-

1980, u/r 16 (2A), *"the notice of voluntary retirement given by a member of the service, who is on study leave or who has not completed a minimum service of 3 years on completion of study leave, may not ordinarily be accepted"* Therefore, the request of the officer for voluntary retirement has been examined in the light of the aforesaid decision of the Government of India. It is seen that the officer has not yet executed the bond expected of him as per regulation 9 of the All India Service (Study Leave) Regulations, 1960 and also for the same reason, the officer has not been paid for the period from 1-8-2009 and onwards, so far.

The State Government has accepted the request of Sri T. R. Raghunandan, IAS seeking voluntary retirement. Therefore, in the circumstances it is considered necessary to cancel the study leave sanctioned to the officer and regulate the period of absence of the officer from 1-8-2009 and onwards. The officer has been orally consulted in this regard and with his consent. Government is pleased to Order as follows :

Government Order No. DPAR 132 SIS 2009, Bangalore, dated : 20-02-2010

In the circumstances explained in the preamble, Government hereby cancels the study leave sanctioned to Sri T. R. Raghunandan, IAS (KN-83) from 1-8-2009 to 31-12-2010 in terms of regulation 3(1)(iii) and regulation 4 of All India Service (Study Leave) Regulations, 1960, vide Government Order dated 28-7-2009. The period of absence of Sri T. R. Raghunandan, IAS (KN-83) from 1-8-2009 to 28-2-2010 is regulated by sanctioning half pay leave at the credit of officer. The half pay leave account of the officer shall be debited to the extent required and the leave salary for the said period shall be paid to the officer.

By Order and in the name of the Governor of Karnataka

(**K. G. Anantha**)

P.R. 523

Under Secretary to Government,

DP and AR (Services-I)

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಲಕ್ಕುಂಡಿ ವಿರೂಪಾಕ್ಷಪ್ಪ ಬಸಪ್ಪ ಕಮಾತರ ಇವರ ತೋಟದಲ್ಲಿ ಉತ್ಖನನ ಮಾಡಿದ್ದು–ತೋಟದ ಜಮೀನಿಗೆ ನಷ್ಟ ಪರಿಹಾರವನ್ನು ನೀಡುವ ಬಗ್ಗೆ :–

ಓದಲಾಗಿದೆ : ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆ, ಮೈಸೂರು ರವರ ಪತ್ರ ಸಂಖ್ಯೆ : ಡಿಎಎಂ/ಇಎಸ್‌ಟಿ/3/ ಲಕ್ಕುಂಡಿ ಉತ್ಖನನ/2006–07, ದಿನಾಂಕ 06–01–2010.

ಪ್ರಸ್ತಾವನೆ :

ಮೇಲೆ ಓದಲಾದ ದಿನಾಂಕ 06–01–2010ರ ಪತ್ರದಲ್ಲಿ ನಿರ್ದೇಶಕರು ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿ, ಲಕ್ಕುಂಡಿ ವಿರೂಪಾಕ್ಷಪ್ಪ ಬಸಪ್ಪ ಕಮಾತರ ಇವರ ತೋಟದಲ್ಲಿ ಉತ್ಖನನ ಮಾಡಿದ್ದು ತೋಟದ ಜಮೀನಿಗೆ ನಷ್ಟ ಪರಿಹಾರವನ್ನು ನೀಡುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಲಕ್ಕುಂಡಿ ಗ್ರಾಮದ ತೋಟದ ಸರ್ವೇ ನಂ. 579/1 ಮತ್ತು 579/2ಬಿ ಇದರಲ್ಲಿ 2003–04ನೇ ಸಾಲಿನಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಇಲಾಖೆಯಿಂದ ಉತ್ಖನನ ಮಾಡಿದ್ದು. ಸದರಿ ಜಮೀನಿನ ವಾರಸುದಾರರು ಉತ್ಖನನ ಕೈಗೊಂಡಿದ್ದಕ್ಕಾಗಿ ನಷ್ಟ ಪರಿಹಾರವನ್ನು ನೀಡಲು ಕೋರಿರುತ್ತಾರೆಂದು ತಿಳಿಸಿರುವರು. ಅಲ್ಲದೆ ನಷ್ಟ ಪರಿಹಾರ ರೂಪದಲ್ಲಿ ರೂ. 1,20,000/– (ರೂ. ಒಂದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಲೆಕ್ಕಶೀರ್ಷಿಕೆ 2205–00–103–0–01 (ಯೋಜನೇತರ) 059 ಇತರ ಖರ್ಚುಗಳಡಿ ಸಂಭವನೀಯ ಉಳಿತಾಯದಲ್ಲಿ ಭರಿಸಲು ಸರ್ಕಾರದ ಮಂಜೂರಾತಿ ಕೋರಿರುವರು.

ಲಕ್ಕುಂಡಿ ವಿರೂಪಾಕ್ಷಪ್ಪ ಬಸಪ್ಪ ಕಮಾತರ ಇವರ ತೋಟದಲ್ಲಿ ಉತ್ಖನನ ಮಾಡಿದ್ದು ಜಮೀನಿಗೆ ನಷ್ಟ ಪರಿಹಾರವಾಗಿ ರೂ. 1,20,000/– (ರೂ. ಒಂದು ಲಕ್ಷ ಇಪ್ಪತ್ತು ಸಾವಿರ ಮಾತ್ರ) ಗಳನ್ನು ಪಾವತಿಸಲು ಸರ್ಕಾರವು ತೀರ್ಮಾನಿಸಿರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರದ ಆದೇಶ ಸಂಖ್ಯೆ : ಕಸಂವಾಪ್ರ 210 ಕೆಎಂಯು 2009, ಬೆಂಗಳೂರು, ದಿನಾಂಕ 19ನೇ ಫೆಬ್ರವರಿ 2010

ಲಕ್ಕುಂಡಿ ವಿರೂಪಾಕ್ಷಪ್ಪ ಬಸಪ್ಪ ಕಮಾತರ ಇವರ ತೋಟದಲ್ಲಿ ಉತ್ಖನನ ಮಾಡಿದ್ದು ತೋಟದ ಜಮೀನಿಗೆ ನಷ್ಟ ಪರಿಹಾರ ರೂಪದಲ್ಲಿ ನೀಡಲು ರೂ. 1,20,000/–ಗಳನ್ನು ಪಾವತಿ ಮಾಡಲು ನಿರ್ದೇಶಕರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆ ಇವರಿಗೆ 2009–10ನೇ ಸಾಲಿನಲ್ಲಿ ಆಯವ್ಯಯದಲ್ಲಿ ಸಂಭವನೀಯ ಉಳಿತಾಯದಲ್ಲಿ ಭರಿಸಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ವೆಚ್ಚವನ್ನು 2009–10ನೇ ಸಾಲಿನ ಆಯವ್ಯಯ ಲೆಕ್ಕಶೀರ್ಷಿಕೆ 2205–00–103–0–01 (ಯೋಜನೇತರ) 059 ಇತರೆ ಖರ್ಚುಗಳಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಸಹಮತಿಯನ್ನು ಅನಧಿಕೃತ ಟಿಪ್ಪಣಿ ಸಂಖ್ಯೆ : ಶಿಇ 177 ಐಎಫ್ (ಬಿ&ಎ) 2010 ದಿನಾಂಕ 03–02–2010 ರಲ್ಲಿ ಪಡೆದು ಹಾಗೂ ಇಲಾಖಾ ಕಾರ್ಯದರ್ಶಿಗಳಿಗೆ ಸರ್ಕಾರದ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10–7–96ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದ ಪ್ರತ್ಯಾಯೋಜನೆಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
(ಎಂ. ಕೆ. ಧರ್ಮರಾಜಪ್ಪ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಪಿಆರ್–524

COMMERCE AND INDUSTRIES SECRETARIAT

CORRIGENDUM

No. CI/36/SPI/2010, Bangalore, dated 19-02-2010

Sub :- Approval to M/s. Dhruvdesh Metasteel Pvt., Ltd., to establish “Mini Integrated Steel Plant with 10 MW Captive power Plant” Instead of “Mini Integrated Steel Plant with 10 MW Co-Gen Plant.

Read :-
1. Government Order No. CI 72 SPI 2008, dated 29-04-2008
2. Proceedings of the 20th State High Level Clearance Committee (SHLCC) meeting held on 05-01-2010.

Government is pleased to make the amendment to the Govt. Order No. CI 72 SPI 2008, dated 29-04-2008 and approve the project proposal of M/s. Dhruvdesh Metasteel Pvt. Ltd., to establish “Mini Integrated Steel Plant with 10 MW Captive Power Plant” instead of “Mini Integrated Steel Plant with 10 MW Co-Generation Plant”

It is also recommended to Deputy Commissioner, Koppal to permit for purchase of 5 acres of land at sy no. 86/1, Kunikere Village, Koppal District U/s, 109 of KLR Act and conversion of the same for industrial use.

By Order and in the name of the Governor of Karnataka
(**Aparna Pavate**)
Desk Officer (Technical Cell)
Commerce and Industries Department

P.R. 525

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಎ. ಲೋಕೇಶ್, ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರಿಗೆ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಆದೇಶ ಸಂ. ಎಫ್‌ಡಿ 31 ಎಸ್‌ಆರ್‌ಪಿ 2007, (X) ದಿನಾಂಕ 14–08–2008.
2. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ2/88/2009–10, ದಿನಾಂಕ 22–09–2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ವೇತನ ಶ್ರೇಣಿಯ 'ಎ' ಗುಂಪಿನ ಅಧಿಕಾರಿಗಳಿಗೆ ರೂ.18,150–26,925 ರಿಂದ 19,050–27,600ರಲ್ಲಿ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ಕೆಲವು ನಿಬಂಧನೆಗೊಳಪಟ್ಟಂತೆ ಮಂಜೂರು ಮಾಡಲು ಆದೇಶಿಸಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ಎ. ಲೋಕೇಶ್, ಉಪ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಪ್ರತಿ ನಿಯೋಜನೆ ಮೇರೆಗೆ ಮಾನ್ಯ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿ, ಇವರು ದಿನಾಂಕ 20–09–2001 ರಿಂದ ಉಪ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 31 ಎಸ್‌ಆರ್‌ಪಿ

2007, (X) ದಿನಾಂಕ 14-08-2008ರ ಅನ್ವಯ ಆಯ್ಕೆ ಕಾಲಿಕ ವೇತನ ಶ್ರೇಣಿ ಪಡೆಯಲು ಅರ್ಹರಾಗಿರುತ್ತಾರೆಂದು ಸದರಿ ಅಧಿಕಾರಿಗಳ ಐದು ವರ್ಷದ ಕಾರ್ಯನಿರ್ವಹಣ ಪ್ರತಿಗಳನ್ನು ಸರ್ಕಾರಕ್ಕೆ ಸಲ್ಲಿಸಿ ಇವರ ವಿರುದ್ಧ ಇಲಾಖೆಯಲ್ಲಿ ಯಾವುದೇ ವಿಚಾರಣೆ/ಕ್ರಿಮಿನಲ್ ಮೊಕದ್ದಮೆ ಬಾಕಿಯಿರುವುದಿಲ್ಲವೆಂದು ಸದರಿ ಅಧಿಕಾರಿಗೆ ವೇತನ ಶ್ರೇಣಿ ರೂ. 18,150-26925 ರಿಂದ ರೂ. 19,050-27,600ರಲ್ಲಿ ಆಯ್ಕೆ ಕಾಲಿಕ ವೇತನ ಶ್ರೇಣಿಯನ್ನು ಮಂಜೂರು ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಈ ಅಧಿಕಾರಿಯು ಕರ್ನಾಟಕ ಲೋಕಸೇವಾ ಆಯೋಗದಿಂದ ಸಹಾಯಕ ನಿರ್ದೇಶಕರಾಗಿ ನೇರ ನೇಮಕಗೊಂಡಿದ್ದು, ದಿನಾಂಕ 20-09-2001 ರಿಂದ ಉಪ ನಿರ್ದೇಶಕರಾಗಿ ಬಡ್ತಿ ಹೊಂದಿರುತ್ತಾರೆ. ಈ ಹುದ್ದೆಯಲ್ಲಿ ಸುಮಾರು 8 ವರ್ಷಗಳ ಸೇವೆಯನ್ನು ಪೂರೈಸಿರುತ್ತಾರೆ. ಉಪ ನಿರ್ದೇಶಕರ ಹುದ್ದೆಯು ಆಯ್ಕೆ ದರ್ಜೆಯ ಹುದ್ದೆಯಾಗಿರುವುದಿಲ್ಲ. ಎರಡನೆಯದಾಗಿ ಈ ಅಧಿಕಾರಿಯು ತೃಪ್ತಿಕರ ಸೇವಾ ದಾಖಲೆಗಳನ್ನು ಹೊಂದಿರುವ ಬಗ್ಗೆ ಹಾಗೂ ನೇಮಕಾತಿ ನಿಯಮಗಳಲ್ಲಿ ಪದೋನ್ನತಿಗಾಗಿ ನಿಗದಿಪಡಿಸಿರುವ ಅರ್ಹತೆಯನ್ನು ಹೊಂದಿರುವ ಬಗ್ಗೆ ಪರಿಶೀಲಿಸಲಾಗಿದೆ.

ಮೇಲಿನ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಹಾಗೂ ಮೇಲೆ ಕ್ರಮ ಸಂಖ್ಯೆ 1 ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿನಂತೆ ಈ ಅಧಿಕಾರಿಯು ರೂ 18,150-26,925 ರಿಂದ ರೂ. 19,050-27,600ರ ಆಯ್ಕೆ ಕಾಲಿಕ ವೇತನ ಶ್ರೇಣಿಯ ಮಂಜೂರಾತಿ ಪಡೆಯಲು ಅರ್ಹರಾಗಿರುತ್ತಾರೆಂದು ಪರಿಗಣಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 140 ಕೈಸೇವಿ 2009, ಬೆಂಗಳೂರು, ದಿನಾಂಕ:05-10-2009

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಮೂಹ 'ಎ' ಗುಂಪಿನ ವೇತನ ಶ್ರೇಣಿ ರೂ. 18,150-26,925 ವೇತನ ಶ್ರೇಣಿಯ ಉಪ ನಿರ್ದೇಶಕರಾದ ಶ್ರೀ ಎ. ಲೋಕೇಶ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರಿಗೆ ರೂ. 19,050-27,600ನ್ನು ಮಂಜೂರು ಮಾಡಿದೆ.

ಈ ಆದೇಶದನ್ವಯ ಮಂಜೂರು ಮಾಡಲಾಗಿರುವ ಆಯ್ಕೆ ದರ್ಜೆಯ ವೇತನ ಶ್ರೇಣಿಯಲ್ಲಿ ಈ ಅಧಿಕಾರಿಯ ವೇತನವನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 42(ಬಿ)ರಲ್ಲಿ ಕಲ್ಪಿಸಿರುವ ಅವಕಾಶಗಳನ್ವಯ ನಿಗದಿಪಡಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 31 ಎಸ್‌ಆರ್‌ಪಿ 2007, (X)ರ ದಿನಾಂಕ 14-08-2008ರಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಪ್ರತ್ಯಾಯೋಜಿಸಲಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.948

ಬಿ.ಸಿ. ಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ,
(ಸೇವೆಗಳು)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ಸೇರ್ಪಡೆ ಆದೇಶ

ಸಂಖ್ಯೆ: ವಾಕೈ 140 ಕೈಸೇವಿ 2009 ಬೆಂಗಳೂರು, ದಿನಾಂಕ: 05-01-2010

ಸರ್ಕಾರದ ಆದೇಶ ಸಂಖ್ಯೆ: ವಾಕೈ 140 ಕೈಸೇವಿ 2009, ಬೆಂಗಳೂರು, ದಿನಾಂಕ 05-10-2009ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಸಮೂಹ 'ಎ' ಗುಂಪಿನ ವೇತನ ಶ್ರೇಣಿ ರೂ. 18,150-26,925 ವೇತನ ಶ್ರೇಣಿಯ ಉಪ ನಿರ್ದೇಶಕರಾದ ಶ್ರೀ ಎ. ಲೋಕೇಶ್, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಇವರಿಗೆ ಎಂಬುವುದರ ಮುಂದೆ "ದಿ:20-09-2009ರಂದು ಆಯ್ಕೆ ಕಾಲಿಕ ವೇತನ ಶ್ರೇಣಿಗೆ ಅರ್ಹರಾಗಿದ್ದಾರೆ" ಎಂಬುವುದನ್ನು ಸೇರ್ಪಡಿಸಿಕೊಂಡು ರೂ 19,050-27,600ನ್ನು ಮಂಜೂರು ಮಾಡಿದೆ ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ.ಸಿ. ಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು)